ಸಾಹಿತ್ಯ ದಾಸೋಹ – ೭೭೭

ಸಂಚಿಕೆ 46 – ಮಾರ್ಚ್ 2024

10.02.2024ರ ದಾಸೋಹದ ಬರಹಗಳ ಸಂಕಲನ



ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ

ನೋಡಿಯೋ ಸಾಹಿತ್ಯ ವೇದಿಕೆ

ಪುಟ ತೆರೆಯುವ ಮುನ್ನ . . .

ಆತ್ಮೀಯರೆ,

10, ಫೆಬ್ರವರಿ 2024ರಂದು ನಡೆದ 'ಸಾಹಿತ್ಯ ದಾಸೋಹ-222'ರ ಸಂಚಿಕೆಯನ್ನು ಅರ್ಪಿಸುತ್ತಿದ್ದೇವೆ. ಫೆಬ್ರವರಿಯಲ್ಲಿ ನಡೆದ 'ತಿಂಗಳ ಬೆಳಕು' ಕಾರ್ಯಕ್ರಮದ ವರದಿ ಹಾಗೂ 'ಕವಿ ಮನ' ಅಂಕಣದಲ್ಲಿ ಮೂಡಿಬಂದ ಕವನಗಳೂ ಈ ಸಂಚಿಕೆಯಲ್ಲಿವೆ.

ನಮ್ಮ ವೇದಿಕೆಯ 2ನೆಯ 'ತಿಂಗಳ ಬೆಳಕು' ಕಾರ್ಯಕ್ರಮದಲ್ಲಿ 25.02.2024ರಂದು 'ಸಂಪ್ರದಾಯದ ಹಾಡುಗಳು' ಕುರಿತು ಶ್ರೀ ಕೆ.ಆರ್.ಎಸ್. ಮೂರ್ತಿಯವರ ಉಪನ್ಯಾಸ ಹಾಗೂ ವಿದುಷಿ ಶ್ರೀಮತಿ ಗೀತಾ ಬಾಲಸುಬ್ರಹ್ಮಣ್ಯಂ ಅವರಿಂದ ಆಯ್ದ ಹಾಡುಗಳ ಗಾಯನವನ್ನು ಏರ್ಪಡಿಸಲಾಗಿತ್ತು.

ನಮ್ಮ ಸಾಹಿತ್ಯ ದಾಸೋಹದಿಂದ ಪ್ರೇರಿತರಾದ ಶ್ರೀ ಆನಂದ್ ಅವರು ನವೆಂಬರ್ 2015ರಲ್ಲಿ ಮೈಸೂರಿನಲ್ಲಿ ಪ್ರಥಮ ಸಾಹಿತ್ಯ ದಾಸೋಹವನ್ನು ಆಯೋಜಿಸಿ, ನಂತರ ಪ್ರತಿ ತಿಂಗಳೂ ಮುನ್ನಡೆಸಿ, ಇತ್ತೀಚೆಗೆ 18, ಫೆಬ್ರವರಿ 2024ರಂದು ಮೈಸೂರಿನಲ್ಲಿ ತಮ್ಮ 100ನೆಯ ದಾಸೋಹದ 'ಶತಕೋತ್ಸವ ಸಮಾರಂಭ'ವನ್ನು ಅದ್ದೂರಿಯಾಗಿ ಆಚರಿಸಿದರು. ಮೈಸೂರು ದಾಸೋಹದ ರೂವಾರಿಗಳಾದ ಶ್ರೀಮತಿ ಪದ್ಮಾ ಮತ್ತು ಶ್ರೀ ಆನಂದ್ ಅವರಿಗೆ ನಮ್ಮ ಅಭಿನಂದನೆಗಳು. ಮೈಸೂರು ಸಾಹಿತ್ಯ ದಾಸೋಹ ಕುರಿತ ಲೇಖನ ಹಾಗೂ ಶತಕೋತ್ಸವ ಸಮಾರಂಭದ ವರದಿಯನ್ನೂ ಈ ಸಂಚಿಕೆಯಲ್ಲಿ ನೀಡಲಾಗಿದೆ.

ಡಾ.ಸತ್ಯವತಿ ಮೂರ್ತಿಯವರು ನಮ್ಮ 222ನೆಯ ಸಾಹಿತ್ಯ ದಾಸೋಹದ ಅಧ್ಯಕ್ಷತೆ ವಹಿಸಿ, ದಾಸೋಹದಲ್ಲಿ ಪ್ರಸ್ತುತಿಪಡಿಸಿದ ಎಲ್ಲಾ ಬರಹಗಳನ್ನೂ ವಿಶ್ಲೇಷಿಸಿ ದಾಖಲಿಸಿದ್ದಾರೆ. ಅವರಿಗೂ, ದಾಸೋಹದಲ್ಲಿ ಭಾಗವಹಿಸಿದ ಎಲ್ಲಾ ದಾಸೋಹಿಗಳಿಗೂ, ವೀಕ್ಷಕರಿಗೂ ಮತ್ತು ಕಾರ್ಯಕ್ರಮ ನಿರ್ವಹಣೆಯಲ್ಲಿ ಹಾಗೂ ಈ ಸಂಚಿಕೆಯನ್ನು ರೂಪಿಸುವಲ್ಲಿ ಸಹಕರಿಸಿದ ಎಲ್ಲರಿಗೂ ವಂದನೆಗಳು.

ಸಂಚಾಲಕ ಸಮಿತಿ
ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ, ಬೆಂಗಳೂರು

09.03.2024

ದಾಸೋಹದ ಪುಟಗಳಲ್ಲಿ

ಮುಖಚಿತ್ರ: ಶ್ರೀ ವಿದ್ಯಾಶಂಕರ ದೇವಾಲಯ, ಶೃಂಗೇರಿ (ಚಿತ್ರ ಕೃಪೆ: ಅಂತರ್ಜಾಲ)

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ವೇದಿಕೆ

ಸಾಹಿತ್ಯ ದಾಸೋಹ – 222

ಕಾರ್ಯಕ್ರಮ ವರದಿ – ರಾಧಿಕಾ ವಿ. ಗುಜ್ಜರ್

10ನೆಯ ಫೆಬ್ರವರಿ 2024ರಂದು ಇಳ ಮಧ್ಯಾಹ್ನ 3.40ಕ್ಕೆ ಸರಿಯಾಗಿ ನೋಡಿಯೋ ಸಾಹಿತ್ಯ ದಾಸೋಹವು ಆರಂಭವಾಯಿತು. ಇದು ನಮ್ಮ ಅಂತರ್ಜಾಲ ವೇದಿಕೆ, 'ನೋಡಿಯೋ ಸಾಹಿತ್ಯ ದಾಸೋಹ' ವೇದಿಕೆಯಲ್ಲಿ ನಡೆಯುತ್ತಿರುವ 96ನೆಯ ಕಾರ್ಯಕ್ರಮ.

222ನೆಯ ದಾಸೋಹದ ಅಧ್ಯಕ್ಷರಾದ ಶ್ರೀಮತಿ ಡಾ.ಸತ್ಯವತಿ ಮೂರ್ತಿ ಅವರನ್ನು ಅಭಿನಂದಿಸುವ ಮೂಲಕ ಶ್ರೀ.ಕೆ.ಎಸ್.ಮಹಾಬಲ ಅವರು ಕಾರ್ಯಕ್ರಮದ ಸಾರಥ್ಯ ವಹಿಸಿದರು. ಪ್ರಥಮವಾಗಿ ಶ್ರೀಮತಿ ಗಿರಿಜಾ ರಾಜ್ ಅವರು ತಮ್ಮ ಎಂದಿನ ಸುಲಲಿತ ಶೈಲಿಯ ಮಧುರ ವಾಣಿಯಲ್ಲಿ ಸಭೆಯ ಸ್ವಾಗತ ನೆರವೇರಿಸಿ, ಅಧ್ಯಕ್ಷರ ಪರಿಚಯ ನೀಡಿದರು.

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ. ಬೆಂ.ಶ್ರೀ.ರವೀಂದ್ರ ಅವರು ಪ್ರಾಸ್ತಾವಿಕ ಮಾತುಗಳನ್ನಾಡಿ, ಸಾಹಿತ್ಯ ದಾಸೋಹದ ಅಧ್ಯಕ್ಷತೆ ವಹಿಸಿರುವ ಡಾ.ಸತ್ಯವತಿ ಮೂರ್ತಿ ಅವರು ವಿದೇಶದಿಂದಲೇ ಸಭೆಗೆ ಲಾಗ್ ಇನ್ ಆಗಿ, ದಾಸೋಹದಲ್ಲಿ ಭಾಗವಹಿಸುವುದರ ಮೂಲಕ ತಮ್ಮ ಕನ್ನಡ ಪ್ರೇಮ ಮೆರೆಯುವ ನಡೆಯನ್ನು ಶ್ಲಾಘಿಸಿದರು. ಈ ಹಿಂದೆ ವಿವಿಧ ದಾಸೋಹಿಗಳು ವಿದೇಶದಿಂದಲೇ ದಾಸೋಹದಲ್ಲಿ ಭಾಗವಹಿಸಿದ ಉದಾಹರಣೆಗಳಿದ್ದವು. ಆದರೆ ವಿದೇಶದಲ್ಲಿ ಕುಳಿತೇ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದು ಇದೇ ಮೊದಲ ಬಾರಿಯಾಗಿದ್ದು, ಇದೊಂದು ಅಪೂರ್ವ ಅಪರೂಪದ ದಾಖಲೆಯಾಗಿದೆ ಎಂದರು.



ಈಗಾಗಲೇ ಸುಮಾರು ಎಂಟು ವರ್ಷ ಗಳಿಂದಲೂ, ವೇದಿಕೆಯಲ್ಲಿ 'ಕವಿಮನ' ಎಂಬ ಅಂಕಣವು ವಾರದ ವಿಶೇಷ ಚಟುವಟಿಕೆಯಾಗಿ ನಡೆದು ಬರುತ್ತಿದೆ. ಕಳೆದ ಐದು ವರ್ಷಗಳಿಂದ ಶ್ರೀ. ಹು.ವಾ.ಶ್ರೀಪ್ರಕಾಶ ಅವರ ಸಾರಥ್ಯದಲ್ಲಿ ಪ್ರತಿ ವಾರವೂ ನಡೆಯುತ್ತಿರುವ ಈ ಅಂಕಣವು ವೇದಿಕೆಯ ಸದಸ್ಯರ ಸ್ವರಚಿತ ಕವನಗಳ ಓದು ಹಾಗೂ ಕವನದ ಬಗ್ಗೆ ವಿಮರ್ಶೆ, ಸ್ಪಂದನೆಗಾಗಿಯೇ ರೂಪಿಸಲ್ಪಟ್ಟಿದ್ದು, ಹೆಚ್ಚಿನ

ಸಂಖ್ಯೆಯಲ್ಲಿ ಕವಿ ಮನದಲ್ಲಿ ಮೂಡಿಬರುವ ಕವನದ ಬಗ್ಗೆ ಸದಸ್ಯರು ತಮ್ಮ ಅನಿಸಿಕೆಗಳನ್ನು ದಾಖಲಿಸಲು ಮತ್ತು ಆ ಮೂಲಕ ಹೊಸ ಪ್ರಯತ್ನಗಳಿಗೆ ಪ್ರೋತ್ಸಾಹಿಸುವುದು ಅಗತ್ಯ. ಈ ಬಾರಿಯಿಂದ 'ಕವಿ ಮನ'ದಲ್ಲಿ ಪ್ರಕಟವಾಗುವ ಕವನಗಳನ್ನು 'ಸಾಹಿತ್ಯ ದಾಸೋಹ' ಮಾಸಿಕ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು ಎಂದೂ ಶ್ರೀ ರವೀಂದ್ರ ಅವರು ತಿಳಿಸಿದರು.

ವೇದಿಕೆಯ ಸದಸ್ಯರಾಗಿದ್ದು, ಮೈಸೂರಿನಲ್ಲಿ ನೆಲೆಸಿರುವ ಶ್ರೀ ಎಂ.ಆರ್.ಆನಂದ ಅವರು, ನಮ್ಮ ಸಾಹಿತ್ಯ ದಾಸೋಹದ ಮಾದರಿಯಲ್ಲಿಯೇ ಮೈಸೂರಿನಲ್ಲಿ ಸಾಹಿತ್ಯ ದಾಸೋಹವನ್ನು ನಿರಂತರವಾಗಿ ನಡೆಸುತ್ತ ಬಂದಿದ್ದು, ಅದು ಈಗ ಶತಕ ತಲುಪಿದೆ. 18.02.2024ರಂದು ಮೈಸೂರಿನಲ್ಲಿ ನಡೆಯಲಿರುವ 100ನೆಯ ಸಾಹಿತ್ಯ ದಾಸೋಹದ ಸಂದರ್ಭದಲ್ಲಿ ಶ್ರೀ ಆನಂದ ಮತ್ತು ಅವರ ತಂಡವನ್ನು ವೇದಿಕೆಯ ಪರವಾಗಿ ಶ್ರೀ ರವೀಂದ್ರ ಅವರು ಅಭಿನಂದಿಸಿದರು.

ಪ್ರಾಸ್ತಾವಿಕ ನುಡಿಗಳ ನಂತರ ಶ್ರೀ ಶೃಂಗೇಶ್ವರ ಶರ್ಮ ಅವರು ಜನವರಿ 2024ರ ಸಾಹಿತ್ಯ ದಾಸೋಹದ ಪಿಡಿಎಫ್ ರೂಪದ ವಿದ್ಯುನ್ಮಾನ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಪತ್ರಿಕೆಯು ಅಯೋಧ್ಯೆಯ ಶ್ರೀರಾಮಲಲ್ಲಾ ಹಾಗೂ ಶ್ರೀರಾಮ ಮಂದಿರದ ಚಿತ್ರದ ಮುಖಪುಟ ಹೊಂದಿದ್ದು, ಇದು ಭಾರತದ ಐತಿಹಾಸಿಕ ಘಟನೆಯಾದ ಶ್ರೀರಾಮ ಮಂದಿರದ ಉದ್ಘಾಟನೆಯ ಸ್ಮರಣೆಗಾಗಿ ಎಂದು ತಿಳಿಸಿದರು. ಸಂಚಿಕೆಯಲ್ಲಿ ಇನ್ನುಮುಂದೆ ವೇದಿಕೆಯ ಇನ್ನೊಂದು ನಿಯಮಿತ ಕಾರ್ಯಕ್ರಮವಾದ ತಿಂಗಳ ಬೆಳಕು ಸಭೆಯ ವರದಿ ಹಾಗೂ ಪ್ರತೀ ವಾರದ ಕವಿಮನ ಅಂಕಣದ ಕವನಗಳು ಸೇರ್ಪಡೆಯಾಗುತ್ತವೆ ಎಂದು ಮಾಹಿತಿ ನೀಡಿದರು.

ತದನಂತರ ಸಾಹಿತ್ಯ ದಾಸೋಹಕ್ಕಾಗಿ ಹೆಸರು ನೋಂದಾಯಿಸಿದ 26 ಲೇಖಕರ ಪ್ರಸ್ತುತಿಗಳು ಆರಂಭವಾದವು. ಅಷ್ಟೂ ಪ್ರಸ್ತುತಿಗಳು ಮುಗಿದ ನಂತರ ಸಭೆಯ ಅಧ್ಯಕ್ಷರಾದ ಶ್ರೀಮತಿ ಡಾ.ಸತ್ಯವತಿ ಮೂರ್ತಿ ಅವರು ತಮ್ಮ ಪ್ರತಿಯೊಂದು ಬರಹಗಳ ಬಗ್ಗೆಯೂ ಮೌಲಿಕ ಸ್ಪಂದನೆ ನೀಡಿದರಲ್ಲದೆ, ತಮ್ಮ ಒಂದು ಕವನವನ್ನೂ ಪ್ರಸ್ತುತಪಡಿಸಿದರು. ಪ್ರತಿ ಬರಹವನ್ನೂ ಬಹಳ ಆಪ್ತವಾಗಿ ಓದಿ, ಅಭ್ಯಸಿಸಿ, ಓದಿದ ಲೇಖಕರ ಭಾವಗಳನ್ನು ತಡವಿದರು ಎನ್ನಬೇಕು. ಲೇಖನಗಳ ಪ್ರಸ್ತುತಿಯಲ್ಲಿ ಈ ಬಾರಿ ಮಹಿಳೆಯರ ಬಹುಮತವಿರುವುದನ್ನು ಗಮನಕ್ಕೆ ತಂದರು. ಸಾಹಿತ್ಯ ದಾಸೋಹವು ಸಾಮಾನ್ಯವಾಗಿ 3.30 ಗಂಟೆಗಳ ಸುದೀರ್ಘ ಅವಧಿಗೆ ನಡೆಯುವ ಕಾರಣ, ಇದನ್ನು ಎರಡು ದಿನಗಳಿಗೆ ಭಾಗ ಮಾಡುವ ಬಗ್ಗೆ ಚಿಂತಿಸಲು ಸಂಚಾಲಕ ಮಂಡಳಿಗೆ ಸಲಹೆ ನೀಡಿ, ಅವಲೋಕಿಸಲು ವಿನಂತಿಸಿದರು.

ಅಂತಿಮವಾಗಿ ಶ್ರೀ.ರವಿ ಕುಸಬಿ ಅವರು ವಂದನಾರ್ಪಣೆ ಸಲ್ಲಿಸುವ ಮೂಲಕ 3 ಗಂಟೆ 12 ನಿಮಿಷಗಳ ಕಾಲ ನಡೆದ ಸಾಹಿತ್ಯ ದಾಸೋಹಕ್ಕೆ 'ಶುಭಂ' ನುಡಿದರು.

(ಸಾಹಿತ್ಯ ದಾಸೋಹದ ಸಾರಥ್ಯ: ಶ್ರೀ. ಕೆ.ಎನ್.ಮಹಾಬಲ, ಸಾಹಿತ್ಯ ದಾಸೋಹದ ವಿ-ಸಂಚಿಕೆ ಪಿಡಿಎಫ್: ಶ್ರೀ. ಶೃಂಗೇಶ್ವರ ಶರ್ಮ, ಗೂಗಲ್ ಮೀಟ್ ಆತಿಥ್ಯ: ಶ್ರೀ ರಾಜನ್, ವಿಡಿಯೋ ರೆಕಾರ್ಡಿಂಗ್: ಶ್ರೀಮತಿ.ರೇಣುಕಾ ದೇಸಾಯಿ)

ಪೂರ್ಣ ಪ್ರಮಾಣದ ದಾಸೋಹವನ್ನು ವೇದಿಕೆಯ ಯುಟ್ಯೂಬ್‌ನಲ್ಲಿಯೂ ವೀಕ್ಷಿಸಬಹುದು.

***

ತಿಂಗಳ ಬೆಳಕು - ೨

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ವೇದಿಕೆ

'ಸಂಪ್ರದಾಯದ ಹಾಡುಗಳು'

ಪ್ರಸ್ತುತಿ:
ಶ್ರೀ ಕೆ.ಆರ್.ಎಸ್. ಮೂರ್ತಿ, ಸಂಗೀತ ವಿದುಷಿ ಶ್ರೀಮತಿ ಗೀತಾ ಬಾಲಸುಬ್ರಹ್ಮಣ್ಯ

ಕಾರ್ಯಕ್ರಮ ವರದಿ: ಹು.ವಾ. ಶ್ರೀಪ್ರಕಾಶ್

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ಎರಡನೇ 'ತಿಂಗಳ ಬೆಳಕು' ಕಾರ್ಯಕ್ರಮ 25ನೆಯ ಫೆಬ್ರವರಿ 2024ರಂದು ಭಾನುವಾರ ಸಂಜೆ 5 ಗಂಟೆಗೆ ಅಂತರ್ಜಾಲ ಮುಖೇನ ನೋಡಿಯೋ ಸಾಹಿತ್ಯ ದಾಸೋಹ ವೇದಿಕೆಯಲ್ಲಿ ನಡೆಯಿತು. 'ಸಂಪ್ರದಾಯದ ಹಾಡುಗಳು' ಕುರಿತ ಉಪನ್ಯಾಸ ಹಾಗೂ ಪ್ರಾತ್ಯಕ್ಷಿಕೆ ಯನ್ನು ಶ್ರೀ ಕೆ.ಆರ್.ಎಸ್.ಮೂರ್ತಿಯವರು ಹಾಗೂ ಗಾಯನವನ್ನು ಅವರ ಸಹೋದರಿ ವಿದುಷಿ ಶ್ರೀಮತಿ ಗೀತಾ ಬಾಲಸುಬ್ರಹ್ಮಣ್ಯರವರು ನಡೆಸಿಕೊಟ್ಟರು.

ಶ್ರೀ ರಂಗರಾಜನ್ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿ ಎಲ್ಲರನ್ನೂ ಸ್ವಾಗತಿಸಿದರು. ಶ್ರೀ ಹು.ವಾ.ಶ್ರೀಪ್ರಕಾಶ್ ರವರು ಶ್ರೀ ಕೆ.ಆರ್.ಎಸ್.ಮೂರ್ತಿ ಹಾಗೂ ವಿದುಷಿ ಶ್ರೀಮತಿ ಗೀತಾ ಬಾಲಸುಬ್ರಹ್ಮಣ್ಯರನ್ನು ಪರಿಚಯಿಸಿದರು.



ಶ್ರೀ ಕೆ.ಆರ್.ಎಸ್. ಮೂರ್ತಿಯವರು ತಮ್ಮ ಉಪನ್ಯಾಸದಲ್ಲಿ ಸಂಪ್ರದಾಯದ ಹಾಡುಗಳ ಹಿನ್ನೆಲೆ ಮತ್ತು ಚರಿತ್ರೆಯ ಬಗ್ಗೆ ವಿವರಿಸಿದರು.

ಸಂಪ್ರದಾಯದ ಹಾಡುಗಳು ಒಂದು ಸಮೃದ್ಧ ಸಾಂಸ್ಕೃತಿಕ ಪ್ರಕಾರವಾಗಿದ್ದು, ಇವು ಅಕ್ಷರ, ವಿದ್ಯೆ ಇಲ್ಲದಿದ್ದರೂ ಆಧ್ಯಾತ್ಮ ವಿದ್ಯೆಯಲ್ಲಿ ಆಸಕ್ತಿ ಉಳ್ಳವರಾಗಿ ಆರ್ಷೇಯ ಸಂಸ್ಕೃತಿಯ ಸಾರ ಸರ್ವಸ್ವವವನ್ನು ಹಾಡುಗಳ ಮೂಲಕ ಉಳಿಸಿ, ಬೆಳೆಸಿಕೊಂಡು ಬಂದ ನಮ್ಮ ಪೂರ್ವಿಕರ ಹೃದಯ ಸಂಪುಟವೇ ಒಂದು ಅನನ್ಯ ಸಾಹಿತ್ಯ ಭಂಡಾರ ಎನ್ನಬಹುದು.

ಸಂಪ್ರದಾಯದ ಹಾಡುಗಳು ತಲೆತಲಾಂತರದಿಂದ ಬಂದಿವೆ. Poetry is overflow of thoughts, feelings and emotions. ಎಂದು ಈ ಪ್ರಕಾರದ ಕವಿತೆ, ಗೀತೆ ಮತ್ತು ಸಂಗೀತದ ಹುಟ್ಟಿನ ಬಗ್ಗೆ ತಿಳಿಸಿ, ಕವಿತೆಗೆ ಭಾವತುಂಬಿ ಹಾಡಿ ಜೀವ ಕೊಡಬಲ್ಲ ಗಾಯನದ ಕಲೆಯೂ ಬಹಳ ಮುಖ್ಯ ಎಂದರು

ಪರಿಚಯ

ಶ್ರೀ ಕೆ.ಆರ್.ಎಸ್. ಮೂರ್ತಿ

ಶ್ರೀ ಕೆ.ಆರ್.ಎಸ್.ಮೂರ್ತಿಯವರ ಹುಟ್ಟೂರು ಹಾಸನ ಜಿಲ್ಲೆಯ ಅರಸೀಕೆರೆ. ಬಾಲ್ಯದಲ್ಲಿ ಗೊರೂರು ಮತ್ತು ಹಾಸನದಲ್ಲಿ ವಿದ್ಯಾಭ್ಯಾಸ. ಹಾಸನದ ಮಲೆನಾಡು ಇಂಜಿನಿಯರಿಂಗ್ ಕಾಲೇಜಿನಲ್ಲಿ ಎಲೆಕ್ಟ್ರಾನಿಕ್ಸ್ ಪದವಿ. 1975ರಲ್ಲಿ ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಎಂ.ಟೆಕ್–ಕಂಪ್ಯೂಟರ್ ಸೈನ್ಸ್ ಸ್ನಾತಕೋತ್ತರ ಪದವಿ. ಬೆಂಗಳೂರಿನ ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್‌ನಲ್ಲಿ ಉದ್ಯೋಗ. ಅಲ್ಲಿ ಮುಖ್ಯ ಇಂಜಿನಿಯರ್ ಆಗಿ ಕಾರ್ಯ ನಿರ್ವಹಣೆಯ ನಂತರ ಎರಡು ವರ್ಷ ಕಾಲ ಜಪಾನ್ ಸರಕಾರದ ಸ್ಕಾಲರ್‌ಶಿಪ್ ನೊಂದಿಗೆ ಉನ್ನತ ಸಂಶೋಧನಾ ಪದವಿ.

ಹನ್ನೆರಡು ವರ್ಷ ಕಾಲ ಅನಿವಾಸಿ ಭಾರತೀಯರಾಗಿ ಸಿಂಗಪೂರ್‌ನ ನ್ಯಾಷನಲ್ ಯೂನಿವರ್ಸಿಟಿ ಆಫ್ ಸಿಂಗಪೂರ್ ಮತ್ತು ನಾನ್ಯಾಂಗ್ ಟೆಕ್ನೋಲಾಜಿಕಲ್ ಯೂನಿವರ್ಸಿಟಿಗಳಲ್ಲಿ ಸಾಫ್ಟ್‌ವೇರ್ ಇಂಜಿನಿಯರಿಂಗ್ ವಿಭಾಗದ ಮುಖ್ಯ ಪ್ರಾಚಾರ್ಯರಾಗಿ ಹಾಗೂ ತಾಂತ್ರಿಕ ನಿರ್ದೇಶಕರಾಗಿಯೂ ಸೇವೆ. ಬೆಂಗಳೂರಿಗೆ ಹಿಂತಿರುಗಿದ ನಂತರ ಅನೇಕ ಮಾಹಿತಿ ತಂತ್ರಜ್ಞಾನ ಸಂಸ್ಥೆಗಳ ಉನ್ನತ ಹುದ್ದೆಗಳಲ್ಲಿ ಸೇವೆ. 2016ರಲ್ಲಿ ಸ್ವಯಂ ನಿವೃತ್ತಿ.

ಶ್ರೀ ಕೆ.ಆರ್.ಎಸ್.ಮೂರ್ತಿಯವರದು ಸಂಗೀತ ಮತ್ತು ಹರಿಕಥೆಯಲ್ಲಿ ಪ್ರಸಿದ್ಧಿಪಡೆದ ವಂಶ. ಇವರ ತಾಯಿ ಶ್ರೀಮತಿ ವಾಗೀಶ್ವರೀ ಶಾಸ್ತ್ರಿ ಅವರು ಸಂಪ್ರದಾಯದ ಹಾಡುಗಳ ಗಣಿ ಎಂದೇ ಪ್ರಸಿದ್ಧರಾದವರು. ಹಾಗಾಗಿ ಮೂರ್ತಿಯವರಿಗೆ ಮೊದಲಿನಿಂದಲೂ ನಾಟಕ, ಸಂಗೀತ ಮತ್ತು ಸಾಹಿತ್ಯದಲ್ಲಿ ಒಲವು. ಇವರ ಹಲವು ಕವನಗಳು ಕಸ್ತೂರಿ, ಮಯೂರ ಮುಂತಾದ ಪತ್ರಿಕೆಗಳಲ್ಲೂ ಪ್ರಕಟವಾಗಿದ್ದು, ಇವರು ಖೇಚರ ವಿಹಾರ, ನೀಲಗಗನ ಮತ್ತು ಮಿನುಗುತಿದೆ ನಕ್ಷತ್ರ ಎಂಬ ಮೂರು ಕವನ ಸಂಕಲನಗಳನ್ನೂ ಹೊರತಂದಿದ್ದಾರೆ. ಇವರ ಹವಳದ್ವೀಪದ ಹೊನ್ನು, ವ್ಯೋಮವಿಸ್ಮಯ ಎಂಬ ಎರಡು ಕಾದಂಬರಿಗಳು 'ತರಂಗ' ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡು ಜನಮನ್ನಣೆ ಗಳಿಸಿವೆ.

ಬಹಳ ಹಿಂದೆ ಸಮಾಜದಲ್ಲಿ ಮಹಿಳೆಯರಿಗೆ ವಿದ್ಯೆ ಕಲಿಯುವ ಹಕ್ಕು ಪುರುಷರಿಗಿದ್ದಷ್ಟೇ ಸಮಾನವಾಗಿ ಇತ್ತು. ವೇದೋಪನಿಷತ್ತುಗಳ ಕಲಿಕೆಯು ವಿದ್ಯಾರ್ಜನೆಯ ಭಾಗವಾಗಿತ್ತು. ಮಹಿಳೆಯರು ವೈಚಾರಿಕ ಚರ್ಚೆಗಳಲ್ಲಿ ಸಹ ಭಾಗವಹಿಸುತ್ತಿದ್ದರು. ನಂತರ ಶತಮಾನಗಳ ಕಾಲ ಪರಕೀಯರ ಅಕ್ರಮಣ ಸಮಾಜವನ್ನು ಬೆದರಿಸಿತು. ಹೆಣ್ಣು ಮಕ್ಕಳಿಗೆ ಶಾಲೆಯ ವಿದ್ಯಾಭ್ಯಾಸ ಕುಂಠಿತವಾಯಿತು. ಹೆಣ್ಣು ಮಕ್ಕಳು ಆಧ್ಯಾತ್ಮಿಕ ಆಸಕ್ತಿ ಬೆಳೆಸಿಕೊಂಡು ಸಂಸ್ಕೃತಿ, ಸಂಪ್ರದಾಯಗಳತ್ತ ಗಮನ ಹರಿಸಿದರು. ಸದಾಚಾರಗಳನ್ನು ಹಾಡುಗಳ ಮೂಲಕ ಕಲಿತು. ಉಳಿಸಿ ಬೆಳೆಸಿದರು. ಅದರಿಂದಾಗಿ ನಮ್ಮ ಸಮಾಜಕ್ಕೆ ಒಂದು ವಿಶಿಷ್ಟ ಸಾಹಿತ್ಯದ ಮತ್ತು ಹಾಡುಗಾರಿಕೆಯ ವಿಧಾನವೊಂದರ ಅಪೂರ್ವ ಕೊಡುಗೆ ದಕ್ಕಿದಂತಾಗಿದೆ. ಹಾಡು, ಹಸೆ ಮುಂತಾದುವು ನಮ್ಮ ಸಂಪ್ರದಾಯದ ಅವಿಭಾಜ್ಯ ಅಂಗಗಳು. ಆಯಾ ಪ್ರಾಂತ್ಯ, ಪರಿಸರದ ಸನ್ನಿವೇಶಗಳಿಗೆ ಅನುಗುಣವಾಗಿ ಹಾಡುಗಳು ಹುಟ್ಟಿಕೊಂಡವು. ಈ ಹಾಡುಗಳ ಸಾಹಿತ್ಯದಲ್ಲಿ ಭಾಷೆಯ ಬಳಕೆ ಮತ್ತು ಆಚಾರ ವಿಚಾರಗಳ ವ್ಯತ್ಯಾಸಗಳನ್ನು ಕಾಣಬಹುದು. ವಿಭಿನ್ನ ಪ್ರದೇಶಗಳಲ್ಲಿ ಹಾಡುಗಳ ಸ್ವರೂಪ ಬದಲಾಗಬಹುದು. ಉದಾಹರಣೆಗೆ ಉತ್ತರ ಕರ್ನಾಟಕದಲ್ಲಿನ ಹಾಡುಗಳ ಶೈಲಿ ದಕ್ಷಿಣ ಕರ್ನಾಟಕದಲ್ಲಿ ಹಾಡುವ ಶೈಲಿಗಳಿಗಿಂತ ವಿಭಿನ್ನವಾಗಿರುತ್ತವೆ. ಸಂಪ್ರದಾಯದ ಹಾಡುಗಳು ಬೇರೆ ರಾಜ್ಯಗಳಲ್ಲೂ ಇವೆ. ಇವನ್ನು ವಿಭಿನ್ನ ಹೆಸರುಗಳಲ್ಲಿ ಕರೆಯಲಾಗುತ್ತದೆ ಲೋಕಸಂಗೀತ್, ನಾಟು ಪಾಟ್ಟು ಇತ್ಯಾದಿ. ಇಂದು ನಾವು ಪ್ರಸ್ತುತ ಪಡಿಸುವ ಹಾಡುಗಳು ದಕ್ಷಿಣ ಕರ್ನಾಟಕದಲ್ಲಿ ಹೆಚ್ಚು ಪ್ರಚಲಿತವಿರುವಂತಹವು.

ಕನ್ನಡದಲ್ಲಿ ಅನೇಕ ರೀತಿಯ ಸಂಪ್ರದಾಯದ ಹಾಡುಗಳಿವೆ. ಇವುಗಳ ವರ್ಗೀಕರಣದ ಕೆಲಸವನ್ನು ನಮ್ಮ ತಾಯಿಯವರಾದ ಶ್ರೀ ವಾಗೀಶ್ವರಿ ಶಾಸ್ತ್ರಿಯವರು ಮಾಡಿದ್ದಾರೆ. ಮನೆಯಲ್ಲಿ ನಡೆಯುತ್ತಿದ್ದ ವ್ರತ, ನೇಮ, ಪೂಜೆ

ಪರಿಚಯ

ಶ್ರೀಮತಿ ಗೀತಾ ಬಾಲಸುಬ್ರಹ್ಮಣ್ಯ

ವಿದುಷಿ ಶ್ರೀಮತಿ ಗೀತಾ ಬಾಲಸುಬ್ರಹ್ಮಣ್ಯರವರು ಶ್ರೀ ಕೆ.ಆರ್.ಎಸ್.ಮೂರ್ತಿಯವರ ಸಹೋದರಿ. ಬಿಎಸ್‌ಸಿ ಪಧವೀದರೆ. ಎಂ.ಎ.(ಸಂಗೀತ)ದಲ್ಲಿ ಪ್ರಥಮ ಶ್ರೇಣಿ. ಹಲವಾರು ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಪ್ರಥಮ ಬಹುಮಾನ, ಕುವೆಂಪು ರಾಮಾಯಣ ದರ್ಶನ ರಾಜ್ಯ ಮಟ್ಟದ ಕಾವ್ಯ ಗಾಯನದಲ್ಲಿ ಬೆಳ್ಳಿ ಪಾರಿತೋಷಕ, ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಮಟ್ಟದ ಕಾವ್ಯವಾಚನ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ, ಗಾಯನ ಸಮಾಜದ ಸಂಗೀತ ಸ್ಪರ್ಧೆಯಲ್ಲಿ ಬಹುಮಾನವಾಗಿ ತಂಬೂರ ವಾದ್ಯ ಪಡೆದ ಹೆಮ್ಮೆ, ಆಕಾಶವಾಣಿಯಲ್ಲಿ ಸತತವಾಗಿ ಭಾವಗೀತೆ ಗಳಿಗೆ ಸ್ವರ ಸಂಯೋಜಿಸಿ ಸುಗಮ ಸಂಗೀತದಲ್ಲಿ ಬಿ ಹೈಗ್ರೇಡ್ ಕಲಾವಿದೆಯಾಗಿ ಯಶಸ್ವಿ ಕಾರ್ಯಕ್ರಮ ನೀಡಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹಲವು ಕಡೆ ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿ. ಶತಾವಧಾನಿ ಆರ್, ಗಣೇಶ್ ಅವರ ಸಂಸ್ಕೃತ ಅಷ್ಟಾವಧಾನದಲ್ಲಿ ಕಾವ್ಯ ಗಾಯನದ ಪೃಚ್ಛಕರಾಗಿಯೂ ಭಾಗವಹಿಸಿದ ಅನುಭವ.

ಅಷ್ಟೇ ಅಲ್ಲದೆ ವಿವಿಧ ಸಮಾರಂಭಗಳಿಗಾಗಿಯೂ ಹಾಡುಗಳು ಸೃಷ್ಟಿಯಾದವು. ಮದುವೆಗೆ, ಸೀಮಂತಕ್ಕೆ, ಮಗು ತೊಟ್ಟಿಲಿಗೆ ಹಾಕುವುದಕ್ಕೆ, ಮದುವೆ ಮನೆಗೆ ಕರೆದುಕೊಂಡು ಹೋಗಲು, ಮನೆ ತುಂಬಿಸಿಕೊಳ್ಳಲು, ಹೆಣ್ಣು ಕಳಿಸಿಕೊಡಲು, ಹೀಗೆ ಲೆಕ್ಕವಿಲ್ಲದಷ್ಟು ವಿಷಯ ಗಳನ್ನು ಕುರಿತ ಹಾಡುಗಳ ಸರಕು ಸಿಕ್ಕಿವೆ. ಇತಿಹಾಸದ ಹಿನ್ನೆಲೆಯಲ್ಲಿಯೂ ಹಲವು ಹಾಡುಗಳು ರಚಿತವಾಗಿವೆ. ಇದು ಮಹಿಳೆಯರ ಜೀವನದ ಉನ್ನತಿಗೆ ಕಾರಣವಾಯಿತು. ಮನದಲ್ಲಿ ಮೂಡಿದ ಸಾಹಿತ್ಯವನ್ನು ಗುನುಗುತ್ತಾ ರಚಿತವಾದ ಹಾಡುಗಳು ಕ್ರಮೇಣ ಒಬ್ಬರಿಂದ ಇನ್ನೊಬ್ಬರಿಗೆ ದಾಟಿ, ನಂತರ ಕೆಲವನ್ನು ಮಾತ್ರ ಬರೆದಿಟ್ಟಿರಬಹುದು. ಸ್ತ್ರೀಯರು ಮಾತ್ರವಲ್ಲದೆ ಅನೇಕ ಪುರುಷರೂ ಸಂಪ್ರದಾಯದ ಹಾಡುಗಳಿಗೆ ಸಾಹಿತ್ಯ ರಚಿಸಿಕೊಟ್ಟಿದ್ದಾರೆ.

ಕರ್ನಾಟಕದಲ್ಲಿ ಮೂರು ಪ್ರಮುಖ ಜನಪರ ಸಾಹಿತ್ಯ ಪ್ರವಾಹವನ್ನು ಗುರುತಿಸಬಹುದು. ಆದಿವಾಸಿ ಅಥವಾ ಬುಡಕಟ್ಟು ಜನಾಂಗಗಳ ಜನಪದ ಸಾಹಿತ್ಯ, ಪ್ರಕೃತಿ, ಪರಿಸರ, ಕೃಷಿ, ಹಬ್ಬ, ಜಾತ್ರೆ ಮುಂತಾದವುಗಳ ಕುರಿತು ಗ್ರಾಮೀಣ ಪ್ರದೇಶದ ಜನಪದ ಸಾಹಿತ್ಯ, ಸಂಸ್ಕೃತ ಭಾಷಾ ಪ್ರಭಾವ, ಪುರಾಣಗಳ ಜ್ಞಾನ ಹಾಗೂ ನಿಯಮದ ಚೌಕಟ್ಟಿನಲ್ಲಿ ಸಾಗುವ ಸಂಪ್ರದಾಯ, ಆಚರಣೆಗಳ ಪ್ರಾಧಾನ್ಯತೆ ಪಡೆದ ಜನಪದ ಸಾಹಿತ್ಯ ಇತ್ಯಾದಿ.

ಸಂಪ್ರದಾಯದ ಹಾಡುಗಳನ್ನು ಶಿಷ್ಟ ಜಾನಪದ ಎಂದು ಕರೆಯುತ್ತಾರೆ. ಸಂಪ್ರದಾಯದ ಹಾಡುಗಳು ಉತ್ತಮ ಗುಣಮಟ್ಟದ್ದಾಗಿದ್ದು, ಶಬ್ದ ಪ್ರಯೋಗದಲ್ಲಿ ಲಾಲಿತ್ಯವಿರುತ್ತದೆ ನವರಸ ಭಾವನೆಗಳನ್ನು ಸಮರ್ಥವಾಗಿ ಅಭಿವ್ಯಕ್ತಿಸುವುದನ್ನು ಕಾಣಬಹುದು. ಚಿಕ್ಕ ಚಿಕ್ಕ ಹಾಡುಗಳ ಜೊತೆಗೆ ಲಂಬ, ಅತಿಲಂಬ ಕಥನಗಳಂತಹ ರಚನೆಗಳು ಇವೆ. ಪರಂಪರಾಗತ ಧಾಟಿ, ವೈಶಿಷ್ಟ್ಯತೆಯ ಸಂಪ್ರದಾಯದ ಹಾಡುಗಳು ನಮ್ಮ ಸಮಾಜದ ಪ್ರತಿಬಿಂಬ ವಾಗಿರುವುವಲ್ಲದೆ ನಮ್ಮ ಸಮುದಾಯದ ನಡುವಳಿಕೆಗಳ ದಾಖಲೆಯೂ ಆಗಿದೆ. ಸಮಾಜಕ್ಕೆ ಹಿಡಿದ ದರ್ಪಣದಂತೆ ಇವೆ. ನಮ್ಮ ಆಚಾರ ವಿಚಾರಗಳು ಏನಿತ್ತು ಎಂಬುದನ್ನು ಸುಲಭವಾಗಿ ಈ ಹಾಡುಗಳಿಂದ ಗುರುತಿಸಬಹುದು.

ಸಂಪ್ರದಾಯದ ಹಾಡುಗಳನ್ನು ಹಾಡಲು ಹೆಚ್ಚಿನ ಪಾಂಡಿತ್ಯದ ಅಗತ್ಯವಿಲ್ಲ. ಸುಲಭವಾಗಿ ಗಮಿಸುವ (ಸುಗಮ) ಹಾಡಿನ ಪ್ರಕಾರ ಇದು. ಇಲ್ಲಿ ಭಾವಕ್ಕೆ ಕೊರತೆ ಇಲ್ಲ. ಇಂತಹ ಹಾಡುಗಳನ್ನು ಅನೇಕರು ಹಾಡುತ್ತಿದ್ದಾರೆ. ಸಂಪ್ರದಾಯದ ಹಾಡುಗಳ ಸರಳವಾದ ಸಾಹಿತ್ಯ ರೂಪದಲ್ಲಿ ರಸಭಾವ ಅರ್ಥಗಳ ಸಮ್ಮೇಳನವಿದೆ. ನಮ್ಮ ತಾಯಿಯವರು ಹೇಳುತ್ತಿದ್ದ ಸಂಪ್ರದಾಯ ಹಾಡುಗಳನ್ನು ನಮ್ಮ ಚಿಕ್ಕಪ್ಪ ತಮ್ಮ ಹರಿಕಥೆಗಳಿಗೂ ಬಳಸಿಕೊಳ್ಳುತ್ತಿದ್ದರು ಇವುಗಳನ್ನು ನಾಟಕ, ಸಿನಿಮಾಗಳಲ್ಲೂ ಅಳವಡಿಸಿಕೊಂಡ ಉದಾಹರಣೆಗಳು ಇವೆ. ಸಂಪ್ರದಾಯದ ಹಾಡುಗಳು ಎಲ್ಲ ರಂಗಗಳಲ್ಲೂ ಸ್ಫೂರ್ತಿ, ಚೇತನವನ್ನು ತುಂಬಿವೆ. ಈಗ ಸುಗಮ ಸಂಗೀತವೆಂಬ ಪ್ರಕಾರವಿದೆ. ಹಿಂದೆ ಲಘು

ಸಂಗೀತವಿತ್ತು. ಅದಕ್ಕೂ ಮೊದಲು ದೇವರನಾಮ, ವಚನಗಳು, ಭಕ್ತಿಗೀತೆಗಳು ಇದ್ದವು. ಸಂಪ್ರದಾಯದ ಹಾಡುಗಳು ಇದರ ಜೊತೆ ಜೊತೆಗೇ ಬಂದಿದ್ದು, ಇವು ಲಘು ಸಂಗೀತಕ್ಕೆ ಮೂಲವಾಗಿರಬಹುದು

ಸಂಪ್ರದಾಯದ ಹಾಡುಗಳನ್ನು ಅಕ್ಕರಾಸ್ತೆಯ ಹಾಡುಗಳು (ತೊಟ್ಟಿಲಿಗೆ ಹಾಕುವುದು, ಮದುವೆ, ಸೀಮಂತ ಇತ್ಯಾದಿ), ದೇವತಾ ಕಾರ್ಯಕ್ಕೆ ಸಂಬಂಧಪಟ್ಟ ಹಾಡುಗಳು (ವೃತಕತೆಯ ಹಾಡುಗಳು), ನಿತ್ಯ ಪಾರಾಯಣ ಹಾಡುಗಳು (ಸ್ತೋತ್ರ, ಆಧ್ಯಾತ್ಮ ಚಿಂತನೆ), ಕಥನ ಗೀತಗಳು ಹಾಗೂ ಮಕ್ಕಳ ಸಾಹಿತ್ಯ ಹೀಗೆ ವಿಂಗಡಿಸಬಹುದು.

ಸಹಸ್ರಾರು ಸಂಪ್ರದಾಯ ಹಾಡುಗಳ ಸಾಗರವೇ ಇದೆ. ಸೂಕ್ತ ದಾಖಲೆಯಿಲ್ಲದೆ ಅನೇಕ ಹಾಡುಗಳು ನಶಿಸಿಹೋಗಿವೆ. ಹೀಗಿದ್ದೂ ಸಾಕಷ್ಟು ಹಾಡುಗಳ ಮುದ್ರಣ ಮತ್ತು ಧ್ವನಿ ರೂಪದ ದಾಖಲೆಗಳು ಇಂದು ಲಭ್ಯವಿರುವುದು ನಮ್ಮ ಭಾಗ್ಯ. ಹಲವರು ಈ ಬಗ್ಗೆ ಪುಸ್ತಕಗಳನ್ನು ಹೊರತಂದಿದ್ದಾರೆ. ಸಂಪ್ರದಾಯದ ಹಾಡುಗಳ ಗಣಿ ಎಂದೇ ಪ್ರಸಿದ್ಧರಾದ ನಮ್ಮ ತಾಯಿ ಶ್ರೀಮತಿ ವಾಗೀಶ್ವರಿ ಶಾಸ್ತ್ರಿ ಅವರ 'ಹೃದಯ ಸಂಪುಟ' ಒಂದು ಅಮೋಘ ವಿಶ್ಲೇಷಣಾತ್ಮಕ ಸಂಶೋಧನಾತ್ಮಕ ಬೃಹತ್ ಗ್ರಂಥ. ಬಹುಶಃ ಇದನ್ನು ಮುದ್ರಣ ರೂಪದಲ್ಲಿ ತಂದು ಉಳಿಸದೇ ಇದ್ದರೆ ನಮ್ಮ ತಾಯಿಯ ಜೊತೆಗೇ ಅವು ಅಳಿದು ಹೋಗುತ್ತಿದ್ದವು. ಅವರ ಮಗಳು ಗಾಯನ ಕಲಾವಿದೆ ಶ್ರೀಮತಿ ಗೀತಾ ಬಾಲಸುಬ್ರಹ್ಮಣ್ಯ ಅವರ ಅನೇಕ ಸಿಡಿಗಳು ಇವೆ. ಯೂಟ್ಯೂಬ್‌ನಲ್ಲೂ ಲಭ್ಯವಿದೆ. ಇಂದು ನಮ್ಮ ಇಡೀ ಕುಟುಂಬವೇ ತಾಯಿಯವರು ಸಂಗ್ರಹಿಸಿದ ಸಂಪ್ರದಾಯದ ಹಾಡುಗಳ ರಕ್ಷಣೆ ಹಾಗೂ ಪ್ರಸರಣದಲ್ಲಿ ಪಾಲ್ಗೊಂಡಿದೆ.

ಹೆಳವನಕಟ್ಟೆ ಗಿರಿಯಮ್ಮ, ಹರಪನಹಳ್ಳಿ ಭೀಮಪ್ಪ, ಮೂಕಾಂಬಿಕೆ, ಹಾಡಿನ ನಾಗಮ್ಮ ಮತ್ತು ಅನೇಕ ಅಜ್ಞಾತರು ಸಂಪ್ರದಾಯದ ಹಾಡುಗಳನ್ನು ರಚಿಸಿದ್ದಾರೆ. ಗರಳಪುರಿ ನಂಜುಂಡ ಶಾಸ್ತ್ರಿ, ಚಂಪಕಾಪುರ ರಾಮಪ್ಪ, ಬೆಳ್ಳಾರೆ ನರಹರಿ ಶಾಸ್ತ್ರಿ ಆನವಟ್ಟಿ ರಾಮರಾಯರು ಮತ್ತಿತರ ಅಜ್ಞಾತ ಕವಿಗಳೂ ಈ ಕ್ಷೇತ್ರಕ್ಕೆ ಬಹಳಷ್ಟು ಕೊಡುಗೆ ನೀಡಿದ್ದಾರೆ. ನಮ್ಮ ತಂದೆಯವರು ಬರೆದುಕೊಟ್ಟ ಕೆಲವು ಹಾಡುಗಳನ್ನು ನಮ್ಮ ತಾಯಿಯವರು ಹಾಡುತ್ತಿದ್ದರು. ಮತ್ತಿಘಟ್ಟ ಕೃಷ್ಣಮೂರ್ತಿಗಳ ಸಂಗ್ರಹ ಪುಸ್ತಕ ಕೂಡ ಇಲ್ಲಿ ಉಲ್ಲೇಖಾರ್ಹ.

ಈ ವಿಶಿಷ್ಟ ಸಂಗೀತ ಪ್ರಕಾರದ ಉಳಿಕೆ, ಬಳಕೆಯಲ್ಲಿ ಸಂಗೀತ ಸಾಹಿತ್ಯಾಸಕ್ತರ ಪ್ರಯತ್ನ ಮತ್ತು ಪರಿಶ್ರಮಗಳು ಸಾರ್ಥಕವಾಗಲಿ ಈ ಪ್ರಕಾರದಲ್ಲಿ ಆಸಕ್ತಿಯನ್ನು ಹೆಚ್ಚು ಹೆಚ್ಚು ಜನ ಬಳಸಿಕೊಳ್ಳಲಿ ಎಂಬುದು ನಮ್ಮ ಆಶಯ ಎಂದು ಹೇಳಿ ಶ್ರೀ ಕೆ.ಆರ್.ಎಸ್. ಮೂರ್ತಿಯವರು ತಮ್ಮ ಮಾತು ಮುಗಿಸಿದರು.

ನಂತರ ಪ್ರಾತ್ಯಕ್ಷಿಕೆಯನ್ನು ವಿದುಷಿ ಶ್ರೀಮತಿ ಗೀತಾ ಬಾಲಸುಬ್ರಹ್ಮಣ್ಯ ಅವರು ಬಹಳ ಸೊಗಸಾಗಿ ನಡೆಸಿಕೊಟ್ಟರು. ಅನೇಕ ರೀತಿಯ ಹಾಡುಗಳನ್ನು ಹಾಡಿದರು. ಮಗುವಿಗೆ ಹಾಲು ಕುಡಿಸುವುದು, ಬಜೆ ಬೆಣ್ಣೆ ಇಡುವುದು, ಬಳೆ ತೊಡಿಸುವುದು, ಒಗಟು ಬಿಡಿಸುವುದು, ಹೂವು ಮೂಡಿಸುವ ಹಾಡು (ಮೂರ್ತಿಯವರ ರಚನೆ), ಹೆಣ್ಣನ್ನು ಓಲೈಸುವ ಹಾಡು, ಬೀಗರ ಕುರಿತು ಹಾಡುವ ಮದುವೆ ಮೋಜಿನ ಹಾಡು, ಆಧ್ಯಾತ್ಮಿಕ ಚಿಂತನೆ ಹಾಡು ಮುಂತಾದ ಹಲವಾರು ಗೀತೆಗಳನ್ನು ಹಾಡಿದರು

ನಂತರ ಸಂವಾದ ಕಾರ್ಯಕ್ರಮ ನಡೆಯಿತು. ಶ್ರೀಮತಿ ರೇಣುಕಾ ದೇಸಾಯಿಯವರು ವಂದನಾರ್ಪಣೆ ಮಾಡಿದರು.

ತಿಂಗಳ ಬೆಳಕು-2ರ ಸಂಪೂರ್ಣ ಕಾರ್ಯಕ್ರಮವನ್ನು ವೇದಿಕೆಯ ಯುಟ್ಯೂಬ್‌ನಲ್ಲಿ ವೀಕ್ಷಿಸಬಹುದು.

***

ಮೈಸೂರು ಸಾಹಿತ್ಯ ದಾಸೋಹ : ಶತಕದ ಸಂಭ್ರಮ

ಸಾಹಿತ್ಯ ದಾಸೋಹ ನಡೆದು ಬಂದ ದಾರಿ

– ಪದ್ಮಾ ಆನಂದ್

ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದ ಶ್ರೀ ಆನಂದ್ ಅವರು ಬೆಂಗಳೂರು ಸಾಹಿತ್ಯ ದಾಸೋಹದಲ್ಲಿ ಭಾಗವಹಿಸುತ್ತಿದ್ದರು. ಉತ್ಸಾಹಿ. ಮೊದಲಿನಿಂದಲೂ ಇದ್ದ ಬರೆಯುವ ಹವ್ಯಾಸ ಮತ್ತೆ ಚಿಗುರಿತ್ತು. ನಿವೃತ್ತಿಯಾಗಿ ಮೈಸೂರಿಗೆ ಬಂದ ಮೇಲೆ ಪ್ರತಿ ತಿಂಗಳೂ ಬೆಂಗಳೂರಿಗೆ ಬರುವುದು ಕಷ್ಟವಾಯಿತು. ಯಾಕೆ ಚಿಂತೆ ಅನ್ನುತ್ತಾ ಮೈಸೂರಿನಲ್ಲಿ ಸಾಹಿತ್ಯ ದಾಸೋಹ ಆರಂಭಿಸಿಯೇಬಿಟ್ಟರು. ಅವರ ಕ್ರಿಯಾಶೀಲ ಜೀವನ ಸಂಗಾತಿ ಪದ್ಮ ಅವರೂ ಸಾಹಿತಿಗಳು. ಈ ಸಾಹಸಕ್ಕೂ ಕೈ ಜೋಡಿಸಿದರು. ಸಮಾನ ಮನಸ್ಕರನ್ನು ಕೂಡಿಸಿ 17.11.2015ರಂದು ಮೈಸೂರಿನ ವಿವೇಕಾನಂದನಗರ ಕೇಂದ್ರ ಗ್ರಂಥಾಲಯದ ಮಹಡಿಯ ಮೇಲಿನ ಆವರಣದಲ್ಲಿ ದಾಸೋಹ ಅದ್ದೂರಿಯಾಗಿ ಶುಭಾರಂಭಗೊಂಡಿತು.

ಮೊದಲು ವಿವಿಧ ದಾಸೋಹಿಗಳ ಮನೆ ಮನೆಯಲ್ಲಿ ನಡೆದ ಸಾಹಿತ್ಯ ದಾಸೋಹಗಳು, ನಂತರದ ದಿನಗಳಲ್ಲಿ ಆನಂದರ ತಂಗಿ ಶ್ರೀಮತಿ ಪದ್ಮಾ ಅವರ ಮನೆಯಲ್ಲಿ ನಡೆಯುತ್ತಿದ್ದವು.

ಇಲ್ಲಿ ಹಲವಾರು ಪುಸ್ತಕಗಳನ್ನು ಪ್ರಕಟಿಸಿರುವ ಹಿರಿಯ ಸಾಹಿತಿಗಳೂ, ಉದಯೋನ್ಮುಖರೂ, ಮೈಸೂರು ಸಾಹಿತ್ಯ ದಾಸೋಹದಿಂದಲೇ ಬರೆಯಲು ಪ್ರಾರಂಭಿಸಿ ಪುಸ್ತಕಗಳನ್ನು ಪ್ರಕಟಿಸಿದವರೂ, ಇದ್ದಾರೆ. ಅನವರತವಾಗಿ ಈ ದಾಸೋಹದಲ್ಲಿ ಪ್ರತಿ ತಿಂಗಳೂ ಸಾಹಿತ್ಯದ ಎಲ್ಲ ಪ್ರಕಾರಗಳ ಸೃಷ್ಟಿಗಳಾಗುತ್ತಿವೆ. ಸಾಧಾರಣವಾಗಿ ತಿಂಗಳ ಸಾಹಿತ್ಯದಲ್ಲಿ 25–30 ಪ್ರಸ್ತುತಿಗಳು ಇರುತ್ತವೆ. ಅವುಗಳಲ್ಲಿ 20–25 ಹೊಸ ಬರಹಗಳೆಂಬುದು ಅತ್ಯಂತ ಹೆಮ್ಮೆಯ ವಿಚಾರ. ಅಪರೂಪಕ್ಕೊಮ್ಮೆ ಹಳೆಯ ಬರಹಗಳನ್ನು ಪ್ರಸ್ತುತಿಪಡಿಸುವುದೂ ಉಂಟು.

ಮೈಸೂರು ಸಾಹಿತ್ಯ ದಾಸೋಹದ ಜೋಳಿಗೆಯಲ್ಲಿ ಐದು ಪುಸ್ತಕ ಪ್ರಕಟಣೆಗಳಿವೆ. ಹಾಸನ, ನಂಜನಗೂಡು, ಮೇಲುಕೋಟೆ, ಸಾಹಿತಿ ಮಳಲಿ ವಸಂತಕುಮಾರ್ ಅವರ ಭೂಮಿತಾಯಿಯ ತೋಟವಾದ ನಂಜನಗೂಡು ಜಿಲ್ಲೆಯ "ಕಳಲೆ" ಗ್ರಾಮ, ಹೀಗೆ ಹಲವಾರು ಪ್ರವಾಸಿ ಸಾಹಿತ್ಯ ದಾಸೋಹಗಳ ಸಿಹಿ ನೆನಪುಗಳಿವೆ.

25ನೇ ಸಾಹಿತ್ಯ ದಾಸೋಹ: ಬೆಳ್ಳಿಹಬ್ಬದ ಸಂಭ್ರಮದಲ್ಲಿ ಎಲ್ಲ ದಾಸೋಹಿಗಳ "ಸಾಹಿತ್ಯ ಸಂಭ್ರಮ" ಕೃತಿ ಪ್ರಕಟವಾಗಿದ್ದು, ಇದನ್ನು ಕನ್ನಡದ ಪೂಜಾರಿ ಶ್ರೀ ಹಿರೇಮಗಳೂರು ಕಣ್ಣನ್ ಅವರು ಲೋಕಾರ್ಪಣೆ ಮಾಡಿದರು. ಶ್ರೀ ಕಳಲೆ ಗುರುಸ್ವಾಮಿಯವರು ಕೃತಿ ಬಗ್ಗೆ ಮಾತಾಡಿದರು. ಕಣ್ಣನ್ ಅವರೊಡನೆ ಸದಸ್ಯರುಗಳು ಭಾಗವಹಿಸಿದ್ದ "ಹರಟೆ" ಕಾರ್ಯಕ್ರಮವೂ ನಡೆಯಿತು.

50ನೇ ಸಾಹಿತ್ಯ ದಾಸೋಹದ ಸಂಭ್ರಮ: ಸುಪ್ರಸಿದ್ಧ ನಟ, ನಾಟಕಕಾರ, ಶ್ರೀ ಮಂಡ್ಯ ರಮೇಶ್ ಅವರು "ಸಾಹಿತ್ಯ ಸುವರ್ಣ" ಕೃತಿಯ ಲೋಕಾರ್ಪಣೆ ಮಾಡಿದರು. ರಾಷ್ಟ್ರಪತಿ ಅಬ್ದುಲ್ ಕಲಾಂ ಅವರ ಸಂಪರ್ಕಾಧಿಕಾರಿಯಾಗಿದ್ದ, ಲೇಖಕ ಶ್ರೀ ಜಯಪ್ರಕಾಶ್ ರಾವ್ ಪುತ್ತೂರ್ ಅವರು ಕೃತಿಯನ್ನು ಕುರಿತು ಮಾತನಾಡಿದರು.

75ರ ವೇಳೆಗೆ ಕರೋನಾ ಮಾರಿ ಕಾಲಿಟ್ಟಾಗಿತ್ತು. ಪುಸ್ತಕ ಹೊರತರಲಾಗಿಲ್ಲ. ಆದರೂ ವಾಟ್ಸಾಪ್ಪಿನಲ್ಲೇ ಎಲ್ಲ ಸದಸ್ಯರ ಪರಿಚಯ, ಸಾಧನೆ, ಪ್ರಶಸ್ತಿ, ಪುರಸ್ಕಾರಗಳ ವಿವರಗಳನ್ನು ಹಂಚಿಕೊಂಡರು. ಯಾವಾಗಲೂ ಮೈಸೂರು

ಸಾಹಿತ್ಯ ದಾಸೋಹವನ್ನು ತುಂಬು ಮನದಿಂದ ಪ್ರೋತ್ಸಾಹಿಸಿ ಅಭಿಮಾನದಿಂದ ಕಾಣುತ್ತಿದ್ದ ದಿ. ಪ್ರೊ. ಭೈರವ ಮೂರ್ತಿಯವರ ಆಶಯನುಡಿಗಳನ್ನು ರೆಕಾರ್ಡ್ ಮಾಡಿಕೊಂಡು ಸದಸ್ಯರೊಂದಿಗೆ ಹಂಚಿಕೊಂಡಿದ್ದು ವಿಶೇಷ.

ಕರೋನಾ ಸಮಯದಲ್ಲಿ ವಾಟ್ಸಾಪ್ ದಾಸೋಹಗಳನ್ನು ನಡೆಸಿದರೂ ಸ್ವಲ್ಪವೇ ವಾತಾವರಣ ತಿಳಿಯಾದರೂ ಮುಖತಃ ಕಾರ್ಯಕ್ರಮ ಆಯೋಜಿಸಿ ಮತ್ತೆ ಕರೋನಾ ತೀವ್ರತೆಗೆ ಹೆದರಿ ಹಿಂದಕ್ಕೆ ಹೋಗುವಂತೆ ಆಗುತ್ತಿತ್ತು. ಅಗ ನಡೆಸಿದ್ದು 17 ವಾಟ್ಸಾಪ್ ಸಾಹಿತ್ಯ ದಾಸೋಹಗಳು.

ಈಗಿನ ಸಾಹಿತ್ಯ ದಾಸೋಹದ ಕಾರ್ಯಕ್ರಮಗಳು ಮೈಸೂರು ಜಯನಗರದ ನೇಗಿಲಯೋಗಿ ಸಭಾಂಗಣದಲ್ಲಿ ನಡೆಯುತ್ತಿವೆ. ಸಾಹಿತ್ಯ ದಾಸೋಹ ಎಂಬ ಹೆಸರು ಸಾಹಿತ್ಯದ ದಾಸೋಹ ಎಂಬರ್ಥದಲ್ಲಿ ಇಡಲ್ಪಟ್ಟಿದ್ದರೂ, ಮೈಸೂರಿನಲ್ಲಿ "ಸಾಹಿತ್ಯ ಮತ್ತು ದಾಸೋಹ" ಆಗಿದೆ. ಪ್ರತೀ ಕಾರ್ಯಕ್ರಮದ ನಂತರವೂ ಭೋಜನ ವ್ಯವಸ್ಥೆ ಇರುತ್ತದೆ.

ಹೊಯ್ಸಳ ಕನ್ನಡ ಸಂಘ ಮತ್ತು ಸವಿಗನ್ನಡ ಪತ್ರಿಕಾ ಬಳಗದ ಸಹಯೋಗದೊಂದಿಗೆ ಕರೋನಾ ಸಮಯದ ವಾರ್ಷಿಕೋತ್ಸವದಲ್ಲಿ ಆಯೋಜಿಸಿದ್ದ ಕವನ ಸ್ಪರ್ಧೆ, 7ನೇ ವಾರ್ಷಿಕೋತ್ಸವದಲ್ಲಿ ಮತ್ತು 2024ರ ಹೊಸ ವರ್ಷಾಚರಣೆಯ ಸಂದರ್ಭದಲ್ಲಿ ಲೇಖಕಿ ಶ್ರೀಮತಿ ಬಿ.ಆರ್.ನಾಗರತ್ನ ಅವರು ನಡೆಸಿಕೊಟ್ಟ ರಸಪ್ರಶ್ನೆ ಕಾರ್ಯಕ್ರಮ, 8ನೇ ವಾರ್ಷಿಕೋತ್ಸವದ ಕನ್ನಡ ನಾಡು ನುಡಿ ಕುರಿತಾದ 'ಅಚ್ಚ ಕನ್ನಡದ ಸ್ವಚ್ಛ ಮಾತುಗಳು' ಸ್ಪರ್ಧೆಗಳು, ಬಹುಮಾನಗಳು, ಪ್ರತೀ ತಿಂಗಳ ಸಾಹಿತ್ಯ ಸೃಷ್ಠಿಯ ಏಕತಾನತೆಯಿಂದ ಹೊರಬಂದು, ಹರ್ಷೋತ್ಸವಗಳನ್ನು ಆಚರಿಸಿದ್ದು ಮುದ ನೀಡಿದೆ. ಮಧ್ಯದಲ್ಲೊಮ್ಮೆ "ಅಧಿಕ" ಎಂಬ ವಿಷಯವನ್ನು ಕೊಟ್ಟು ಅದರ ಬಗ್ಗೆಯೇ ವಿವಿಧ ಪ್ರಕಾರಗಳ ಸಾಹಿತ್ಯ ಸೃಷ್ಠಿಯಾಗಲಿ ಎಂಬ ಪ್ರಯೋಗಕ್ಕೆ ಸಿಕ್ಕ ಸ್ಪಂದನೆಯನ್ನು 'ರಸದೌತಣ' ಎಂದೇ ಬಣ್ಣಿಸಬಹುದು.

ಸುಪ್ರಸಿದ್ಧ ಕಥೆಗಾರ, ಕಾದಂಬರಿಗಾರ, ಅಂಕಣ ಬರಹಗಾರ, ಲೇಖಕ ಶ್ರೀ.ಸಂತೋಷ್ ಕುಮಾರ್ ಮೆಹಂದಳೆಯವರ ಸಮರ್ಥ ನಿರ್ದೇಶನದಲ್ಲಿ ಕಥಾ ಕಮ್ಮಟ, "ಕಥಾಯಾನ-11" ಯಶಸ್ವೀ ಕಾರ್ಯಕ್ರಮವನ್ನು ಕಳೆದ ವರ್ಷ ಆಯೋಜಿಸಿದ್ದು ಒಂದು ಸಾರ್ಥಕ ಕಾರ್ಯ. ಬೆಂಗಳೂರು ಸಾಹಿತ್ಯ ದಾಸೋಹದ ರೂವಾರಿಗಳಾದ ರವೀಂದ್ರ, ಮಹಾಬಲ, ಚಂದ್ರಶೇಖರ ಅವರುಗಳು ಯಾವಾಗಲೂ ನಮ್ಮನ್ನು ಪ್ರೋತ್ಸಾಹಿಸುತ್ತಾರೆ.

ಪ್ರತೀ ನವೆಂಬರ್ ತಿಂಗಳಲ್ಲಿ ಆಮಂತ್ರಿತ ಗಣ್ಯವ್ಯಕ್ತಿಗಳ ಸಮ್ಮುಖದಲ್ಲಿ ಕನ್ನಡ ರಾಜ್ಯೋತ್ಸವ ಮತ್ತು ಸಂಸ್ಥೆಯ ವಾರ್ಷಿಕೋತ್ಸವವನ್ನು ಆಚರಿಸಲಾಗುತ್ತಿದೆ.

ಬಳಗದ ಸದಸ್ಯರೆಲ್ಲರ ಸಹಕಾರ, ಸಹೃದಯತೆಯೇ ಈ ಎಲ್ಲ ಯಶಸ್ಸಿಗೆ ಕಾರಣ. ಹಾಗಾಗಿಯೇ ಈ ಹಾದಿಯನ್ನು ಕ್ರಮಿಸುವುದು ಸುಗಮವಾಯಿತು. ಎಲ್ಲರೂ ಆಗಮಿಸಿ, ಹರಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ್ದಾರೆ.

ಶತಕೋತ್ಸವ: 18.02.2024ರಂದು ಮೈಸೂರಿನಲ್ಲಿ 100ನೇ ಸಾಹಿತ್ಯ ದಾಸೋಹ ನಡೆಯಲಿದೆ. ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಬೆಂ.ಶ್ರೀ.ರವೀಂದ್ರ ಅವರು ಉದ್ಘಾಟಿಸಲಿದ್ದು, ಹಿರಿಯ ವಿಜ್ಞಾನ ಬರೆಹಗಾರ ಶ್ರೀ ಎಸ್.ರಾಮಪ್ರಸಾದ್ ಅವರು ವಿನ್ಯಾಸಗೊಳಿಸಿರುವ ಮೈಸೂರು ಸಾಹಿತ್ಯ ದಾಸೋಹದ ಲೋಗೋ ಮತ್ತು ದಾಸೋಹಿಗಳ ಬರಹಗಳನ್ನೊಳಗೊಂಡ "ಸಾಹಿತ್ಯ ಶತಕ" ಕೃತಿಯನ್ನು ಹಾಸ್ಯ ಸಾಹಿತಿ ಶ್ರೀ ಎಂ.ಎಸ್. ನರಸಿಂಹಮೂರ್ತಿಯವರು ಲೋಕಾರ್ಪಣೆಗೊಳಿಸಲಿದ್ದಾರೆ.

***

ಮೈಸೂರು ಸಾಹಿತ್ಯ ದಾಸೋಹ

ಶತಕೋತ್ಸವ ಸಮಾರಂಭ – 'ಸಾಹಿತ್ಯ ಶತಕ' ಕೃತಿ ಲೋಕಾರ್ಪಣೆ

– ಕಾರ್ಯಕ್ರಮ ವರದಿ: ಹು.ವಾ. ಶ್ರೀಪ್ರಕಾಶ್


ಮೈಸೂರು ಸಾಹಿತ್ಯ ದಾಸೋಹ ವೇದಿಕೆಯ ಶತಕೋತ್ಸವ ಸಮಾರಂಭವು 18, ಫೆಬ್ರವರಿ 2024ರಂದು ಭಾನುವಾರ ಮೈಸೂರಿನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಯಶಸ್ವಿಯಾಗಿ ಜರುಗಿತು. ಶತಕೋತ್ಸವದ ಭಾಗವಾಗಿ ಬಳಗದ ಸದಸ್ಯರೆಲ್ಲರ ಬರಹಗಳನ್ನೊಳಗೊಂಡ 'ಸಾಹಿತ್ಯ ಶತಕ' ಎಂಬ ಕೃತಿ ಲೋಕಾರ್ಪಣೆ ಗೊಂಡಿತು.

ಬೆಂಗಳೂರಿನ ನಮ್ಮ ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯ ಶಾಖೆಯೋ ಎಂಬಂತೆ ಮೈಸೂರಿನಲ್ಲಿ ಸಾಹಿತ್ಯ ದಾಸೋಹವು 17, ನವಂಬರ್ 2015ರಿಂದಲೂ ನಡೆದುಕೊಂಡು ಬರುತ್ತಿದ್ದು, ಈಗ ನೂರನೆಯ ದಾಸೋಹವನ್ನು ಆಚರಿಸುತ್ತಿರುವುದು ಅಭಿನಂದನಾರ್ಹ ಸಂಗತಿ.

ಶ್ರೀ ಎಂ.ಆರ್.ಆನಂದ್ ಹಾಗೂ ಶ್ರೀಮತಿ ಪದ್ಮಾ ಆನಂದ್‌ರವರು ಜಂಟಿಯಾಗಿ ಎಲ್ಲರನ್ನೂ ಸ್ವಾಗತಿಸಿ ಮೈಸೂರು ಸಾಹಿತ್ಯ ದಾಸೋಹ ನಡೆದು ಬಂದ ಹಾದಿಯ ಬಗ್ಗೆ ಸಂಕ್ಷಿಪ್ತವಾಗಿ ನಿರೂಪಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಬೆಂಗಳೂರಿನ ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಬೆಂ.ಶ್ರೀ. ರವೀಂದ್ರರವರು ಸಾಹಿತ್ಯ ದಾಸೋಹವನ್ನು ಜೊತೆ ಜೊತೆಯಾಗಿ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವ ಶ್ರೀ ಎಂ.ಆರ್.ಆನಂದ ಹಾಗೂ ಶ್ರೀಮತಿ ಪದ್ಮಾ ಆನಂದ ದಂಪತಿಗಳ ಶ್ರಮವನ್ನು ಶ್ಲಾಘಿಸಿದರು. ಮೈಸೂರು ಸಾಹಿತ್ಯ ದಾಸೋಹದ ಮೂರನೇ ಕೃತಿ, 'ಸಾಹಿತ್ಯ ಶತಕ'ವನ್ನು ಹೊರತರುತ್ತಿರುವುದು ಸಂತೋಷ ತಂದಿದೆ ಎಂದರು.





ಕನ್ನಡಕ್ಕಾಗಿ ಕೈಯೆತ್ತು ಎಂಬ ಕುವೆಂಪು ಅವರ ಮಾತನ್ನು ನೆನಪಿಸಿದ ಅವರು, ಕನ್ನಡ ಮನಸ್ಸುಗಳು ಕನ್ನಡವನ್ನು ಕಟ್ಟಿ ಬೆಳೆಸಬೇಕಾಗಿದೆ. 1956ರಲ್ಲಿ ಹುಯಿಲಗೋಳ ನಾರಾಯಣರಾಯರು ಬರೆದ 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ಗೀತೆಯನ್ನು ವೇದಿಕೆಯೊಂದರಲ್ಲಿ 'ಉದಯ ವಾಯಿತು ನಮ್ಮ ಚೆಲುವ ಕನ್ನಡ ನಾಡು' ಎಂದು ಹಾಡಿದಾಗ ವರಕವಿ ಬೇಂದ್ರೆಯವರು, ಮೂಲ ಗೀತೆಯಲ್ಲಿನ ಉದಯವಾಗಲಿ ಎಂಬುದನ್ನು ಬದಲಾಯಿಸಬಾರದು ಎಂದರಂತೆ. ಉದಯ ವಾದಾಗ ಅಸ್ತಮಾನವಿರುತ್ತದೆ. ಕನ್ನಡ ನಾಡಿಗೆ ಅಸ್ತಮಾನವಿಲ್ಲ ಆದ್ದರಿಂದ ಅನುದಿನವೂ ಕನ್ನಡ ಉದಯವಾಗಲಿ. ಕನ್ನಡ ಭಾಷೆ ಬೆಳೆಯಬೇಕು, ಬದುಕಬೇಕು. ನಮ್ಮ ನುಡಿ ನಮ್ಮ ಅಸ್ಮಿತೆ ಎಂದು ಪ್ರತಿಪಾದಿಸಿದ ರವೀಂದ್ರ ಅವರು, ಇಂದು ಕನ್ನಡ ಭಾಷೆ ಹಲವು ಸವಾಲು ಗಳನ್ನು ಎದುರಿಸುತ್ತಿದೆ ಹೊಸ ಶಿಕ್ಷಣ ನೀತಿಯಲ್ಲಿ ಪ್ರಾದೇಶಿಕ ಭಾಷೆಗೆ ಆದ್ಯತೆ ಕೊಡಬೇಕು ಎಂದಿದ್ದರೂ ಜಾರಿಯಾಗುವ ಹಂತದಲ್ಲಿ ದೋಷವಿದೆ ಎಂದು ಹೇಳಿದರು.

ಇಂದು ಪ್ರತಿವರ್ಷ ಎಂಟು–ಒಂಬತ್ತು ಸಾವಿರ ಸಂಖ್ಯೆಯಲ್ಲಿ ಕನ್ನಡ ಸಾಹಿತ್ಯ ಕೃತಿಗಳು ಹೊರಬರುತ್ತಿದ್ದು, ಓದುಗರ ಸಂಖ್ಯೆಯೂ ಬೆಳೆಯುತ್ತಿದೆ. ಆದರೆ ಎಲ್ಲಾ ಕ್ಷೇತ್ರಗಳಲ್ಲಿಯೂ ಭಾಷೆಯ ಬೆಳವಣಿಗೆ ಆಗಬೇಕಾಗಿದೆ. ಕನ್ನಡ ಅನ್ನದ ಭಾಷೆಯಾಗಿ ಬೆಳೆಯಬೇಕು. ಕನ್ನಡ ನಾಡಿನ ಅನೇಕ ಪ್ರದೇಶಗಳಲ್ಲಿ ಇಂದು ಕನ್ನಡದ ಅವಶ್ಯಕತೆಯೇ ಇಲ್ಲವೆಂಬಂತಾಗಿದೆ. ಕನ್ನಡ ನಾಮಫಲಕ ಹಾಕಲು ಒತ್ತಾಯ ಮಾಡಬೇಕಾಗಿರುವ ದುಸ್ಥಿತಿ ಒದಗಿಬಂದಿರುವುದು ಶೋಚನೀಯ ಸಂಗತಿ.ಇಂದು ಬಹುತೇಕ ಮಕ್ಕಳಿಗೆ ಕನ್ನಡ ಮಾತನಾಡಲು ಬರುತ್ತದೆ ಆದರೆ ಓದಲು ಬರೆಯಲು ಬರುವುದಿಲ್ಲ ಕನ್ನಡ ಜಾಗೃತಿ ಉಂಟುಮಾಡುವ ಪ್ರಯತ್ನ ಆಗುತ್ತಿದೆಯಾದರೂ ಎಲ್ಲ ಕನ್ನಡ ಮನಸುಗಳು ಈ ದಿಸೆಯಲ್ಲಿ ಕಂಕಣ ಬದ್ಧರಾಗಬೇಕಾಗಿದೆ. ಎಲ್ಲ ಕನ್ನಡಿಗರೂ ಕನ್ನಡ ನುಡಿಯ ಅಭಿಮಾನ ಬೆಳೆಸಿಕೊಂಡು ಕನ್ನಡವನ್ನು ಉಳಿಸಬೇಕು. ಕನ್ನಡದ ಎಲ್ಲ ಜ್ಞಾನ ಶಾಖೆಗಳು ಸಮೃದ್ಧವಾಗಿ ಬೆಳೆದಾಗ ಮಾತ್ರ ಭಾಷೆಯ ಬೆಳವಣಿಗೆ ಸಾಧ್ಯ ಎಂದೂ ರವೀಂದ್ರ ಹೇಳಿದರು.

ಬೆಂಗಳೂರಿನ ಸಸಕಸ ವೇದಿಕೆಯ ಪರವಾಗಿ ಶ್ರೀ ಆನಂದ ದಂಪತಿಗಳನ್ನು ಸನ್ಮಾನಿಸಲಾಯಿತು

'ಸಾಹಿತ್ಯ ಶತಕ' ಕೃತಿಯನ್ನು ಲೋಕಾರ್ಪಣೆ ಮಾಡಿದ ಖ್ಯಾತ ಸಾಹಿತಿ ಶ್ರೀ ಎಂ ಎಸ್.ನರಸಿಂಹಮೂರ್ತಿಯವರು ನಂತರ ಸುಮಾರು ಒಂದು ಗಂಟೆಗಳ ಕಾಲ ಮಾತನಾಡಿ ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸಿದರು. ಶವ ವಾಹನದ ಉದ್ಘಾಟನೆ, ಎಮ್ಮೆ ಸಾಲ, ಗರ್ಭಿಣಿ ಭತ್ಯೆ ಮೊದಲಾದ ಹಲವಾರು ಹಾಸ್ಯಪ್ರಸಂಗಗಳನ್ನು ಅವರದೇ ಶೈಲಿಯಲ್ಲಿ ಮಂಡಿಸಿದರು.

'ಸಾಹಿತ್ಯ ಶತಕ' ಕೃತಿಯ ಕುರಿತು ಮಾತನಾಡಿದ ಜೆ ಎಸ್ ಎಸ್ ಮಹಾವಿದ್ಯಾಲಯದ ನಿರ್ದೇಶಕರಾದ ಪ್ರೊ. ಮಲ್ಲಿಕಾರ್ಜುನ್ ಅವರು, ಕವಿರಾಜ ಮಾರ್ಗದಲ್ಲಿ ಹೇಳಿರುವ ಕನ್ನಡಿಗರ ಗುಣ ಲಕ್ಷಣಗಳನ್ನು ವಿವರಿಸಿ, ಸಾಹಿತ್ಯ ಶತಕ ಎಂಬ ಶೀರ್ಷಿಕೆ 12ನೇ ಶತಮಾನದ ಶರಣರನ್ನು ನೆನಪಿಸುತ್ತದೆ ಎಂದರು. ಕೃತಿಯ ಹಿಂದೆ ಕನ್ನಡ ಸಾಹಿತ್ಯ ಪರಂಪರೆಯ ದರ್ಶನವೇ ಇದೆ. ಬಹಳಷ್ಟು ಲೇಖನಗಳು ಓದುಗರನ್ನು ಹಿಡಿದು ನಿಲ್ಲಿಸುವಲ್ಲಿ ಯಶಸ್ವಿಯಾಗಿವೆ ಲೇಖನಗಳು ನಮ್ಮ ನೆನಪುಗಳನ್ನು ಉದ್ದೀಪಿಸಿದಾಗ ಅವು ಹತ್ತಿರವೆನಿಸುತ್ತದೆ. ಸಾಹಿತ್ಯ ಶತಕದಲ್ಲಿ 35 ಜನರ ಬರಹಗಳಿವೆ. ಕಥೆ, ಕವನ, ಜೀವನಚಿತ್ರ, ಅನುಭವ ಕಥನಗಳಿವೆ. ಏಳು ವಿಶೇಷ ಲೇಖನಗಳಿವೆ .ಮುದ್ರಣದ ಸೌಂದರ್ಯವೂ ಚೆನ್ನಾಗಿದೆ. ಹಿರಿಯ ನಾಗರಿಕರು ಬದುಕನ್ನು ಸಕಾರಾತ್ಮಕ ದೃಷ್ಟಿಯಿಂದ ನೋಡಿ ಬರೆದ ಲೇಖನಗಳು ಇಲ್ಲಿವೆ ಎಂದ ಅವರು, ಶ್ರೀ ಆನಂದ, ಪದ್ಮಾ ಆನಂದ್ ಹಾಗೂ ಮೈಸೂರು ಸಾಹಿತ್ಯ ದಾಸೋಹಿಗಳು ನಡೆಸಿಕೊಂಡು ಬರುತ್ತಿರುವ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಎಲ್ಲರಿಗೂ ಶುಭ ಕೋರಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷರಾದ ರಾಜಣ್ಣ ರವರು ಮಾತನಾಡಿ ಬದುಕಿನ ಎಲ್ಲಾ ಆಯಾಮಗಳ ಬಗ್ಗೆ ಈ ಕೃತಿಯಲ್ಲಿ ಲೇಖನಗಳಿವೆ. ಇದು ಮಾಗಿದ ವ್ಯಕ್ತಿಗಳ ಪ್ರಬುದ್ಧ ಲೇಖನಗಳ ಸಂಕಲನ. .ಇಲ್ಲಿ ಕಾಣಿಸುವ ಒಂದೇ ಒಂದು ಕೊರತೆ ಎಂದರೆ ಅದು ಯುವಕರ ಕೊರತೆ ಎಂದರು .

ಸಾಹಿತ್ಯ ಶತಕದ ಸಂಪಾದಕಿ ಶ್ರೀಮತಿ ಲೋಲಾಕ್ಷಿಯವರು ಮಾತನಾಡಿ, ಕೃತಿಯ ಸಂಪಾದಕಿಯಾಗಿ ತಾವು ನಿರ್ವಹಿಸಿದ ಸವಾಲುಗಳು, ಮಾಡಿದ ಬದಲಾವಣೆಗಳ ಬಗ್ಗೆ ತಿಳಿಸಿದರು. ಪ್ರತಿಯೊಂದು ಲೇಖನದಲ್ಲಿಯೂ ಲೇಖಕರ ಪರಿಚಯ ಮತ್ತು ದೂರವಾಣಿ ಸಂಖ್ಯೆ ಇದ್ದು ಅಭಿಪ್ರಾಯಗಳನ್ನು ನೇರವಾಗಿ ಲೇಖಕರಿಗೆ ಅಥವಾ ತಮಗೆ ತಿಳಿಸಬೇಕೆಂದು ಕೋರಿದರು. .ಮೆಚ್ಚುವ, ಚುಚ್ಚುವ ಪ್ರತಿಕ್ರಿಯೆಗಳಿಗೆ ತಾವು ತೆರೆದುಕೊಂಡಿರುವುದಾಗಿ ತಿಳಿಸಿದರು.

ಮೈಸೂರು ಸಾಹಿತ್ಯ ದಾಸೋಹದ ವತಿಯಿಂದ ಎಲ್ಲ ಲೇಖಕರಿಗೆ ಗೌರವಾರ್ಪಣೆ ಮತ್ತು ದಾಸೋಹದ ರೂವಾರಿಗಳಾದ ಶ್ರೀ ಆನಂದ ದಂಪತಿಗಳ ಸನ್ಮಾನ ನಡೆಯಿತು.

ಅಧ್ಯಕ್ಷತೆ ವಹಿಸಿದ್ದ ಕಸಾಪ ಜಿಲ್ಲಾ ಅಧ್ಯಕ್ಷರಾದ ಶ್ರೀ ಮಡ್ಡೀಕೆರೆ ಗೋಪಾಲ್‌ರವರು ಮಾತನಾಡಿ, ಮೈಸೂರು ಸಾಹಿತ್ಯ ದಾಸೋಹ ನಡೆಸಿಕೊಂಡು ಬರುತ್ತಿರುವ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಕೃತಿಯು ವೈವಿಧ್ಯಮಯವಾಗಿ ಮೂಡಿಬಂದಿದೆ ಎಂದ ಅವರು ಮೈಸೂರು ಸಾಹಿತ್ಯ ದಾಸೋಹದ ನೂರರ ಸಂಭ್ರಮ ಯಶಸ್ವಿಯಾಗಿದೆ,.ಇದು ಸಾವಿರವಾಗಲಿ ಎಂದು ಹಾರೈಸಿದರು.

ಶ್ರೀಮತಿ ಭವಾನಿಯವರು ಕಾರ್ಯಕ್ರಮ ನಿರ್ವಹಣೆ ಮಾಡಿದರು. ಶ್ರೀ ರಂಗನಾಥ್‌ರವರು ವೇದಿಕೆಯಲ್ಲಿ ಉಪಸ್ಥಿತರಿದ್ದ ಗಣ್ಯರನ್ನು ಪರಿಚಯಿಸಿದರು.

ಕಾರ್ಯಕ್ರಮದಲ್ಲಿ ಪ್ರೇಕ್ಷಕರಾಗಿ ಬೆಂಗಳೂರಿನ ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯ ಪರವಾಗಿ ಶ್ರೀ ಕೆ ಎನ್.ಮಹಾಬಲ, ಶ್ರೀ ಎಚ್.ಎಲ್.ಗುರುಪ್ರಸಾದ್, ಶ್ರೀ ಕೆ.ಎನ್.ಜಯರಾಮ, ಶ್ರೀ ಎಂ.ಎಲ್. ಸುದರ್ಶನ್ ಹಾಗೂ ಶ್ರೀ ಹು.ವಾ.ಶ್ರೀಪ್ರಕಾಶ್ ಭಾಗವಹಿಸಿದ್ದರು

ಬೆಳಗ್ಗೆ ಹತ್ತು ಗಂಟೆಗೆ ಆರಂಭವಾದ ಕಾರ್ಯಕ್ರಮ ಮಧ್ಯಾಹ್ನ ಮೂರು ಗಂಟೆಯವರೆಗೂ ನಡೆಯಿತು.

***

ಕವಿ ಮನ

ಅವಳು

ಅವಳು
ಬಲು ನಾಚಿಕೆಯವಳು

ಹಿಂದೊಮ್ಮೆ
ನಿರ್ಭಿಡೆಯಿಂದ
ಸೂರು ತಾರಸಿ ಅಂಗಳ ಹಿತ್ತಿಲುಗಳಲ್ಲಿ
ಗೆಜ್ಜೆ ಘಲಿರೆನಿಸಿಸುತ್ತಾ
ಕಂಡವರಿಗೆಲ್ಲಾ ನಗೆಯ ಹಂಚುತ್ತಾ
ನಾನು ಹೀಗೆ ನೀವು ಹೇಗೆ ಎಂದವಳು

ಇತ್ತೀಚೆಗೇಕೋ
ಒಳ ಕೋಣೆಯ ಬಿಟ್ಟೇ ಬಾರಳು

ಒಮ್ಮೊಮ್ಮೆ
ಮೆಲ್ಲನಿಣುಕಿ
ಯಾವುದೋ ತೆರೆಯ ಕಂಡೋ ಕೇಳಿಯೊ
ಮತ್ತೆ ಒಳಗೋಡುವಳು

ಮನೆಗೋ ಈಗೀಗ
ಗೋಡೆಗಳ ಸುತ್ತ ಗೋಡೆಗಳು
ಚಕ್ರವ್ಯೂಹದಂತೆ
ಹೊರಗಿನವರು ಒಳಹೋಗುವಂತಿಲ್ಲ
ಒಳಗಿನವರ ಕಥೆಯಂತೂ ದೇವರೇ ಬಲ್ಲ

ನಗೆ ಹಂಚಿದವಳು
ದಾರಿಯನ್ನು ತೋರಬಹುದು

ಆ ಗೋಡೆಗಳನೆಲ್ಲಾ
ತಳ್ಳಿ ಬೀಳಿಸಿ
ಮತ್ತೆ ಅವಳಷ್ಟಕ್ಕೆ ಬಿಡಬೇಕು
ತನ್ನ ಆನಂದದ ಗುಟ್ಟನ್ನು ಬಿಟ್ಟುಕೊಟ್ಟಾಳು
ಹಾಗೇ ನನ್ನದನ್ನೂ

– ಡಾ ಶ್ರೀಲಕ್ಷ್ಮಿ ಶ್ರೀನಿವಾಸನ್
07.02.2024

ಯಾರು ಕಲಿಸಿದರು

ಯಾರು ಕಲಿಸಿದರು ನಿನಗೆ, ಜೇಡ,
ನಿಪುಣತೆಯ ಬಲೆಯ ಹೆಣೆಯುಲು
ರೇಖಾಗಣಿತದ ಅಳತೆಗಳ ಸೂತ್ರವನು

ಯಾರು ಕಲಿಸಿದರು ನಿನಗೆ, ಹದ್ದು,
ತೇಲುವುದಕೆ ನೀಲ ಗಗನದಲಿ
ಪ್ರದಕ್ಷಿಣೆಯ ಹಾಕಲು ವೃತ್ತಾಕಾರದಲಿ

ಯಾರು ಕಲಿಸಿದರು ನಿನಗೆ, ನವಿಲೇ,
ಹರಡಿ ಗರಿಗಳ ಕುಣಿದು ನರ್ತಿಸಲು
ಕೂಗಿ ಕೂಗಿ ನಲ್ಲೆಯರ ಕರೆಯಲು

ಯಾರು ಕಲಿಸಿದರು ನಿನಗೆ, ಗೀಜಗ,
ಸೋಜಿಗದ ಗೂಡುಗಳ ಕಟ್ಟಲು
ಕೂಜನವು ನಿನ್ನದು ಚಿಲಿಪಿಲಿ

ಯಾರು ಕಲಿಸಿದರು ನಿನಗೆ, ಕೋಗಿಲೆ,
ಮಧುರ ಗಾನವನು ಗಗನದಲಿ ತೇಲಿ ಬಿಡಲು
ಸಂಗೀತ ಸರಸತಿಯ ವಾಣಿಯಲಿ ಹಾಡಲು

ಮನುಜಾ ಯಾರು ಕಲಿಸಿದರು ನಿನಗೆ
ಲೋಭ ಮೋಹ ಕಾಮ ಕ್ರೋಧ
ಮದ ಮತ್ಸರ ಅರಿಷಡ್ವರ್ಗಗಳನು.

– ಎಸ್ ಮಂಜುನಾಥ್ (ಹಿಮನಾಥ)
21.02.2024

ಕವಿ ಮನ

ರಾಮ ಆಯಾಮ

ನಿನ್ನ ಜೀವನದ ದಿಕ್ಕನ್ನು ಆತ್ಮಾವಲೋಕನ ಮಾಡಬೇಕೆ?
ನಿರ್ಧರಿಸುವುದು ಬೇರೇನೂ ಅಲ್ಲ, ಬರೀ ನಿನ್ನ ಆಯ್ಕೆ.

ಮಂಥರೆಯ ಮಾತನ್ನು ಆಲಿಸುವುದು ಕೈಕೇಯಿಯ ಆಯ್ಕೆ
ಕೈಕೇಯಿಯ ತಾಳಕ್ಕೆ ಕುಣಿದಿದ್ದು ದಶರಥನ ಆಯ್ಕೆ
ತಂದೆಯ ಅಜ್ಞೆಯನ್ನು ಪರಿಪಾಲಿಸಿದ್ದು ರಾಘವನ ಆಯ್ಕೆ
ಹಿಂಬಾಲಿಸಿ ಹೋದದ್ದು ಅನುಜ, ಮಡದಿಯರ ಸ್ವಂತ ಆಯ್ಕೆ

ರಾಜ್ಯವಾಳದೆ ಅಗ್ರಜನ ಪಾದುಕೆಯನ್ನು ಪಟ್ಟಕ್ಕಿಟ್ಟು
ಹೆತ್ತವಳ ಆಕಾಂಕ್ಷೆಯನ್ನು ಬದಿಗಿಟ್ಟು
ಅಣ್ಣನೇ ರಾಜನಾಗಬೇಕೆಂದು ಹಿಡಿದ ಪಟ್ಟು
ಭರತನ ಆಯ್ಕೆ ತಂದಿತ್ತು ತಾಯಿಗೆ ಸಿಟ್ಟು.

ರಾಕ್ಷಸಿಯನ್ನು ವಿಕಾರಗೊಳಿಸಿದ್ದು ಲಕ್ಷ್ಮಣನ ಆಯ್ಕೆ
ಅಣ್ಣನಿಗೆ ದೂರಿದ್ದು ಅವಳ ಆಯ್ಕೆ
ತಂಗಿ ವಿವಾಹಿತರೊಡನೆ ತೋರಿದ ಬಯಕೆಯ
ಅರಿವಿದ್ದೂ ಹಾರಾಡಿದ್ದು ದಶಾನನನ ಆಯ್ಕೆ.

ಜಾನಕಿಯ ಆಸೆಗೆ ಬೆನ್ನಟ್ಟಿದನು ಬಂಗಾರದ ಜಿಂಕೆ
ಕರೆಗೆ ಓಗೊಡದಿದ್ದಾಗ ಅವಳಿಗೆ ಮೈದುನನ ಮೇಲೆಯೇ ಶಂಕೆ
ಮಾತಿಗೆ ಕುಗ್ಗಿ ಅಣ್ಣನನ್ನರಸಿ ಒಬ್ಬಳನ್ನೇ ಬಿಟ್ಟು ಹೋಗಿದ್ದೇಕೆ?
ಅಯ್ಯೋ, ಅವಳೂ ದಾಟಿಯೇ ಬಿಟ್ಟಳು ಲಕ್ಷ್ಮಣ ರೇಖೆ!

ಜಟಾಯು ಅಡ್ಡಗಟ್ಟಿದರೂ ನಿಲ್ಲದು ಪುಷ್ಪಕ ವಿಮಾನ
ಒಡವೆಯ ಜಾಡು ಹಿಡಿದು ಬಂದು ನಿಂತ ಹನುಮಾನ
ಶಬರಿಯ ಎಂಜಿಲು ತಿಂದು ರಾಮ ಕೊಟ್ಟ ಸನ್ಮಾನ
ನಮ್ಮ ಆಯ್ಕೆಗಳಿಂದ ತಾನೇ ಆಗುವುದು ನಮ್ಮ ಸ್ಥಾನಮಾನ.

ವಾಲಿಯನ್ನು ಅವಿತು ಸಂಹರಿಸುವುದು ರಾಮನ ಆಯ್ಕೆ
ಪಕ್ಷಾಂತರಿಸಿ ತಂತ್ರ ಹೂಡಿದ್ದು ವಿಭೀಷಣನ ಆಯ್ಕೆ
ಅಗಸನ ಮಾತಿಗೆ ಕಾಡಿಗಟ್ಟಿದ್ದು ಪುರುಷೋತ್ತಮನ ಆಯ್ಕೆ
ಅಗ್ನಿಪರೀಕ್ಷೆಯಾದರೂ ಬೇಸತ್ತು ಭೂಮಿಯ ಮಡಿಲು ಸೇರಿದ್ದು ಸೀತೆಯ ಆಯ್ಕೆ.

ಇಂತಹ ಮಹಾನುಭಾವರ ಜೀವನವೇ ಸಾಗಿದ್ದು ಅವರ ಆಯ್ಕೆಗಳ ಮೇಲೆ
ಧೃಡತೆಯಿಂದ ಎದುರಿಸಿ, ಎಂದಿಗೂ ದೂರಬೇಡ ಅವನ ಲೀಲೆ!

– ಸ್ನೇಹಾ ಶಶಿಧರ್
14.02.2024

ಕವಿ ಮನ

ಮುಪ್ಪಾದ ಮಾಡು

ನಡು ಬಾಗಿ ಹಿಡಿದಿವೆ ನಾಲ್ಕು ತೊಲೆ
ಕಡುಗಪ್ಪು ನಾಡುಹೆಂಚಿನ ಪಡಸಾಲೆ
ಆಕೆಯಂತೆಯೇ ಮುಪ್ಪಾದ ಮಾಡು
ಅಂಕುಡೊಂಕಾಗಿ ಬಾಗಿದೆ ಮುಂದಿಳಿದು

ವಾರ, ತಿಥಿ, ಕಾಲದೆಣಿಕೆಯಿಲ್ಲ
ಹಬ್ಬ, ತೇರು, ವಿಶೇಷತೆಗಳಿಲ್ಲ
ಕೈಗೆಟಕುವೆತ್ತರಕೆ ಸುಣ್ಣ ಬಣ್ಣ
ಕೈಲಾದ ದಿನ ಅಂಗಳದ ಸಾರಣ

ಚೀಟಿ ಸೀರೆಗೆ ತ್ಯಾಪೆಯ ಕುಬುಸ
ಖಣಗಳ ತೆಗೆದು ಹೊಲಿಸಲು ಬೇಸರ
ಒಲೆಯುರಿಗು, ದೀಪಕ್ಕೂ ಒಂಟಿ ಜೀವ
ಅದ ನೆನೆದಾರಿದೆ ಎದೆಯ ತೇವ

ಪ್ರೀತಿಯ ಅಕ್ಕಮ್ಮ ಎಲ್ಲರಿಗಾಕೆ
ಆಕೆಯೋ, ಪ್ರೀತಿ ಸತ್ತು ಬರಡಾದಾಕೆ
ತೀರದ ಹೊತ್ತಿನ ಹಸಿವೆಯ ಕಾರಣ
ಕಾಯಕ ಮಾಡುತ ತೀರಕೆ ಕಾಯುವಾಕೆ

ಅಂಗಳದ ತುಂಬಾ ಎಲೆಯ ಸರ
ಹಸಿರು ಕಳೆದಂತೆ ಕಡ್ಡಿ ಚಿತ್ತಾರ
ಪೇರಿಸುವಳು ಮುತ್ತುಗ ಪತ್ರಾವಳಿ
ಆದರಿಸುವವರಾರು ಕೌಶಲ್ಯವನ್ನಿಲ್ಲಿ?!!

ಎದುರು ನಿಂತಿವೆ ಆಳೆತ್ತರ ಕಲ್ಲು
ಮನೆಗೆ ಇವೇ ರಕ್ಷಣಾ ಗೋಡೆಯು
ಕುರುಡು ಗೂಳಿ ನುಸುಳಿ ಬಾರದು
ವಿಳಾಸವಳಿದು ಧರ್ಮಛತ್ರವಾಗದು

ಓಟು, ವೃದ್ಧಾಪ್ಯ ವೇತನದ ಹೊರತು
ಎಲೆಗಳಿಗೆ ಮಾತ್ರ ಗೊತ್ತವಳ ಹೆಬ್ಬೆಟ್ಟು

– ರಾಧಿಕಾ ಗುಜ್ಜರ್
28.02.2024

ಮಾಹೇಶ್ವರ ಸೂತ್ರಗಳು

– ಗಣಪತಿ ಹೆಗಡೆ

ಯಾವುದೇ ಭಾರತೀಯ ಭಾಷೆಯಿರಲಿ 'ಭಾಷಾಶಾಸ್ತ್ರಕ್ಕೆ' ಸಂಬಂಧಿಸಿದ ವಿಷಯವನ್ನು ಅಧ್ಯಯನ ಮಾಡುವಾಗ 'ಪಾಣಿನಿ ಮಹರ್ಷಿ'ಯನ್ನು ನೆನಪು ಮಾಡಿಕೊಳ್ಳದೇ ಇರಲು ಸಾಧ್ಯವೇ ಇಲ್ಲ. ಸಂಸ್ಕೃತವನ್ನೇ 'ಸುಸಂಸ್ಕೃತ' ವನ್ನಾಗಿಸಿದ ಹಿರಿಮೆ ಇವನದು.

(ಏನಾಕ್ಷರ ಸಮಾಮ್ನಾಯಮ್।

ಅಧಿಕಂ ಮಹೇಶ್ವರಾऽತ್।

ಕೃತ್ಸ್ನಂ ವ್ಯಾಕರಣಂ ಪ್ರೋಕ್ತಂ।

ತಸ್ಮೈ ಪಾಣಿನಯೆ ನಮಃ ॥)

೬೦೦ B.C. ಯಿಂದ ೪೦೦ B.C. ನಡುವಿನ ಅವಧಿಯಲ್ಲಿ ಜೀವಿಸಿರಬಹುದಾದ ಪಾಣಿನಿ ಮಹರ್ಷಿ, ವ್ಯಾಕರಣ ಶಾಸ್ತ್ರದ ಪಿತಾಮಹ ಎನ್ನುತ್ತಾರೆ ವೈಯಾಕರಣಿಗಳು.

ಒಂದು ದಂತಕತೆಯ ಪ್ರಕಾರ ಪಾಣಿನಿ ಮಹರ್ಷಿಗೆ ಏನು ಹೇಳಿದರೂ ತಲೆಗೆ ಹತ್ತುತ್ತಿರಲಿಲ್ಲವಂತೆ. ಹಿಮಾಲಯಕ್ಕೆ ಹೋಗಿ ಈಶ್ವರನ ಕುರಿತು ತಪಸ್ಸು ಮಾಡಿದನಂತೆ. ಆಗ ಮಹೇಶ್ವರನು ತಪಸ್ಸಿಗೆ ಮೆಚ್ಚಿ, ತಾನು ನೃತ್ಯಮಾಡಿದ ಸಂದರ್ಭದ ಕೊನೆಯಲ್ಲಿ ಢಮರನ್ನು ಬಡಿದಾಗ ಹುಟ್ಟಿಕೊಂಡ ಹದಿನಾಲ್ಕು ನಾದಾತ್ಮಕ ಸೂತ್ರಗಳನ್ನು ಪಾಣಿನಿ ಮಹರ್ಷಿಗೆ ಅನುಗ್ರಹಿಸಿದನಂತೆ. (ಮಹೇಶ್ವರ ತನ್ನ ನೃತ್ಯದ ಕೊನೆಯಲ್ಲಿ ಢಮರುವನ್ನು ಹದಿನಾಲ್ಕು ಸಲ ಬಡಿದಾಗ ಹುಟ್ಟಿಕೊಂಡ ನಾದಾತ್ಮಕ ಸೂತ್ರಗಳನ್ನು ನಂದೀಶ್ವರ ಸಂಗ್ರಹಿಸಿ ಇಟ್ಟು ಕೊಂಡಿದ್ದನೆಂದೂ, ಇದನ್ನೇ ಆಮೇಲೆ ಮಹೇಶ್ವರ ಪಾಣಿನಿ ಮಹರ್ಷಿಗೆ ಕರುಣಿಸಿದನೆಂತಲೂ ಹೇಳುವುದುಂಟು. ಅದಕ್ಕಾಗಿಯೇ ಈ ಮಾಹೇಶ್ವರ ಸೂತ್ರಕ್ಕೆ ನಂದೀಶ್ವರ ಸೂತ್ರವೆಂದೂ ಹೇಳುತ್ತಾರೆ.)

'ನೃತ್ತಾವಸಾನೇ ನಟರಾಜರಾಜೋ ನನಾದ ಢಕ್ಕಾಂ ನವಪಂಚವಾರಂ॥ ಉದ್ಧರ್ತುಕಾಮಃ ಸನಕಾದಿ ಸಿದ್ಧಾನೇತದ್ವಿಮರ್ಶೇ ಶಿವಸೂತ್ರಜಾಲಂ॥'

(ನೃತ್ಯದ ಕೊನೆಯಲ್ಲಿ ನಟರಾಜನಾದ ಮಹೇಶ್ವರನು ಸನಕರೇ ಮೊದಲಾದ ಸಿದ್ಧಜನರ ಉದ್ಧಾರಕ್ಕಾಗಿ ಹದಿನಾಲ್ಕು ಸಲ ತನ್ನ ಢಮರನ್ನು ಬಡಿದಾಗ ಹದಿನಾಲ್ಕು ಸೂತ್ರರೂಪವಾದ ನಾದಮಯಿ ಶಬ್ದ ಹುಟ್ಟಿಕೊಂಡಿತು). ಇವೇ ಹದಿನಾಲ್ಕು (ನವ+ಪಂಚ) ಸೂತ್ರಗಳು. ಮಹೇಶ್ವರನಿಂದ ಹುಟ್ಟಿಕೊಂಡ ಕಾರಣಕ್ಕಾಗಿ 'ಮಾಹೇಶ್ವರ ಸೂತ್ರಗಳು' ಎನ್ನುತ್ತಾರೆ.

ಕನಿಷ್ಠ ಅಕ್ಷರಗಳ ಮೂಲಕ ಯಾವುದೇ ರೀತಿಯ ಅನುಮಾನ ಬರದ ಹಾಗೆ, ಗರಿಷ್ಠ ಅರ್ಥಸ್ಫುರಣೆ ಆಗುವ ಹಾಗೆ ತಿಳಿಸುವ ಹಾಗೆ ಮಾಡುವುದೇ 'ಸೂತ್ರ'.

ಅಲ್ಪಾಕ್ಷರಮ್ ಅಸಂದಿಗ್ಧಮ್ ಸಾರವತ್ ವಿಶ್ವತೋಮುಖಮ್।
ಅಸ್ತೋಭಮ್ ಅನವದ್ಯಮ್ ಚ ಸೂತ್ರಮ್ ಸೂತ್ರವಿದೋವಿದುಃ॥

(ಕೆಲವೇ ಅಕ್ಷರಗಳಿಂದ ಕೂಡಿದ್ದಾಗಿಯೂ, ಸಂದೇಹಕ್ಕೆ ಆಸ್ಪದವಾಗದಂತೆಯೂ, ಸಾರವಾದ ವಿಷಯಗಳಿಂದ ಕೂಡಿಯೂ, ನಾನಾ ರೀತಿಯಿಂದ ವ್ಯಾಖ್ಯಾನಮಾಡಲು ಬರುವಂತಹುದೂ, ಒಂದನ್ನು ಪ್ರತಿಪಾದಿಸುವಾಗ ಮಧ್ಯದಲ್ಲಿ ಇನ್ನೊಂದಕ್ಕೆ ಅವಕಾಶವಿಲ್ಲದ್ದಾಗಿಯೂ, ನಿರ್ದುಷ್ಟವಾಗಿ ಇರುವುದು, ಇವೇ ಆರು ಸೂತ್ರ ಲಕ್ಷಣಗಳು.)

ಈಗ ಮಾಹೇಶ್ವರ ಸೂತ್ರಗಳ ಕಡೆ ಬರೋಣ.

ಮಾಹೇಶ್ವರ ಸೂತ್ರಗಳು 14.

1.ಅ ಇ ಉ ಣ್

2. ಋಌಕ್

3. ಏಓಙ್

4. ಐಔಚ್

5. ಹಯವರಟ್

6. ಲಣ್

7. ಞಮಙಣನಮ್

8. ಝಭಞ್

9. ಘಢಧಷ್

10. ಜಬಗಡದಶ್

11. ಖಫಛಠಥಚಟತವ್

12. ಕಪಯ್

13. ಶಷಸರ್

14. ಹಲ್

ಈ ಹದಿನಾಲ್ಕು ಸೂತ್ರಗಳ ಪಂಚಾಂಗದಿಂದ ಸಂಸ್ಕೃತ ಭಾಷಾವ್ಯಾಕರಣ ಸೌಧವನ್ನೇ ನಿರ್ಮಿಸಿದ್ದಾನೆ ಪಾಣಿನಿ ಮಹರ್ಷಿ ಅಂದರೆ ಅದೇನೂ ಅತಿಶಯೋಕ್ತಿಯಲ್ಲ.

ಹದಿನಾಲ್ಕು ಸೂತ್ರಗಳು, ಮೂಲತಃ ಸಂಸ್ಕೃತ ವರ್ಣಮಾಲೆಯನ್ನು ಒಂದು ವಿಶಿಷ್ಠ ಕ್ರಮದಲ್ಲಿ ವಿವರಿಸುತ್ತವೆ. ಪ್ರತಿ ಸೂತ್ರದ ಕೊನೆಯಲ್ಲಿ ಬರುವ ಣ್, ಕ್, ಙ್ ಮೊದಲಾದ ಅರ್ಧಾಕ್ಷರಗಳು ಇತ್ ಅಂತ ಕರೆಯಿಸಿಕೊಳ್ಳುತ್ತವೆ. ಈ 'ಇತ್' ಅನ್ನು ಹೊರತುಪಡಿಸಿದರೆ ಸಿಗುವುದೇ ಸಂಸ್ಕೃತ ವರ್ಣಗಳು. (ಮೊದಲಿನ ಸೂತ್ರದಲ್ಲಿ 'ಣ್' ಇತ್ ಬಿಟ್ಟರೆ 'ಅ ಇ ಉ' , ಎರಡನೆಯದರಲ್ಲಿ ಕ್ ಇತ್ ಬಿಟ್ಟರೆ ಋ, ಌ ಹೀಗೆ.)

ಸ್ಥೂಲವಾಗಿ ಹೇಳುವುದಾದರೆ 1 ರಿಂದ 14 ರ ತನಕ ಕೊನೆಯ ಇತ್ ಪ್ರತ್ಯಯಗಳನ್ನು ಬಿಟ್ಟರೆ ಅಕ್ಷರಗಳು ಕಂಡುಬರುತ್ತವೆ.

ಅ,ಇ,ಉ,ಋ,ಌ,ಏ,ಐ,ಓ,ಔ.(ಸ್ವರಗಳು -9)

ಕ,ಖ,ಗ,ಘ,ಙ,ಚ,ಛ,ಜ,ಝ,ಞ,ಟ,ಠ,ಡ,ಢ,ಣ,ತ,ಥ,ದ,ಧ,ನ,ಪ,ಫ,ಬ,ಭ,ಮ,ಯ,ರ,ಲ,ವ,ಶ,ಷ,ಸ,ಹ.(ವ್ಯಂಜನಗಳು-33).

ಅ ದಿಂದ ಹ (ಒಟ್ಟೂ ವರ್ಣಗಳು-42)

ಮಹರ್ಷಿ ಪಾಣಿನಿ ಈ ಹದಿನಾಲ್ಕು ಸೂತ್ರಗಳನ್ನು ಪ್ರತ್ಯಾಹಾರಗಳ (ಅಥವಾ ಪ್ರತ್ಯಹಾರ) ರೂಪದಲ್ಲಿ ಬಳಸಿ ವ್ಯಾಕರಣ ಸೂತ್ರಗಳನ್ನು ರಚಿಸಿದನು. (ಒಟ್ಟೂ 42 ಪ್ರತ್ಯಾಹಾರಗಳಿವೆ ಎನ್ನುತ್ತಾರೆ.) ಈ ಕಾರಣದಿಂದಾಗಿ ಮಾಹೇಶ್ವರ ಸೂತ್ರವನ್ನು 'ಪ್ರತ್ಯಾಹಾರ ಸೂತ್ರ' ಅಂತಲೂ ಕರೆಯುತ್ತಾರೆ.

ಈಗ ಪ್ರತ್ಯಾಹಾರದ ಕಲ್ಪನೆಯ ಕಡೆ ಗಮನ ಹರಿಸೋಣ.

ಅಇಉಣ್ ಇದರಲ್ಲಿ ಣ್ ಇತ್ ಪ್ರತ್ಯಯವನ್ನು ಬಿಟ್ಟರೆ ಅಇಉ ಹೀಗೆ ಮೂರೇ ವರ್ಣಗಳು. ಇವನ್ನು 'ಮೊದಲಿನ ಅಕ್ಷರ ಅ ಹಾಗೂ ಕೊನೆಯ ಣ್ ಸೇರಿಸಿ 'ಅಣ್' ಅಂತ ಕರೆಯಬಹುದು. ಈ ಅಣ್ ಎನ್ನುವದೇ ಪ್ರತ್ಯಾಹಾರ.
ಏಳನೇ ಸೂತ್ರ ಞಮಙಣನಮ್ ಇದು ಞಮ್ ಪ್ರತ್ಯಾಹಾರ.
ಹತ್ತನೇ ಸೂತ್ರ ' ಜಬಗಡದಶ್' ಇದು ಜಶ್ ಪ್ರತ್ಯಾಹಾರ.

ಒಂದಕ್ಕಿಂತ ಹೆಚ್ಚು ಸೂತ್ರಗಳನ್ನು ಬಳಸಿಯೂ ಪ್ರತ್ಯಾಹಾರ ಒದಗುತ್ತದೆ. ಹೀಗಾಗುವಾಗ ಅನುಲೋಮ ಕ್ರಮದಲ್ಲಿ ಹಾಗೂ ಅನುಕ್ರಮವಾಗಿ ಮಾತ್ರ ಸೂತ್ರ ಬಳಸಬೇಕು.

ಒಂದರಿಂದ ನಾಲ್ಕರ ತನಕದ ಸೂತ್ರಗಳನ್ನು ಗಮನಿಸೋಣ. ಮೊದಲನೆಯ ಸೂತ್ರದ ಮೊದಲ ಅಕ್ಷರ 'ಅ'. ನಾಲ್ಕನೆಯ ಸೂತ್ರದ ಕೊನೆಯ ಅಕ್ಷರ 'ಚ್' ಇತ್ ಪ್ರತ್ಯಯ. ಈ ನಾಲ್ಕೂ ಸೂತ್ರಗಳನ್ನು ಸೇರಿಸಿದಾಗ 'ಅಚ್' ಪ್ರತ್ಯಾಹಾರ ದೊರಕುತ್ತದೆ. 'ಅಚ್' ಅಂದರೆ ಅ,ಇ,ಉ,ಋ,ಌ,ಏ,ಐ,ಓ,ಔ ಈ ಒಂಬತ್ತು ಸ್ವರಗಳು. ಈ ಒಂಬತ್ತು ಸ್ವರಗಳು ಎನ್ನುವ ಬದಲಾಗಿ "ಅಚ್" ಅಂತ ಹೇಳಿದರೆ ಸ್ವರಗಳು ಅಂತ ಸುಲಭವಾಗಿ ತಿಳಿಯಬಹುದು.

ಹೀಗೆ ಐದನೇ ಸೂತ್ರದಿಂದ ಹದಿನಾಲ್ಕು ಸೂತ್ರಗಳ ತನಕ ಒಟ್ಟಿಗೇ ಗಮನಿಸೋಣ.

ಐದನೇ ಸೂತ್ರದ ಮೊದಲನೇ ಅಕ್ಷರ 'ಹ'. ಹದಿನಾಲ್ಕನೇ ಸೂತ್ರದ ಕೊನೆಯ ಅಕ್ಷರ 'ಲ್' ಇತ್ ಪ್ರತ್ಯಯ. ಐದರಿಂದ ಹದಿನಾಲ್ಕು ಒಟ್ಟೂ ಹತ್ತು ಸೂತ್ರಗಳನ್ನು ಸೇರಿಸಿದಾಗ 'ಹಲ್' ಪ್ರತ್ಯಾಹಾರ ಸಿಗುತ್ತದೆ. ಈ 33 ವ್ಯಂಜನಗಳನ್ನು ಪ್ರತ್ಯೇಕವಾಗಿ ಹೇಳುವ ಬದಲಾಗಿ 'ಹಲ್' ಅಂತ ಹೇಳಿದರೆ ವ್ಯಂಜನಗಳು ಅಂತ ಧಾರಾಳವಾಗಿ ಹೇಳಬಹುದು. (ಹಲ್ ಪ್ರತ್ಯಾಹಾರ ಅಂದರೆ 5 ನೇ ಸೂತ್ರದಿಂದ 14 ನೇ ಸೂತ್ರದ ತನಕ. ಹಲ್ ಸೂತ್ರ ಅಂದರೆ 14 ನೇ ಸೂತ್ರ ಮಾತ್ರ.)

ಹೀಗೆ ಅ ಇ ಉ ಋ ಌ ಬದಲಾಗಿ ಅಕ್ ಅಂತ ಹೇಳಬಹುದು. (ಒಂದು ಹಾಗೂ ಎರಡನೇ ಸೂತ್ರಗಳು ಸೇರಿ). 'ಏ ಓ ಐ ಔ' ಬದಲಿಗೆ 'ಏಚ್' ಎನ್ನುವ ಪ್ರತ್ಯಾಹಾರದಿಂದ ಗುರುತಿಸಬಹುದು.(ಮೂರನೇ ಹಾಗೂ ನಾಲ್ಕನೇ ಸೂತ್ರಗಳು ಸೇರಿ) ಇಕ್ ಅಂದರೆ ಇ ದಿಂದ ಌ ತನಕದ ಅಕ್ಷರಗಳು. (ಇ ಉ ಋ ಹಾಗೂ ಌ).

ಈಗ ಸೂತ್ರ ರೂಪದಿಂದಲೇ ಅಕ್ಷರಗಳ ಸ್ವರೂಪವನ್ನು ನೋಡೋಣ.

ಮೊದಲಿನ 1 ರಿಂದ 4 ಸೂತ್ರದ ತನಕದ ಅಚ್ ಪ್ರತ್ಯಾಹಾರ, ಸ್ವರಗಳು.

ಅಚ್ ಸ್ವರಗಳಾದರೂ ಅಕ್ ಹಾಗೂ ಏಚ್ ವರ್ಣಗಳಲ್ಲಿ ಸೂಕ್ಷ್ಮ ವ್ಯತ್ಯಾಸವಿದೆ. ಅಕ್ ಸ್ವರಗಳಾದ ಅ,ಇ,ಉ,ಋ ಹಾಗೂ,ಌ ಸ್ವತಂತ್ರ ಸ್ವರಗಳು.(ಅ ಅಂದರೆ ಅ, ಆ. ಇ ಅಂದರೆ ಇ ಈ. ಉ ಅಂದರೆ ಉ ಊ. ಇವು ಸವರ್ಣಗಳು. ಈ ಸವರ್ಣಗಳಲ್ಲಿ ಎರಡೂ ರೀತಿಯ ವರ್ಣಗಳು ವ್ಯಾಕರಣ ಪ್ರಯೋಗದಲ್ಲಿ ಒಂದೇ ರೀತಿಯಿಂದ ವರ್ತಿಸುತ್ತವೆ.)

ಆದರೆ ಏಚ್ ವರ್ಣಗಳಾದ ಏ ಐ ಓ ಔ ಇವು ಸಂಯುಕ್ತ ಸ್ವರಗಳು. (ಅಂದರೆ ಅ+ಇ=ಏ. ಅ+ಏ=ಐ. ಅ+ಉ=ಓ. ಅ+ಓ=ಔ.)

5 ರಿಂದ 14 ಹಲ್ ಎಲ್ಲವೂ ವ್ಯಂಜನಗಳಾದರೂ,
5-6. ಹಣ್- ಅಂತಸ್ಥ ವ್ಯಂಜನಗಳು (ಯ ವ ರ ಲ)
7 ಞಮ್- ಅನುನಾಸಿಕಗಳು(ಞ ಮ ಙ ಣ ನ)
8-9. ಝಷ್- ಚತುರ್ಥ ವರ್ಣಗಳು(ಝ ಭ ಘ ಢ ಧ)
10. ಜಶ್- ತೃತೀಯ ವರ್ಣಗಳು(ಜ ಬ ಗ ಡ ದ)
11-12. ಖಯ್- ದ್ವಿತೀಯ ಹಾಗೂ ಪ್ರಥಮ ವರ್ಣಗಳು.(ಖ ಫ ಛ ಠ ಥ ಚ ಟ ತ ಕ ಪ)
13-14. ಶಲ್- ಊಷ್ಮ ವ್ಯಂಜನಗಳು.(ಶ ಷ ಸ ಹ)

(ಇಲ್ಲಿ ಅನುನಾಸಿಕ ಎನ್ನುವ ಬದಲು 'ಞಮ್' ಅಂತಲೂ, ಊಷ್ಮ ವ್ಯಂಜನಗಳು ಎನ್ನುವ ಬದಲು 'ಶಲ್' ಅಂತಲೂ ಗುರುತಿಸಬಹುದು).

ಪಾಣಿನಿ ಮಹರ್ಷಿ ಈ 14 ಮಾಹೇಶ್ವರ ಸೂತ್ರಗಳನ್ನು ಬಳಸಿಕೊಂಡು ಅಷ್ಟಾಧ್ಯಾಯೀ ಎನ್ನುವ ವ್ಯಾಕರಣ ಗ್ರಂಥವನ್ನು ರಚಿಸಿದ್ದಾನೆ.

***

ದೇವಸ್ಥಾನಕ್ಕೆ ಏಕೆ ಹೋಗುತ್ತೇವೆ?

– ಸುವರ್ಣಲಕ್ಷ್ಮಿ

ಭಕ್ತಿಯಿಂದ ದೇವರಿಗೆ ನಮಿಸಲು,
ಹೂಗಳು, ಅಗರಬತ್ತಿ ಹಾಗೂ ಕರ್ಪೂರದ ಸುವಾಸನೆ ಸವಿಯಲು,
ಗೆಳೆಯರನ್ನು ಭೇಟಿ ಮಾಡಲು,
ಪ್ರಶಾಂತತೆಯನ್ನು ಹೊಂದಲು,
ಅತ್ತೆ ಕಾಟದಿಂದ ಸೊಸೆ, ಸೊಸೆ ಕಾಟದಿಂದ ಅತ್ತೆ ತಪ್ಪಿಸಿಕೊಳ್ಳಲು,
ಪ್ರಿಯತಮೆ ಅಥವಾ ಪ್ರಿಯತಮರು ಭೇಟಿಯಾಗಲು,
ಹಳೆ ಪ್ರೇಮಿಗಳ ಭೇಟಿಯಾಗಲು,
ಪ್ರಸಾದ ಸವಿಯಲು,
ರೊಟೀನ್ ಲೈಫ್ ನಿಂದ ಫಾರ್ ಎ ಚೇಂಜ್
ದೇವಸ್ಥಾನದಿಂದ ಪ್ರಸಾದ, ಕೊಬ್ಬರಿ ಚಿಪ್ಪು, ಬಾಳೆಹಣ್ಣು ಕುಂಕುಮ ತಂದು ನಿಮಗಾಗಿ ಪೂಜೆ ಮಾಡಿಸಿದೆ
ಎಂದು ಹೇಳಿ ಬಾಸ್ ಗೆ ಕಾಕಾ ಹಿಡಿಯಲು,
ಅಮ್ಮನಿಗಾಗಿ,
ಅಪ್ಪನಿಗಾಗಿ,
ಅತ್ತೆ ಮಾವನಿಗಾಗಿ,
ಹೆಂಡತಿಗಾಗಿ,
ಗಂಡನಿಗಾಗಿ,
ಒಂದು ತೆಂಗಿನಕಾಯಿಯನ್ನು ಲಂಚವಾಗಿ ಒಡೆದು ನನ್ನ ಎಲ್ಲಾ ಕಷ್ಟಗಳನ್ನೂ ಪರಿಹರಿಸು ಎಂದು ಕೇಳಿಕೊಳ್ಳಲು,
ಮದುವೆಯಾಗುವ ಹುಡುಗಿ ಅಥವಾ ಹುಡುಗ ತಾವು ಸಂಪ್ರದಾಯಸ್ಥರು ಎಂದು ಬಿಂಬಿಸಿಕೊಳ್ಳಲು,
ದೇವಾಲಯಕ್ಕೆ ಬಂದಿರುವ ಅವಿವಾಹಿತರಲ್ಲಿ ತಮ್ಮ ಮಗ ಅಥವಾ ಮಗಳಿಗೆ ಹೊಂದುವ ಜೋಡಿ ಹುಡುಕಲು,
ತಮ್ಮ ಒಡವೆ ಹಾಗೂ ಸೀರೆಗಳ ಪ್ರದರ್ಶನಕ್ಕಾಗಿ,
ತಾವು ದೇಗುಲಕ್ಕೆ ನೀಡಿರುವ ದತ್ತಿ ದಾನಗಳ ಬಗ್ಗೆ
ಹೇಳಿಕೊಳ್ಳಲು,
ಪವಾಡಗಳನ್ನು ನಂಬಿ,
ಪವಾಡಗಳನ್ನು ಪರೀಕ್ಷಿಸಲು,
ದೇವಾಲಯಕ್ಕೆ ಸಂಬಂಧಿಸಿದ ಪುರಾಣ, ಇತಿಹಾಸ, ಐತಿಹ್ಯಗಳನ್ನು ತಿಳಿಯಲು,
ಶಾಸನಗಳು ಬಗ್ಗೆ ತಿಳಿಯಲು,
ಶಿಲ್ಪಕಲೆಯ ಸೊಬಗನ್ನು ಸವಿಯಲು,
ಧ್ಯಾನ ಮಾಡಲು,
ಶಿಲ್ಪಕಲೆಯ ಅಧ್ಯಯನಕ್ಕಾಗಿ,
ವಿವಿಧ ವಾಸ್ತುಶೈಲಿಯ ಶಿಲ್ಪಗಳನ್ನು ನೋಡಲು,

***

ಮೌಲ್ಯ ಮಾಪನ ಶಿಬಿರದಲ್ಲಿ

– ಗಿರಿಜಾ ರಾಜ್ ಎಲ್

ದ್ವಿತೀಯ ಪಿ.ಯು.ಸಿ. ಕನ್ನಡ ಮೌಲ್ಯಮಾಪನ ಶಿಬಿರ. ಎಲ್ಲರಿಗೂ ಬೇಗ ಬೇಗ ಮೌಲ್ಯ ಮಾಪನ ಮಾಡುವ ಸಂಭ್ರಮ,ತವಕ. ಭರದಿಂದ ಪ್ರಾರಂಭವಾಯಿತು ನಮ್ಮ ಕೆಲಸ.

ಶರೀರದಲ್ಲಿ ಬೆವರಿಳಿಸುವ ಈ ಸುಡು ಬೇಸಿಗೆಯಲ್ಲಿ, ನಮ್ಮ ಮೈಮನಗಳಿಗೆ ಮನರಂಜನೆಯ ತಂಗಾಳಿ ಬೀಸಿ ತಂಪು ಮಾಡುತ್ತಿದ್ದುದು (ಇನ್ನೊಂದು ದೃಷ್ಟಿಯಲ್ಲಿ ವ್ಯಥೆ ಪಡುವಂತೆಯೂ ಮಾಡುತಿದ್ದುದು) ನಮ್ಮ ವಿದ್ಯಾರ್ಥಿಗಳ ಚಿತ್ರ ವಿಚಿತ್ರ ಉತ್ತರಗಳು. ಮೂರನೆಯ ದಿನಕ್ಕೆ ಕಾಲಿಟ್ಟೆವು. ಸುಮಾರು ಮಧ್ಯಾಹ್ನ ಒಂದರ ಸಮಯ. ಬೇಸಿಗೆಯ ಧಗೆಗೆ ಮುಖದಲ್ಲಿ ಸುರಿಯುತ್ತಿದ್ದ ಬೆವರನ್ನು ಕರ್ಚೀಫಿನಿಂದ ಒರೆಸುತ್ತಿದ್ದೆ. ಕೈಯಲ್ಲಿ ಅರ್ಧ ಮೌಲ್ಯಮಾಪನ ಮಾಡಿದ ಉತ್ತರ ಪತ್ರಿಕೆಯಿತ್ತು. ಪಕ್ಕದಲ್ಲಿದ್ದ ಉಡುಪಿಯ ಗೆಳತಿ, "ಇದೆಂಥದ್ದು ನೋಡಿ ಮಾರಾಯರೇ... ಪರಿಪೂರ್ಣ ಭೂತಕಾಲ ಅಂತೆ, ನಿಮಗೆ ಗೊತ್ತುಂಟಾ? ತಾತ್ಕಾಲಿಕ ಭವಿಷ್ಯತ್ಕಾಲ ಅಂತೆ ಇವನ ಮಂಡೆ! ಅಯ್ಯೋ, ಸಾದಾ ಭೂತಕಾಲ ಬೇರೆ. ಇವತ್ತೆಲ್ಲಾ ಇಂಥದ್ದೇ ಪೇಪರು ಸಿಕ್ಕಿ ಮಂಡೆ ಬಿಸಿಯಾಯ್ತು ಮಾರಾಯರೇ!" ಎಂದು ಅಳುತ್ತಲೂ ನಗುತ್ತಲೂ ಇದ್ದರು. ನಾನು ಇನ್ನೇನು ಬಾಯ್ತೆರೆದು ನಗಬೇಕು, ಅಷ್ಟರಲ್ಲಿ "ಯುರೇಕಾ, ಯುರೇಕಾ... (ಕಂಡುಹಿಡಿದೆ, ಕಂಡುಹಿಡಿದೆ...) ಜೋರಾದ ಶಬ್ದ ಕೇಳಿ ಬಂದು ಇಡೀ ಕೋಣೆ ಸ್ತಬ್ಧವಾಯಿತು. ಇವನಾರಪ.. ಆರ್ಕಿಮಿಡೀಸ್ ಅಂತ ಎಲ್ಲರೂ ಕತ್ತು ಹೊರಳಿಸಿ ಯಾವ ಎ.ಇ. (ಅಸಿಸ್ಟೆಂಟ್ ಎಕ್ಸಾಮಿನರ್) ಹಾಗೆಂದದ್ದು ಎಂದು ನೋಡಿದರು. ಒಬ್ಬ ಏ.ಇ. ಕೈಯಲ್ಲಿ ಒಂದು ಉತ್ತರಪತ್ರಿಕೆ ಹಿಡಿದು "ಅಬ್ಬ! ಕೊನೆಗೂ ಕಂಡುಹಿಡಿದೆ, ಕಳ್ನನ್ಮಗಂದು ಹತ್ತು ನಿಮಿಷಗಳಿಂದ ಆಟವಾಡಿಸುತ್ತಿತ್ತು. ಒಳಗೆ 61, ಹೊರಗೆ 60 ಎಂಟ್ರಿ ಆಗಿದೆ" ಎಂದರು. ಅವರ ಸ್ವಯಂಕೃತಾಪರಾಧವನ್ನು ಅವರೇ ಬಣ್ಣಿಸಿಕೊಂಡ ರೀತಿ ಇದು. ಕತ್ತು ಹೊರಳಿಸಿದವರೆಲ್ಲ "ಅಯ್ಯೋ ಮಹರಾಯ! ಅದಕ್ಯಾಕೆ ಹಾಗೆ ಕೂಗಬೇಕು, ಆರ್ಕಿಮಿಡೀಸ್‌ಗಿಂತ ದೊಡ್ಡ ಸಂಶೋಧನೆ ಮಾಡಿದಂತೆ" ಎಂದು ತಮ್ಮ ತಮ್ಮ ಪೇಪರುಗಳಿಗೆ ಮರಳಿದರು.

ಹೌದು! ವಿಜ್ಞಾನದಲ್ಲಿ ಎಂದೋ ಓದಿದ ನೆನಪು. ಬಾಯನ್ಸಿ ಕಂಡುಹಿಡಿದಾಗ ಯುರೇಕಾ.. ಯುರೇಕಾ.. ಎಂದು ಕೂಗುತ್ತಾ ಆರ್ಕಿಮಿಡೀಸ್ ಸ್ನಾನದ ಬಚ್ಚಲಿನಿಂದಲೇ ಓಡಿ ಬಂದಿದ್ದನಂತೆ. ವೈಜ್ಞಾನಿಕ ಸಂಶೋಧನೆಯ ಆಸಕ್ತಿ, ಅರ್ಪಣಾ ಮನೋಭಾವ ಎಷ್ಟರಮಟ್ಟಿಗೆ ವಿಜ್ಞಾನಿಗಳನ್ನು ಆವರಿಸಿರುತ್ತದೆ ಎಂಬುದಕ್ಕೆ ಇದಕ್ಕಿಂತ ಉದಾಹರಣೆ ಬೇಕಿಲ್ಲ. ಕಂಡುಹಿಡಿದ ಅಗಾಧ ಸಂಭ್ರಮದಲ್ಲಿ ತಾನಿರುವ ಸ್ಥಿತಿಯೂ ಆರ್ಕಿಮಿಡೀಸನಿಗೆ ಮರೆತುಹೋಗಿತ್ತು. ಈ ನೂತನ ಆರ್ಕಿಮಿಡೀಸರ ಖುಷಿ ನೋಡಿ ಉತ್ತರ ಕರ್ನಾಟಕದವರೊಬ್ಬರು, "ಏನ್ ಭಯಂಕರ ಖುಷಿಯಾಗಲಿಕ್ಕೆ ಹತ್ತದ ನೋಡ್ರೀ, ಅಬ್ಬ! ಲಾಟರೀಲಿ ಲಕ್ಷ ಹೊಡೆದಾಂಗ ಕಳೀ ನೋಡ್ರಿ ಮಾರಿ ಮ್ಯಾಗ" ಎಂದರು. ನಮ್ಮ ಡಿ.ಸಿ.ಇ. ಅಂತೂ (ಡೆಪ್ಯೂಟಿ ಚೀಫ್ ಎಕ್ಸಾಮಿನರ್) ಮೊದಲೇ ಖುಷಿಯ ಮನುಷ್ಯರು. ನಗುವಿನ ಸಂಭ್ರಮದಿಂದ ಅವರಿನ್ನೂ ಸುಧಾರಿಸಿಕೊಂಡಿರಲಿಲ್ಲ.

ನಾವಿದ್ದ ಕೋಣೆಯಲ್ಲಿ ಆರರಿಂದ ಏಳು ಬ್ಯಾಚ್‌ಗಳಿದ್ದವು. ಒಂದೊಂದು ಬ್ಯಾಚಿನಲ್ಲೂ ಒಬ್ಬ ಡಿ.ಸಿ.ಇ. ಮತ್ತು ಐದು ಜನ ಎ.ಇ.ಗಳು, ಅಲ್ಲಿರುವ ಎರಡು ಫ್ಯಾನುಗಳು ಅಲ್ಲಿರುವ ಬಿಸಿ ಗಾಳಿಯನ್ನೇ ಸುತ್ತಿಸುತ್ತ ನಿರೀಕ್ಷಿಸುತ್ತಿದ್ದ ತಂಪು ತರಲು ವಿಫಲವಾಗಿದ್ದವು.

ಇಷ್ಟೆಲ್ಲಾ ತಮಾಷೆ ನಡೆಯುತ್ತಿದ್ದರೆ, ನಮ್ಮ ಬ್ಯಾಚಿನಲ್ಲಿದ್ದ ಕೋಲಾರದ ಕಡೆಯಿಂದ ಬಂದವರು, ತಮಗೂ ಹಾಸ್ಯಕ್ಕೂ ಯಾವುದೇ ಸಂಬಂಧವಿಲ್ಲದವರಂತೆ ಕಣ್ಣುಗಳನ್ನು ಉತ್ತರ ಪತ್ರಿಕೆಯಲ್ಲಿ ಕೀಲಿಸಿ, ಫೇಲಾಗುವುದಕ್ಕೆ ಲಾಯಕ್ಕಾಗಿದ್ದ ಪತ್ರಿಕೆಯ ಪದಪದಗಳನ್ನೂ ಓದುತ್ತಾ, ಹೇಗಾದರೂ 30 ಮಾಡುವುದಕ್ಕೆ ಸಾಧ್ಯವಾ? ಅಂತ ಉತ್ತರ ಹುಡುಕುತ್ತಿದ್ದರು. (ಇವರಿಗೇನಾದರೂ ಉತ್ತರ ಸಿಕ್ಕು ಮೂವತ್ತು ಮಾಡಿದರೂ, ಯುರೇಕಾ ಎಂದಾಗಲೀ, "I came I saw I conquered" ಎಂದಾಗಲೀ ಕೂಗುವ ಸಾಧ್ಯತೆಯನ್ನು ಅವರ ಸ್ವಭಾವ ನೆನೆಸಿಕೊಂಡು ತಳ್ಳಿ ಹಾಕಿದೆ). ಅಷ್ಟೊತ್ತಿಗೆ ಮತ್ತೆ ಯುರೇಕಾ ಕೇಳಿಸಿತು. "ಮತ್ತೆ ಸುರುವಾತು ನೋಡ್ರಿ, ಈ ಆರ್ಕಿಮಿಡೀಸ್ ಖಾಯಿಲೆ, ಇವ ಏನ್ರೀ ತಾನೇ ತಪ್ಪು ಎಂಟ್ರಿ ಮಾಡಿ ಮತ್ತೆ ಅದನ್ನು ತಾನೇ ಸರಿ ಮಾಡಿ ಯುರೇಕಾ, ಯುರೇಕಾ ಅಂತ ಗದ್ದಲ ಮಾಡೋದು, ಛಲೋ ಕೆಲ್ಸ ಮಾಡ್ಲಿಕ್ಕೆ ಬರಾಣಿಲ್ಲ!" ಎಂದು ಉತ್ತರ ಕರ್ನಾಟಕದವರೊಬ್ಬರು ಗೊಣಗುಟ್ಟುತ್ತಿದ್ದರು. ಮೌಲ್ಯಮಾಪನ ಮುಗಿಯುವ ಹೊತ್ತಿಗೆ ಎಷ್ಟು ಸಲ ಈ ಆರ್ಕಿಮಿಡೀಸ್ ಯುರೇಕಾ ಅಂತ ಕೂಗಬಹುದು ಎಂದು ನಾನು ಲೆಕ್ಕ ಹಾಕುತ್ತಿದ್ದಂತೆ, ಕೋಲಾರದ ಕಡೆಯ ಸೀರಿಯಸ್ ಗೆಳೆಯರು ನಮ್ಮ ಡಿ.ಸಿ.ಇ. ಮುಂದೆ ಒಂದು ಪೇಪರು ಹಿಡಿದು, "ನೋಡ್ರಿ ಸರ್ ಈ ಪೇಪರು, ಒಂದು ಅಕ್ಷರವೂ ಅರ್ಥ ಆಗ್ತಿಲ್ಲ, ಇವತ್ತೆಲ್ಲಾ ಇಂಥಾದ್ದೇ ಪ್ಯಾಕೆಟ್ಟು" ಎಂದರು, ಭಾರವಾದ ದನಿಯಲ್ಲಿ. ಅಳುವುದೊಂದೇ ಬಾಕಿ ಅವರು. ಡಿ.ಸಿ.ಇ. ಅದನ್ನು ನೋಡಿ ನಗುತ್ತಾ, "ಇದು ಕನ್ನಡ ಅಂತೂ ಅಲ್ಲರೀ" ಎಂದರು. ನಾನು ಅದನ್ನು ಕೈಗೆ ತೆಗೆದುಕೊಂಡು "ಸರ್, ಇದು ಪೈಶಾಚಿಕ ಭಾಷೆ ಇರಬೇಕು" ಎಂದೆ. ಡಿ.ಸಿ.ಇ. ದೊಡ್ಡದಾಗಿ ನಕ್ಕುಬಿಟ್ಟರು. ಎಲ್ಲೆಡೆ ನಗೆಯ ಕಾರಂಜಿ ಚಿಮ್ಮಿತು.

ಆ ದಿನ ಯಾವ ದೇವರ ಕೃಪೆಯೋ ನನಗೆ ಎಲ್ಲಾ ಒಳ್ಳೆಯ ಪೇಪರ್‌ಗಳೇ ಸಿಕ್ಕಿದ್ದವು. 12 ಪೇಪರುಗಳೂ 70ರಿಂದ 80ರ ಮೇಲೆಯೇ. ಅಂಥ ಮುತ್ತಿನಂಥ ಕಸ್ತೂರಿ ಕನ್ನಡ ಬರೆದಿದ್ದ ವಿದ್ಯಾರ್ಥಿಗಳ ಪೇಪರಿನ ಗುಂಗಿನಲ್ಲಿದ್ದ ನಾನು ಇಂಥಾ ಪೇಪರು ನೋಡಿ, ಹಾಲಿನ ಕೊಳದಿಂದ ಕೊಚ್ಚೆಯಲ್ಲಿ ಬಿದ್ದಂತೆ ಭಾಸವಾಗಿ ಇನ್ನೇನು ಹೇಳಬೇಕು ಹೇಳಿ.. (ಎಷ್ಟೋ ಸಲ ವಿದ್ಯಾರ್ಥಿಗಳು ನಮ್ಮ ವ್ಯಾಕರಣ ಜ್ಞಾನವನ್ನೇ ಬುಡಮೇಲು ಮಾಡಿಬಿಡುತ್ತಾರೆ. ಅವರು ಬರೆದಿರೋದು ಸರಿಯೋ, ನಾವು ಬರೆಯೋದು ಸರಿಯೋ ಎಂಬ ಜಿಜ್ಞಾಸೆಗೆ ಮನಸು ಒಳಗಾಗಿ ಬಿಡುತ್ತದೆ)

ಅಷ್ಟು ಹೊತ್ತಿಗೆ ಉಡುಪಿಯ ಗೆಳತಿ, "ನೋಡಿ ಇಲ್ಲಿ ಮಾರಾಯರೇ, ಎಂಥಾ ಮಾಡೋದು? ಇವನಾರೋ ರೂಢ ನಾಮಕ್ಕೆ ಉದಾಹರಣೆ ಬರೆದಿದ್ದಾನೆ– 'ಆಡು, ಓಡು, ಊಟ ಮಾಡು' ಅಂತ. ಇವನೂ ಅಷ್ಟನ್ನೇ ಮಾಡಿಕೊಂಡು ಮನೆಯಲ್ಲಿ ಇದ್ದಿದ್ದರೆ ಸಾಕಾಗಿತ್ತು ಅಲ್ಲವೋ, ಇಲ್ಲಿ ಯಾಕೆ ಬಂದು ನಮ್ಮ ಮಂಡೆ ಬಿಸಿ ಮಾಡುವುದು?" ಎಂದರು.

ನನಗೂ ಹಿಂದೆ ಅಂಥದ್ದೊಂದು ಪೇಪರು ಬಂದಿತ್ತು. ಅದರಲ್ಲಿ ರೂಢನಾಮಕ್ಕೆ ಉದಾಹರಣೆ "ಮಾಡು, ಕೊಡು" ಎಂದಿತ್ತು. ಆಗ ಉಡುಪಿಯ ಗೆಳತಿ, "ಸರಿಯಾಗಿ ಮೌಲ್ಯಮಾಪನ ಮಾಡು, ಮಾರ್ಕ್ಸ್ ಕೊಡು ಅಂತ ನಿಮಗೇ ನಿರ್ದೇಶನ ಮಾಡುತ್ತಿದ್ದಾನೆ ಅಲ್ಲವೋ?" ಎಂದು ಅಣಕಿಸಿದ್ದರು. ಈಗ ಅವರೇ ಸಿಕ್ಕಿ ಹಾಕಿಕೊಂಡರು. ಈ ಉಡುಪಿಯವರ ಮಂಡೆ ಬಿಸಿ ಮಾಡಬೇಕೆಂದು ಲೆಕ್ಕ ಹಾಕಿ ನಗುತ್ತಾ, "ನೋಡ್ರೀ, ಅವನು ನಿಮಗೆ ಏನು ನಿರ್ದೇಶನ ನೀಡುತ್ತಿದ್ದಾನೆ ಗೊತ್ತಾ? ಆಟ ಆಡಿ, ಊಟ ಮಾಡು ಹೋಗು, ಮೌಲ್ಯಮಾಪನಕ್ಕೆ ನೀನು ಲಾಯಕ್ಕಿಲ್ಲ" ಅಂತ ಅಣಕಿಸುತ್ತಿದ್ದಾನೆ ಅಂದಾಗ, ಅವರು ಕೋಪದಿಂದ ನನ್ನ ಕೈ ಜಿಗುಟಿದಾಗ ನಾನು " ಕೃಷ್ಣ ಕೃಷ್ಣ" ಎಂದೆ. "ನಮ್ಮ ಕೃಷ್ಣ ಇಂಥವರನ್ನೆಲ್ಲ ಕಾಪಾಡುವುದಿಲ್ಲ, ಗೊತ್ತುಂಟಾ?" ಎಂದು ಮುಖ ಉಬ್ಬಿಸಿದಾಗ, "ಸಾರಿ, ಶಾಪ ಹಾಕಬೇಡಿ, ಎಲ್ಲಾ ತಮಾಷೆಗಾಗಿ" ಎಂದು ನುಣಿಚಿಕೊಂಡೆ, ಆಗ ಅವರ ಮುಖದಲ್ಲಿ ನಗೆಮಲ್ಲಿಗೆ ಅರಳಿತು.

***

ಜನಸಾಮಾನ್ಯನ ಕತೆ - ಪೇಪೆ

– ವಿಠ್ಠಲ. ಇಜೇರಿ

ರಶೀಯಾ ದೇಶದ ಸಾಮಾನ್ಯ ಬಡ ಕುಟುಂಬದ ಮ್ಯಾಕ್ಷಿಮ್ ಗಾರ್ಕಿಯ ಕತೆ ಪೇಪೆ. ಮ್ಯಾಕ್ಸಿಮ್ ಗಾರ್ಕಿಯು ಕತೆ, ಕಾದಂಬರಿ, ನಾಟಕಗಳನ್ನು ರಚಿಸಿದ್ದಾನೆ. ಎಲ್ಲ ಕೃತಿಗಳಲ್ಲಿ ಕೆಳ ವರ್ಗದವರ ಧ್ವನಿ ಪ್ರತಿನಿಧಿಸುತ್ತಿದೆ. ತ್ಸಾರ ಆಡಳಿತ ವರ್ಗದ ವಿರುದ್ಧ ಹೋರಾಡಿದ ಇವನು ಲೆನಿನ್‌ಗೆ ಆತ್ಮೀಯನಾಗಿದ್ದನು. ಈ ಕತೆಯನ್ನು ಕೆ. ಆರ್. ನಾರಾಯಣ ಶೆಟ್ಟರು (ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರು, ಬನುಮಯ್ಯ ಕಾಲೇಜು, ಮೈಸೂರು) ಅನುವಾದ ಮಾಡಿದ್ದಾರೆ. ಹೆಚ್ಚು ಇದ್ದುದನ್ನು ಹಂಚಿಕೊಂಡು ತಿನ್ನು- ಇದು ಸಮತಾವಾದದ ಲಕ್ಷಣ. ಅಣ್ಣ ಬಸವಣ್ಣನವರ ಮನೆಗೆ ಕಳ್ಳ ಬಂದಾಗ ಅವರಾಡುವ ಕಳ್ಳನ ಮನೆಗೆ ಕಳ್ಳ ಬಂದರೆ ತಪ್ಪೇ ಅನ್ನುವ ಮಾತಿನಲ್ಲಿಯೂ ಅದೇ ಧ್ವನಿ ಇದೆ. ಅವರ ಮಾತಿನ ಅರ್ಥ ಅವಶ್ಯಕತೆಗಿಂತ ಹೆಚ್ಚು ಹೊಂದುವುದೂ ಅಪರಾಧ. ಬಸವಣ್ಣ ನಿಸ್ಪೃಹರು. ಅವರ ಮಾತು ಕಳ್ಳನಿಗೂ ಕೊಡುವ ಗೌರವದಂತಿದೆ ಹೊರತಾಗಿ ಅವರ ಗಂಟು ಕಳ್ಳತನದ್ದಲ್ಲ. ಈ ಪೇಪೆ ಕತೆ ವಿನೋದವನ್ನೂ ಒಳಗೊಂಡಿದೆ. ಪೇಪೆ ಪ್ರಕೃತಿ ಪ್ರೇಮಿ ಇಟಲಿಯ ಸುಂದರ ಸಮುದ್ರ ತೀರ, ಕಡಲಿನ ಅಲೆಗಳು, ಬಣ್ಣ ಬಣ್ಣದ ಹೂಗಳು,, ನೀಲಾಕಾಶ, ಬಣ್ಣದ ಓತಿಕ್ಯಾತಗಳಂತ ಜೀವಿಗಳನ್ನು ಪ್ರೀಸುತ್ತಾನೆ. ಕತೆಯ ಸಾರ ಇಂತಿದೆ.

ಪೇಪೆ ಬಡವ, ತನ್ನ ಹಳೆಯ ತೂತುಬಿದ್ದ ಶರಟಿನಲ್ಲಿಯೇ ಓಡಾಡುತ್ತಾನೆ. ಸಾಮಾನ್ಯವಾಗಿ ಬೆಳಕಿಲ್ಲದ ಕೊಳಕು ಬಾರುಗಳಲ್ಲಿ ಕುಡಿದು ಅವರಿವರನ್ನು ಮೆಚ್ಚಿಸಲು ಹಾಡುತ್ತಾನೆ. ಅದು ಹುಡುಗಾಟಕ್ಕೋ ವಾಸ್ತವವೋ ಅವನಿಗೇ ಗೊತ್ತು.

" ನನ್ನ ಗೆಳೆಯ ಸತ್ತನು
ನನ್ನ ಮಡದಿ ಅತ್ತಳು
ಎಂಥ ದುಃಖ ಅವಳದು
ನನಗೇನೂ ತಿಳಿಯದು "

ಅವನ ಹಾಡು ಕೇಳುತ್ತ, ನಗೆಯಾಡಿಕೊಂಡು ಒಂದಿಷ್ಟು ಹುಡುಗರು ಬೆನ್ನು ಹತ್ತುತ್ತಿದ್ದರು. ಅವನೊಮ್ಮೆ ತಿರುಗಿದರೆ ಮೊಲಗಳು ಅತ್ತಿತ್ತ ಓಡಿ ಬಚ್ಚಿಟ್ಟು ಕೊಳ್ಳುವಂತೆ ಗಿಡಗಂಟಿಗಳಲ್ಲಿ ಅಡಗಿಬಿಡುತ್ತಿದ್ದರು.

ಆದೊಮ್ಮೆ ಒಬ್ಬಾಕೆ ಪೇಪೆಗೆ ಒಂದು ಸೇಬು ಹಣ್ಣಿನ ಬುಟ್ಟಿ ಕೊಟ್ಟು ತನ್ನ ಗೆಳತಿಯ ನಿವಾಸಕ್ಕೆ ತಲುಪಿಸಿ ಬಾ, ನಿನಗೆ ಬಹುಮಾನ ಕೊಡುತ್ತೇನೆ ಅಂದಳು. ಪೇಪೆ ಬುಟ್ಟಿಯನ್ನೇನೋ ತೆಗೆದುಕೊಂಡು ಹೋದ. ಒಮ್ಮೆಲೇ ಸುಸ್ತಾಗಿ ಸಂಜೆ ಖಾಲಿ ಬುಟ್ಟಿಯೊಡನೆ ಬಂದ. ಅಮ್ಮಾವರಿಗೆ ಸಿಟ್ಟು " ಯಾಕೋ ಇಷ್ಟು ಹೊತ್ತು. "

ಪೇಪೆ : ಸಾಕಾಯ್ತು ಅಮ್ಮಾವ್ರೇ, ಹತ್ತಕ್ಕಿಂತ ಹೆಚ್ಚು

ಅಮ್ಮಾವ್ರು : ಹೌದು, ಸೇಬು ಹತ್ತಕ್ಕಿಂತ ಹೆಚ್ಚೇ ಇದ್ದವು.

ಪೇಪೆ : ಅಮ್ಮಾವ್ರೇ, ನಾನು ಹೇಳಿದ್ದು ಹತ್ತಕ್ಕಿಂತ ಹೆಚ್ಚು ಹುಡುಗರು ನನ್ನ ಬೆನ್ನುಹತ್ತಿದ್ದರು. ನನಗೆ ಕತ್ತೆ ಎಂದೆಲ್ಲ ಬ ಬೈದರು, ಸುಮ್ಮನಿದ್ದೆ, ಚೌಕದ ಬಳಿ ನಿಮ್ಮನ್ನು ಬೈಯ್ಯಲಾರಂಭಿಸಿದರು, ನನಗೆ ನಿಮ್ಮನ್ನು ಬೈದದ್ದು

ತಡೆಯಲಾಗಲಿಲ್ಲ, ಬುಟ್ಟಿ ಕೆಳಗೆ ಇಳಿಸಿದೆ. ಸೇಬುಗಳನ್ನು ಒಬ್ಬೊಬ್ಬನಿಗೂ ಎಸೆಯಲಾರಂಭಿಸಿದೆ. ಚೌಕದ ಗೋಡೆ ಬಲು ಗಟ್ಟಿ, ಸೇಬುಗಳೆಲ್ಲ ತುಂಡಾದವು. ಅವುಗಳನ್ನೇ ತಿನ್ನುತ್ತಾ ಆ ಹುಡುಗರು ನಗೆಯಾಡುತ್ತಾ ಓಡಿದವು.

ಅಮ್ಮನವರಿಗೆ ಕೋಪ, ಪೇಪೆಗೆ ಹೊಡೆಯಲು ಕೈ ಎತ್ತಿದರು. ಪೇಪೆ "ನಿಮ್ಮನ್ನು ಬೈಯ್ದಾಗ ನನಗೂ ನಿಮ್ಮ ಮೇಲಿನ ಗೌರವದಿಂದಲೇ ನಾನು ಕೋಪದಿಂದ ಸೇಬಿನಿಂದ ಹುಡುಗರನ್ನು ಹೊಡೆದದ್ದು ಗೊತ್ತೋ?" ಅನ್ನುತ್ತಾ ಹೊರಟು ಹೋದ.

ಅವನ ಹಿರಿಯ ಸೋದರಿ ಪರಿಚಾರಿಕೆಯಾಗಿ ಶ್ರೀಮಂತರ ಮನೆಗೆ ಹೋಗುತ್ತಿರುತ್ತಾಳೆ. ಆಕೆಯಲ್ಲಾಗುವ ಬದಲಾವಣೆಗಳನ್ನು ಪೇಪೆ ಹೀಗೆ ಗಮನಿಸುತ್ತಾನೆ.

“ಒಪ್ಪ ಓರಣ ಬಂತು, ಕೆನ್ನೆ ಗುಲಾಬಿಯಾಯಿತು. ಗ್ರೀಷ್ಮದಲ್ಲಿಯ ಪೇರು ಹಣ್ಣಿನಂತೆ ಆಕೆ ರಸದುಂಬತೊಡಗಿದಳು".

ಆಕೆಗೆ ಕೇಳಿದ, "ದಿನಾಲೂ ಉಣ್ಣುತ್ತೀಯಾ?”

ಆಕೆ : ಓಹೋ, ಎರಡು ಮೂರು ಸಲ.

ಪೇಪೆ : ಜಾಸ್ತಿ ಉಣ್ಣಬೇಡ, ಹಲ್ಲು ಸವೆದಾವು ಹುಷಾರು... ನಿನ್ನ ಒಡೆಯರು ಭಾರಿ ಶ್ರೀಮಂತರೇ?

ಆಕೆ : ಓಹೋ, ದೊರೆಗಳಿಗಿಂತ ದೊಡ್ಡ ಶ್ರೀಮಂತರು

ಪೇಪೆ : ಅವರ ಬಳಿ ಬಹಳ ಶರ್ಟುಗಳು ಇರಬೇಕಲ್ಲವೇ?

ಆಕೆ : ಓಹೋ, ಮಸ್ತಾಗಿ ತುಂಬಿವೆ.

ಪೇಪೆ : ಹಾಗಾದರೆ ನನಗೊಂದು ತಗೊಂಡು ಬಾ, ತುಂಬಾ ದೊಗಳೆ ಇರಬಾರದು, ಬೆಚ್ಚಗೆ ಇರಬೇಕು. ಇಕೋ ನನ್ನ ಷರಟು ಹರಿದುಹೋಗಿದೆ.

ಆಕೆ : ಅದು ಸರಿ, ಆದರೆ ಅವರು ನಾವು ಕಳ್ಳತನ ಮಾಡಿದ್ದೇವೆ ಅಂದುಕೊಂಡರೆ ?

ಪೇಪೆ : ಜನರು ನಮಗಿಂತ ಜಾಣರೇ, ನಾವು ಅವರಿಗೆ ಮಸ್ತಾಗಿ ಇರುವಾಗ ಒಂದು ತೆಗೆದುಕೊಂಡರೆ ಅದು ಹಂಚಿಕೊಂಡು ಇಬ್ಬರು ಅನುಭವಿಸಿದಂತೆ. ಅದು ಕಳ್ಳತನ ಅಲ್ಲ ಎಂದು ತಿಳಿಹೇಳಬೇಕು.

ಪೇಪೆ ಧೈರ್ಯವಂತ ಶ್ರೀಮಂತನ ಮನೆಗೆ ಹೋಗಿದ್ದ. ಅವನ ಸೋದರಿ ಅಡುಗೆ ಮನೆಗೆ ತೆಳು ಕಂದು ಬಣ್ಣದ ಶರಾಯಿಯನ್ನು ತೆಗೆದುಕೊಂಡು ಬಂದಳು. ಶರಾಯಿ ಸ್ವಲ್ಪ ಉದ್ದ, ಪೇಪೆ ಅಲ್ಲಿಯೇ ಇದ್ದ ಚಾಕು ತೆದುಕೊಂಡು

ಉದ್ದವನ್ನು ಕಡಿಮೆ ಮಾಡುವಾಗಲೇ ಅಲ್ಲಿಗೆ ಮನೆಯೊಡತಿ ಬಂದಳು. ಬಂದಾಕೆಯೇ ಕಟು ಮಾತುಗಳಲ್ಲಿ ಅವರಿಬ್ಬರನ್ನು ಬೈಯ್ಯತೊಡಗಿದಳು. ಗದ್ದಲ ಕೇಳಿ ಮಾಲೀಕ ಅಲ್ಲಿಗೆ ಬಂದು, "ಏನಿದೆಲ್ಲ ರಂಪ" ಅಂದ.

ಪೇಪೆ "ಅಯ್ಯಾವ್ರೆ ಇದೆಲ್ಲ ಅಮ್ಮ ಅವರದು. ನೀವು ಧಾರಾಳಿಗಳು ಎಂದು ತಿಳಿದು ನಿಮ್ಮ ಒಂದು ಶರ್ಟು ತೆಗೆದುಕೊಂಡಿದ್ದೇನೆ. ಇವರು ನಾವು ಶರಾಯಿ ಕಳ್ಳತನ ಮಾಡಿದ್ದೇವೆಂದು ಅಂದುಕೊಂಡಿದ್ದಾರೆ. ಹಾಗೇ ಕಳ್ಳತನ ಮಾಡುವುದಿದ್ದರೆ ಹಾಡು ಹಗಲೇ, ನೀವೆಲ್ಲ ಮನೆಯಲ್ಲಿ ಇರುವಾಗ ಬರುತ್ತಿದ್ದೆವೆ? ಅಮ್ಮಾ ಅವರು ನಿಮಗೆ ಇನ್ನೊಂದು ಷರಟು ಕೊಳ್ಳುವ ಯೋಗ್ಯತೆ ಇಲ್ಲ ಅಂದುಕೊಂಡಿದ್ದಾರೆ.

ಅವನ ಮಾತುಗಳನ್ನು ಕೇಳಿಯೂ,

ಮಾಲೀಕ : ನೋಡು, ಇತ್ಯರ್ಥಕ್ಕಾಗಿ ಪೋಲಿಸು ಕರೆಸಿ ನಿನ್ನನ್ನು ಜೇಲಿಗೆ ತಳ್ಳಬೇಕಾಗುತ್ತದೆ.

ಪೇಪೆ : ನೋಡಿ ಅಯ್ಯಾವ್ರೆ, ಜೇಲಿಗೆ ಕಳಿಸೋದು ಖುಷಿಯಾದರೆ ಹಾಗೇ ಮಾಡಿ. ಆದರೆ ನನ್ನಲ್ಲಿ ಹೆಚ್ಚು ಶರಟು ಇದ್ದು, ನಿಮ್ಮಲ್ಲಿ ಒಂದೂ ಶರಟು ಇಲ್ಲದಿದ್ದಲ್ಲಿ ನಾನು ಒಂದಲ್ಲ ಮೂರು ಶರಟು ನಿಮಗೆ ಕೊಟ್ಟು ಬಿಡುತ್ತಿದ್ದೆ.

ಶ್ರೀಮಂತ ಮಾಲೀಕನಿಗೆ ಅವನ ಮಾತು ತಾಗಿತು. ಅವನಿಗೆ ಚಾಕಲೇಟು ಕೊಟ್ಟು, ಕೈಗೊಂದು ನಾಣ್ಯವನಿತ್ತ. ಆಗಲೂ ಪೇಪೆ ಹುಡುಗಾಟ ಬಿಡಲಿಲ್ಲ. ಕಣ್ಣು ಮುಚ್ಚಿ ಧನ್ಯವಾದ ಹೇಳುತ್ತಾ, "ಅಯ್ಯಾವ್ರೆ, ಚಾಕ್ಲೇಟ್ ಸಾಚಾ, ಈಗ ಬಾಯಲ್ಲಿದೆ. ಈ ನಾಣ್ಯ ಸಾಚಾ ಅಂದುಕೊಳ್ಳಲೇ? ಯಾಕೆಂದರೆ ಈಗ ನಾನು ಕಣ್ಣು ಮುಚ್ಚಿರುವೆ, ನಾಣ್ಯ ಕಾಣುತ್ತಿಲ್ಲ" ಅಂದ.

ಪೇಪೆ ಹಾಡು ಹೇಳಿಕೊಳ್ಳುತ್ತ ತಿರುಗಾಡುವುದನ್ನು ಕಂಡು ಹಲವು ಜನ ಇವನಾವನೋ ತಲೆ ತಿರುಕನೆಂದು ಅಂದುಕೊಂಡರೆ, ಹಲವರು ಇವನೊಬ್ಬ ನಾಡಕವಿ ಅಂದುಕೊಳ್ಳುತ್ತಿದ್ದರು. ಪೇಪೆ ಇದಾವುದನ್ನೂ ಗಮನಿಸದೆ ತನ್ನದೇ ಆದ ರೀತಿಯಲ್ಲಿ ತಿರುಗಾಡಿಕೊಂಡಿದ್ದ.

ಇದು ಕೆ. ಆರ್. ನಾರಾಯಣ ಶೆಟ್ಟರು ಬರೆದ 'ಬಹು ಬಗೆಯ ಕತೆಗಳು' ಪುಸ್ತಕದ ಕತೆ. ಕಮ್ಯುನಿಸಮ್ ಕಿತ್ತುಕೊಂಡು ತಿನ್ನು ಅಂದರೆ ನಮ್ಮ ಸಂಸ್ಕೃತಿ ಹಂಚಿಕೊಂಡು ತಿನ್ನು, ದಾನಮಾಡಿ, ಸಹಾಯ ಮಾಡಿ, ಉಪಕಾರ ಮಾಡಿ ಅನ್ನುತ್ತದೆ.

ಇದೇ ಈ ಕಥೆಗೆ ಹಿನ್ನೆಲೆ. ಅದು ನಮ್ಮ ನೆಲದ ಗುಣ. ಅದು ಪೇಪೆಯಲ್ಲಿ ಧಾರಾಳವಾಗಿತ್ತು

***

ಸಣ್ಣ ಕತೆ

ಸಂತಸ ಅರಳುವ ಸಮಯ...

– ಸುಜಾತಾ ರವೀಶ್

"If you are given a great opportunity take it, opportunity doesn't knock twice"

ಸುಮ್ಮನೆ ಕೈಯಲ್ಲಿದ್ದ ಪುಸ್ತಕದ ಮೇಲೆ ಕಣ್ಣಾಡಿಸುತ್ತಿದ್ದವಳಿಗೆ ಕಂಡುಬಂದಿತ್ತು ಈ ನುಡಿಗಳು. ಇದೇನು ಕಾಕತಾಳೀಯವೋ ಅಥವಾ ನನಗೆ ಹೀಗೇ ಅನ್ನಿಸುತ್ತಿದೆಯೋ ಎಂದು ಅರೆಕ್ಷಣ ಯೋಚಿಸಿದಳು. ಭವಿಷ್ಯಕ್ಕೆ ಸೂಚನೆ ಕೊಡುತ್ತಿದೆಯೋ ಅಥವಾ ನನಗೆ ಸಲಹೆ ಮಾಡುತ್ತಿದೆಯೋ, ಅಂತೂ ಏಕೋ ಶಾಂತಿಯೇ ಇಲ್ಲದೆ ಗೊಂದಲದ ಗೂಡಾಗಿ ಬಿಟ್ಟಿದೆ ಮನ.

ಈ ಎಲ್ಲಾ ಆಗಿದ್ದು ಅವರಿಂದ.. ಅವರೇಕೆ ನನ್ನ ಬ್ಯಾಂಕಿಗೆ ವರ್ಗವಾಗಿ ಬರಬೇಕಿತ್ತು. ಅಂದರೆ ಬಂದಿರಲಿ ನನ್ನದೇ ಸೇಮ್ ಅಭಿರುಚಿಗಳೇಕೆ ಅವರಲ್ಲಿ ಇರಬೇಕಿತ್ತು? ಯಾರೊಂದಿಗೂ ಸ್ನೇಹ ಬೆಳೆಸದ ನಾನು ಏಕೆ ಅವರಿಗೆ ಹತ್ತಿರವಾದೆ. ಯಾಕಾಗಿ ಹೀಗೆಲ್ಲಾ ಆಗಬೇಕಿತ್ತು? ಹೇಗೋ ಒಂದು ರೀತಿಯಲ್ಲಿ ಜೀವನದ ನಾವೆ ಶಾಂತಸಾಗರದಲ್ಲಿ ತೇಲುತ್ತಿದೆ ಎಂದರೆ ಮತ್ತೆ ಸುನಾಮಿ ಆರ್ಭಟ. ಬೇಕಿತ್ತೇ ಇದೆಲ್ಲಾ...

ಹೂಂ.., ಮೆಲುದನಿಯಲ್ಲಿ ಮುಖೇಶನ ಹಾಡುಗಳನ್ನು ಕೇಳುತ್ತಾ ಹಾಗೇ ಸೋಫಾಗೆ ತಲೆ ಒರಗಿಸಿದಳು. ಒಬ್ಬ ತಂಗಿ, ಒಬ್ಬ ತಮ್ಮ ಮೂರು ಮಕ್ಕಳ ಪುಟ್ಟ ಸಂಸಾರ ತಮ್ಮದು. ಅಪ್ಪನಿಗೆ ಬ್ಯಾಂಕಿನಲ್ಲಿ ಕೆಲಸ. ಸಾಕಷ್ಟು ಅನುಕೂಲವಾಗಿಯೇ ಇದ್ದವರು. ಸಂಗೀತದ ಆಸಕ್ತಿ ಅದರಲ್ಲಿ ಮುಂದುವರಿಯಬೇಕು ಎಂಬ ಬಯಕೆ, ಸಾಹಿತ್ಯದ ಮೇಲಿನ ಉತ್ಕಟ ಪ್ರೀತಿ ನನ್ನನ್ನು ಪ್ರೊಫೆಶನಲ್ ಕೋರ್ಸ್‌ಗೆ ಸೇರಲು ಬಿಡದೆ ಬಿಎಸ್‌ಸಿಗೆ ಸೇರಿದ್ದಳು. ಸಂಗೀತ ಸೀನಿಯರ್ ಆಗಿತ್ತು. ಪುಸ್ತಕ ಪ್ರೇಮಿಯಾದ ಅಪ್ಪನ ಸಂಗ್ರಹದ ಪುಸ್ತಕಗಳನ್ನು ಓದಿ ಮುಗಿಸಿ ಲೈಬ್ರರಿಯಿಂದ ತರುವ ಪರಿಪಾಠ ಬೆಳೆದಿತ್ತು. ಸುಖ, ಶಾಂತಿ ನೆಮ್ಮದಿಯಿಂದ ಕೂಡಿ ಯಾವ ಚಿಂತೆಯೂ ಇರದ ನಿಶ್ಚಿಂತ ದಿನಗಳವು. ಹಾಗೆಯೇ ಉಳಿಸಲು ಆ ದೇವರಿಗೇಕೋ ಮನಸ್ಸು ಬರಲಿಲ್ಲ ಅಂತ ಅನ್ನಿಸುತ್ತೆ. ಮೊದಲನೇ ಡಿಗ್ರಿ ಪರೀಕ್ಷೆ ಮುಗಿಸಿ 3–4 ದಿನಗಳಾಗಿತ್ತಷ್ಟೆ. ಬ್ಯಾಂಕಿಗೆ ಎಂದಿನಂತೆ ತಮ್ಮ ಡ್ಯೂಟಿಗೆ ಹೋಗಿದ್ದ ಅಪ್ಪ ಮರಳಿದ್ದು ಶವವಾಗಿ. ಇದ್ದಕ್ಕಿದ್ದಂತೆ ಆದ ಹೃದಯಾಘಾತ ನಮ್ಮಿಂದ ಅವರನ್ನು ಕಿತ್ತುಕೊಂಡಿತ್ತು. ಒಬ್ಬ ತಂಗಿ ತಮ್ಮ ತುಂಬಾ ಚಿಕ್ಕವರು. ಅಮ್ಮನೂ ಅಷ್ಟೆ, ಎಸ್ಸೆಸ್ಸೆಲ್ಸಿ ಆಗಿದ್ದರೂ ಹೊರಗೆ ಹೋಗಿ ಕೆಲಸ ಮಾಡುವಷ್ಟು ಧೈರ್ಯ, ಛಾತಿ ಇಲ್ಲದ್ದರಿಂದ ಅಪ್ಪನ ಕೆಲಸ ತನಗೆ ಬಂದಿತು.

ಬ್ಯಾಂಕಿನಿಂದ ಸಾಕಷ್ಟು ಹಣ ದೊರಕಿದರೂ ಮುಂದೆ ತಂಗಿ ತಮ್ಮನ ಭವಿಷ್ಯಕ್ಕಾಗಿ ನಾನು ಮದುವೆಯಾಗುವುದಿಲ್ಲ ಎಂದು ನಿರ್ಧರಿಸಿ ಹಾಗೆಯೇ ಉಳಿದುಬಿಟ್ಟಳು ಶ್ರೀರಕ್ಷಾ. ಅಂದು ಬಂದ ಕೆಲವು ಸಂಬಂಧಗಳು, 'ಸಂಬಳ ಕೆಲವು ದಿನಗಳ ಕಾಲ ಅಮ್ಮನ ಮನೆಗೆ ಕೊಟ್ಟರೂ ಪರವಾಗಿಲ್ಲ' ಎಂದಿದ್ದರೂ ಏಕೋ ಅದು ಸರಿಹೊಂದುವುದಿಲ್ಲ ಎಂಬ ತನ್ನದೇ ಮೂಗಿನ ನೇರದ ರೀತಿಯಲ್ಲಿ ಯೋಚಿಸಿ ಮದುವೆಯಾಗದೆ ಏನೋ ತ್ಯಾಗ ಮಾಡ್ತೀನಿ ಅಂತ ಎಂದುಕೊಂಡುಬಿಟ್ಟಳು. ಅದಕ್ಕೆ ತಕ್ಕಂತೆ ತಮ್ಮ ಡಾಕ್ಟರ್, ತಂಗಿ ಎಂಜಿನಿಯರ್ ಇಬ್ಬರೂ ಒಳ್ಳೆಯ ಕೆಲಸಗಳನ್ನೇ ಹಿಡಿದು ನಂತರ ಅವರ ಮದುವೆಗಳೂ ಆದವು. ಅಮ್ಮ ಮಾತ್ರ ಇವಳ ಜತೆಯಲ್ಲೇ ಉಳಿದಿದ್ದಳು.

ಅಂದು ಅವಳ ನಲವತ್ತೈದನೇ ಹುಟ್ಟಿದ ಹಬ್ಬ. ಇವರ ಶಾಖೆಯ ಅಭ್ಯಾಸದಂತೆ ಎಲ್ಲರಿಗೂ ಸಿಹಿ ಹಂಚಿ ಬಂದಳು. ಆಗ ತಾನೆ ಇವರ ಶಾಖೆಗೆ ವರ್ಗವಾಗಿ ಬಂದಿದ್ದ ಆನಂದ್, "ಎಷ್ಟು ವರ್ಷ ಆಯ್ತ್ರೀ" ಅಂದಾಗ, "ಇನ್ನೇನು ರಿಟೈರಾಗೋಕೆ ಹದಿನೈದು ವರ್ಷ ಬಾಕಿ ಅಷ್ಟೆ" ಅಂದು ನಕ್ಕಳು. "ಅಯ್ಯೋ ನಿಮಗೆ ನಲವತ್ತೈದು ವರ್ಷನಾ ಹಾಗೆ ಕಾಣೋದೇ ಇಲ್ಲ. ಇವತ್ತಂತೂ ಯೂ ಆರ್ ಲುಕಿಂಗ್ ಸೋ ಪ್ರೆಟಿ" ಎಂದಾಗ ಏಕೋ ಸಣ್ಣಗೆ ಕಂಪಿಸಿದಳು. ಹುಟ್ಟುಹಬ್ಬಕ್ಕಾಗಿ ಕೊಂಡಿದ್ದ ಅಚ್ಚ ಕೆಂಪಿನ ರೇಶಿಮೆ ಚೂಡಿದಾರ್, ಅದಕ್ಕೊಪ್ಪುವ ಕೃತಕ ಆಭರಣಗಳು, ಹಿತಮಿತವಾದ ಮೇಕಪ್ ಸ್ವಲ್ಪ ಸುಂದರಿಯರ ಸಾಲಿನಲ್ಲೇ ಅವಳನ್ನು ನಿಲ್ಲಿಸಿತ್ತು. ಆದರೂ "ಇವನದು ತಲೆಹರಟೆ, ಇವನ್ಯಾರು ನನ್ನ ಹೊಗಳಕ್ಕೆ" ಎಂದು ಕೋಪದಿಂದ ಗೆಳತಿ ರೂಪಾಳ ಬಳಿ ಅದನ್ನೇ ಹೇಳಿದಳು. "ಏ ಚೋಡೋ ಯಾರ್! ಈಗ ಇದೆಲ್ಲಾ ಕಾಮನ್. ಕಾಂಪ್ಲಿಮೆಂಟ್ಸ್‌ನ ತೊಗೋಳೋದು ಒಂದು ಕಲೆ ಬಿಟ್‌ಹಾಕು" ಎಂದಾಗ ಇವಳು ಆ ಬಗ್ಗೆ ಯೋಚಿಸದೆ ಸುಮ್ಮನಾಗಿದ್ದಳು.

ಮುಂದೆ ತಿಳಿದದ್ದು ಆನಂದ್‌ನ ಮಗ ಎಂಎಸ್ ಮಾಡಲು ಫಾರಿನ್‌ಗೆ ಹೋಗಿದ್ದು, ಮಗಳು ಬಿಎಸ್ಸಿ ಮುಗಿಸಿ ಮದುವೆಯಾಗಿರುವುದು, ಈಗ ಎರಡು ವರ್ಷಗಳ ಕೆಳಗೆ ಅವನ ಪತ್ನಿ ನಿಧನ ಹೊಂದಿದ್ದು ಎಲ್ಲಾ... ನಾನೊಂದು ರೀತಿ ಏಕಾಂಗಿ, ಪಾಪ ಆತ ಸಂಸಾರವಿದ್ದೂ ಏಕಾಂಗಿ ಎನಿಸಿ ಅಯ್ಯೋ ಅನ್ನಿಸಿತ್ತು .

ದಿನ ಕಳೆದಂತೆ ಇಬ್ಬರ ಸಾಹಿತ್ಯಾಭಿರುಚಿಗಳು ಒಂದೇ, ಸಂಗೀತದ ಅಭಿರುಚಿಗಳು ಒಂದೇ ಎಂದು ತಿಳಿದಾಗ ಸ್ವಲ್ಪ ಮಾತುಕತೆ ಹೆಚ್ಚಾಗಿತ್ತು. ಶ್ರೀರಕ್ಷಾಳೂ ಸಂಕೋಚದ ಕೋಟೆಯಿಂದ ಹೊರಬಂದು ಅವನೊಡನೆ ಮಾತನಾಡುತ್ತಿದ್ದಳು. ಒಮ್ಮೆ ಸಹೋದ್ಯೋಗಿಗಳ ಮನೆಯ ಸಮಾರಂಭಕ್ಕೆ ಹೋದಾಗ ತನ್ನ ಮಗಳನ್ನು ಕರೆದುಕೊಂಡು ಬಂದು ಪರಿಚಯಿಸಿದ್ದ. ಬೇರೇನೂ ಯೋಚನೆ ಇಲ್ಲದೆ ಅಮ್ಮನೊಂದಿಗೆ ಹಾಯಾಗಿದ್ದವಳನ್ನು ಬೇಸರವಾಗುವಂತೆ ಮಾಡುತ್ತಿದ್ದದ್ದು "ನಮ್ಮಿಂದ ನಿನ್ನ ಬಾಳು ಹಾಳಾಯಿತು, ಒಂಟಿಯಾಗಿ ಬಿಟ್ಟೆಯಲ್ಲಾ" ಎಂದು ಆಗಾಗ ಅಳುತ್ತಿದ್ದ ಅಮ್ಮನನ್ನು ಕಂಡಾಗ. "ಈಗೇನಮ್ಮ ಆಗಿದೆ, ಸಂತೋಷವಾಗಿ ಹಾಯಾಗಿ ಇದ್ದೇನೆ. ಮದುವೆಯಾಗಿರೋ ನನ್ನ ಕೆಲ ಸಹೋದ್ಯೋಗಿಗಳ ಪಾಡು ನೋಡಿದರೆ ನಾನು ತುಂಬಾನೇ ಸುಖಿ ಸುಮ್ಮನಿರು" ಎಂದು ಸಮಾಧಾನಿಸುತ್ತಿದ್ದಳು.

ಅಂದು ಶುಕ್ರವಾರ ಆನಂದ್ ಅವರು "ನಾಳೆ ಮಧ್ಯಾಹ್ನ ಊಟಕ್ಕೆ ಹೋಟೆಲ್ಲಿಗೆ ಹೋಗೋಣವೇ" ಎಂದಾಗ ಸ್ವಲ್ಪ ಆಶ್ಚರ್ಯವೆನಿಸಿದರೂ, 'ನಾನೇನು ಹದಿಹರೆಯದ ಹುಡುಗೀನೇ ಯಾರಾದರೂ ನೋಡಿಯಾರು ಅನ್ನುವುದಕ್ಕೆ' ಅಂದುಕೊಂಡು "ಆಯಿತು" ಎಂದಳು . ಅಲ್ಲಿ ಅವರು ಇಟ್ಟಿದ್ದು ಮದುವೆಯ ಪ್ರಸ್ತಾಪವನ್ನು. ಅದರ ಬಗ್ಗೆ ಚಿಂತೆಯೂ ಮಾಡಿರದ ಇವಳಿಗೆ ಏನೂ ಹೇಳಲು ತೋರದಾಗಿ "ಯೋಚಿಸಿ ಅಮ್ಮನನ್ನು ಕೇಳಿ ಹೇಳುವೆ" ಎಂದಳಾದರೂ ಮೊದಲು ಕೇಳಿದ್ದು ಗೆಳತಿ ರೂಪಾಳನ್ನು. ಅವಳು ಹೇಳಿದ್ದು ಅಷ್ಟೆ "ಜೀವನದ ಈ ಹೇಮಂತದಲ್ಲಿ ನಿನಗೊಂದು ಒಳ್ಳೆಯ ಸದವಕಾಶ. .ಖಂಡಿತ ಒಳ್ಳೆಯ ಮನುಷ್ಯ. ಕಣ್ಣು ಮುಚ್ಚಿಕೊಂಡು ಒಪ್ಪಬಹುದು" ಎಂದು. ಆದರೆ ಇವಳಿಗೆ ಏನೋ 1ರೀತಿಯ ಹಿಂಜರಿಕೆ ಸಂಕೋಚ. ಈ ವಯಸ್ಸಿನಲ್ಲಿ ಮದುವೆಯಾಗಿ ಸಂಸಾರ ಮಾಡಲು ಸಾಧ್ಯವೇ. ನೋಡಿದವರು ತಾನೇ ಏನನ್ನುತ್ತಾರೆ ಎನ್ನುವ ಕಳವಳ.

ಸಂಜೆ ಮನೆಗೆ ಬಂದ ತಕ್ಷಣವೇ ತಂಗಿ ರಮ್ಯಾಳ ಫೋನ್. "ರೂಪಾ ಅವರು ಎಲ್ಲ ವಿಷಯ ತಿಳಿಸಿದರು ಅಕ್ಕ. ನನಗಂತೂ ತುಂಬಾ ಖುಷಿಯಾಗುತ್ತಿದೆ. ಇನ್ನಾದರೂ ನಿನ್ನ ಒಂಟಿತನ ನೀಗುತ್ತೆ, ಪ್ಲೀಸ್ ಪ್ಲೀಸ್ ಒಪ್ಪಿಕೋ". ರೂಪಾಳ ಮೇಲೆ ಕೋಪವೇ ಬಂತು ಇವಳಿಗೆ, ಇವಳಿಗೇಕೆ ಈ ಉಪದ್ವ್ಯಾಪ ಬೇಕಿತ್ತು ಎಂದು. ಸ್ವಲ್ಪ ಹೊತ್ತಿನ

ನಂತರ ತಮ್ಮನ ಫೋನ್. ಅವನದೂ ಅದೇ ರಾಗ ಅದೇ ಹಾಡು. ಅವರಿಬ್ಬರಲ್ಲಿ ಯಾರು ಅಮ್ಮನಿಗೆ ಸುದ್ದಿ ಮುಟ್ಟಿಸಿದ್ದರೋ ಗೊತ್ತಿಲ್ಲ.

ರಾತ್ರಿ ಊಟದ ನಂತರ ಅಮ್ಮ ಕುಳಿತು ಒಂದೇಸಮನೆ ಉಪದೇಶ ಹೇಳುವುದನ್ನೆಲ್ಲಾ ಹೇಳಿ, "ಕಡೆಗೆ ಸಾಯುವಾಗಲಾದರೂ ನನ್ನನ್ನ ಅಪರಾಧಿ ಪ್ರಜ್ಞೆಯಿಂದ ಪಾರುಮಾಡೇ. ನೆಮ್ಮದಿಯಾಗಿ ಸಾಯ್ತೀನಿ. ನಿನ್ನೊಬ್ಬಳನ್ನು ಹೀಗೆ ಬಿಟ್ಟು ಹೋಗಲು ನನಗೆ ಖಂಡಿತಾ ಮನಸ್ಸಿಲ್ಲ" ಎಂದು ಗೋಳೋ ಎಂದು ಅಳಲು ಶುರು ಮಾಡಿದಾಗ ಅವರ ಬಿಪಿಯ ಗತಿ ನೆನೆದು ಸ್ವಲ್ಪ ಸಮಾಧಾನ ಮಾಡಿಕೋ ಯೋಚಿಸುತ್ತೇನೆ ಎಂದು ಸದ್ಯಕ್ಕೆ ಅಲ್ಪವಿರಾಮವಿಟ್ಟಿದ್ದಳು .

ಮಾರನೆಯ ದಿನ ಭಾನುವಾರ ಒಂದು ಅಪರಿಚಿತ ನಂಬರ್‌ನಿಂದ ಕಾಲ್. ತೆಗೆದುಕೊಂಡರೆ ಆನಂದನ ಮಗಳು ರುಚಿ. "ಅಮ್ಮ ಹೋಗಿಬಿಟ್ಟ ಮೇಲೆ ಅಪ್ಪ ತುಂಬಾ ಒಂಟಿಯಾಗಿಬಿಟ್ಟಿದ್ದರು ಆಂಟಿ. ನಿಮ್ಮ ಶಾಖೆಗೆ ಬಂದು ನಿಮ್ಮ ಸ್ನೇಹವಾದ ಮೇಲೆ ಅವರ ಮುಖದ ಮೇಲೆ ಸ್ವಲ್ಪ ನಗು ಅಂತ ಕಂಡಿದ್ದು. ಅಮ್ಮ ಅಪ್ಪ ತುಂಬ ಖುಷಿಯಾಗಿ ಸಂಸಾರ ಮಾಡಿದರು. ಆದರೆ ಹೀಗೆ ಆಗುವುದು ಅವರ ಹಣೆಯಲ್ಲಿ ಬರೆದಿತ್ತು. ಹಾಗಂತ ಜೀವನವಿಡೀ ದುಃಖಿಸುತ್ತಾ ಕೂರಲು ಸಾಧ್ಯವೇ? ದಯವಿಟ್ಟು ಅಪ್ಪನ ಏಕಾಂಗಿತನ ನೀಗಿ ಜೊತೆಯಾಗಿ ಆಂಟಿ, ಪ್ಲೀಸ್.. ಅಣ್ಣನೊಂದಿಗೆ ಮಾತನಾಡಿದ್ದೇನೆ, ಅವನದೂ ಇದೇ ಅಭಿಪ್ರಾಯ". ಮನಸ್ಸು ಮತ್ತೆ ಮತ್ತೆ ಡೋಲಾಯಮಾನ.

ಹೌದು ಬದಲಾವಣೆ ಜಗದ ನಿಯಮ. ಇದು ಬಾಳಿನ ಸಂಧಿಕಾಲ. ಒಳ್ಳೆ ಅವಕಾಶ ದೊರಕಿರುವಾಗ ಎಲ್ಲರ ಆಸೆಯೂ ಅದೇ ಆಗಿರುವಾಗ ನಾನು ಮದುವೆಯಾದರೆ ತಪ್ಪೇನು? ತಂಗಿ ತಮ್ಮ ಅಮ್ಮನ ಒಳಿತಿಗಾಗಿ ಮದುವೆಯಾಗದೆ ಉಳಿದೆ. ಈಗ ಎಲ್ಲ ಒಂದು ಹಂತಕ್ಕೆ ಬಂದಿರುವಾಗ ಅವರೆಲ್ಲರೂ ಮದುವೆಯಾಗು ಎನ್ನುವಾಗ ಆಗಬಾರದೇಕೆ ಎಂದು ಒಳಮನಸ್ಸು ಪ್ರಶ್ನಿಸಿತ್ತು. ಹಾಗೆಯೇ ತುಂಟ ಮನಸ್ಸು ಹೇಳಿತು "ನಿನಗೇನು ಆನಂದನ ಬಗ್ಗೆ ಆಸಕ್ತಿ ಇಲ್ಲವೇ ಅಮ್ಮನಿಗೋಸ್ಕರ ಮದುವೆ ಆಗುವೆ ಅಂತಿದೀಯಲ್ಲಾ". ಅಂತರಂಗದ ಪ್ರಶ್ನೆಯಾದರೂ ಉತ್ತರಿಸಲಾಗದೆ ನಾಚುತ್ತಾ ಕಿರುನಗೆ ಅರಳಿತ್ತು ಅವಳ ಮುಖದಲ್ಲಿ. "ಹೌದು, ನನಗೆ ಬೇರೆಯವರಿಗೆ ತಿಳಿಸಲು ಒಂಥರಾ. ರೂಪಳ ಬಳಿ ಹೇಳಿಬಿಡುತ್ತೇನೆ ಅವಳೇ ಎಲ್ಲರಿಗೂ ಹೇಳಲಿ, ಆನಂದ್‌ಗೂ ಸಹ ಎಂದುಕೊಂಡು ರೂಪಾಳಿಗೆ ಕಾಲ್ ಮಾಡಲು ಹೊರಟವಳು ಏನೋ ಯೋಚಿಸಿ ಮೊದಲು ಮೊಬೈಲಿನ ಕಾಲರ್ ಟ್ಯೂನ್ ಬದಲಾಯಿಸಿದಳು .

"ಸಂತಸ ಅರಳುವ ಸಮಯ
ಮರೆಯೋಣ ಚಿಂತೆಯ
ಇದು ರಮ್ಯ ಚೈತ್ರ ಕಾಲ
ಇದು ರಮ್ಯ ಚೈತ್ರ ಕಾಲ"

***

ಪ್ರೇಮ ಪರೀಕ್ಷೆ

– ಎಂ.ಎಸ್.ಎನ್.

ಬೆಳಗ್ಗೆ ವಿಶ್ವ ಇನ್ನೂ ಪೂರ್ತಿ ಎದ್ದಿರಲಿಲ್ಲ. ಕಣ್ ಬಿಟ್ ನೋಡ್ದಾಗ ಕಿಟಕಿಯಾಚೆ ಸೂರ್ಯ ಡ್ಯೂಟಿಗೆ ಬರ್ಲೋ ಬೇಡ್ವೋ ಎಂದು ಅನುಮಾನಿಸುತ್ತಿದ್ದ. ಅಷ್ಟರಲ್ಲಿ ''ಗುಡ್ ಮಾರ್ನಿಂಗ್"ಎಂಬ ಮಧುರ ಧ್ವನಿ ಕೇಳಿ ಖುಷಿಯಿಂದ ಎದ್ದು ಕೂತ.

"ಗುಡ್ಮಾರ್ನಿಂಗ್, ದೊರೆ"

ವಿಶಾಲು ಸ್ನಾನ, ದೇವರ ಪೂಜೆ ಮುಗಿಸಿ ನೀಟಾಗಿ ಡ್ರೆಸ್ ಮಾಡಿಕೊಂಡು ಕೈಯಲ್ಲಿ ಕಾಫಿ ಹಿಡಿದು ನಿಂತಿದ್ದಳು, ಅಮೃತ ತಂದ ಮೋಹಿನಿಯಂತೆ!

"ಅರೇ! ಏನಿದು, ಇಂಥ ಪಲ್ಲಂಗ ಸೇವೆ! ಬೆಳಗ್ಗೆ ಬ್ರಶ್ ಮಾಡೋ ಮೊದಲೇ ಬೆಡ್ಕಾಫೀನಾ?" ಎನ್ನುತ್ತಾ ವಿಶ್ವ ಕಪ್ ಕೈಗೆ ತೆಗೆದುಕೊಂಡು, "ಇನ್ನೂ ಹಲ್ಲುಜ್ಜಿಲ್ಲ"ಎಂದ.

"ರೀ, ಹಸು, ಎಮ್ಮೆಗಳು ಹಲ್ಲುಜ್ಜುತ್ತಾ? ಹಸು ಕೊಟ್ಟ ಹಾಲಲ್ಲಿ ತಾನೇ ಕಾಫಿ ಮಾಡಿದ್ದು? ಸುರ್ಕೊಳ್ಳಿ ಏನೂ ಆಗೊಲ್ಲ" ಎಂದಳು.

ಕಾಫಿ ಚೆನ್ನಾಗಿತ್ತು. ಸವಿಯುತ್ತಾ ಆಕೆಯ ಮುಖ ನೋಡಿದ. ವಿಶಾಲು ಮನಸಲ್ಲಿ ಏನೋ ತವಕ ಇತ್ತು. ಮುಖದ ಮೇಲಿದ್ದ ಪ್ರಶ್ನಾರ್ಥಕ ಚಿಹ್ನೆ ಅವನು ಗಮನಿಸಿದ.

"ಏನೋ ಹೇಳ್ಬೇಕು ಅಂತಿದ್ದೀಯ?"

"ಇವತ್ತಿನ ವಿಶೇಷ ಏನು ಹೇಳಿ" ಎಂದಳು. ವಿಶ್ವನಿಗೆ ತಲೆ ಕೆಡ್ತು. ಈಗ ತಾನೇ ಬೆಡ್ಡಿಂದ ಎದ್ದಿದ್ದೇನೆ. ಇವತ್ತು ದಿನ ಯಾವ್ದು, ತಿಥಿ ಯಾವ್ದು, ತಾರೀಖು ಯಾವ್ದು ಅಂತ ಗೊತ್ತಿಲ್ಲ. ಈ ಪ್ರಶ್ನೆಗೆ ಹೇಗೆ ಉತ್ತರ ಕೊಡ್ಲಿ? ಎಂದು ಗೋಡೆ ಕ್ಯಾಲೆಂಡರ್ ನೋಡಿದ.

ಫೆಬ್ರವರಿ 14, ಏನೋ ವಿಶೇಷತೆ ಇರುವ ಡೇಟು ಎನ್ನಿಸಿತು. ವಿಶ್ವ ಅವಳಿಗೆ ಗೊತ್ತಿಲ್ಲದಂತೆ ಕ್ಯಾಲೆಂಡರ್ ಮೇಲಿದ್ದ ಅಕ್ಷರಗಳನ್ನು ಓದಿ ಹೇಳಿದ.

"ಗೊತ್ತಾಯ್ತು ಬಿಡು, ವಿಶಾಲೂ, ಇವತ್ತು ಫೆಬ್ರವರಿ 14" ಎಂದ.

"ಫೆಬ್ರವರಿ 14ರ ವಿಶೇಷತೆ ಏನು?" ಎಂದಳು.

"ಇವತ್ತು ವಸಂತ ಪಂಚಮಿ" ಎಂದ.

"ಅದಲ್ಲಾರೀ, ಫೆಬ್ರವರಿ 14ಕ್ಕೆ ಮತ್ತೇನೋ ವಿಶೇಷತೆ ಇದೆ" ಎಂದಳು.

ವಿಶ್ವ ಒಂದೊಂದೇ ಸಿಪ್ ಕಾಫಿಯನ್ನು ಗುಟುಕರಿಸುತ್ತಾ ಯೋಚನೆ ಮಾಡಿ ಹೇಳಿದ.

“ಓಹ್, ತಿಳೀತು, ನಿಮ್ಮಜ್ಜಿಯ ವರ್ಷಾಬ್ದಿಕ ಅಲ್ವಾ? ವಡೆ ಪಾಯಸ ತಿಂದು ವರ್ಷ ಆಗಿತ್ತು” ಎಂದ. ವಿಶಾಲುಗೆ ಸಿಟ್ಟು ಬಂತು. ಕೋಪವನ್ನು ತಡೆದುಕೊಳ್ಳಬೇಕು ಎಂದು ತನಗೆ ತಾನೇ ಹೇಳಿಕೊಂಡಳು.

“ರೀ, ದಿವಂಗತ ಅಜ್ಜಿ ವಿಷ್ಯ ಅಲ್ಲಾರೀ. ಫೆಬ್ರವರಿ 14 ನಮ್ಮ ಜೀವನದಲ್ಲಿ ನಡೆದ ವಿಶೇಷ ಏನು?”

ಫೆಬ್ರವರಿ ತಿಂಗಳಲ್ಲಿ ತಾವು ಎಲ್ಲೆಲ್ಲಿ ಪ್ರವಾಸಕ್ಕೆ ಹೋಗಿದ್ದೆವು ಎಂಬುದನ್ನ ನೆನಪು ಮಾಡಿಕೊಂಡ.

“ನೈನಿತಾಲ್‌ಗೆ ಹೋಗಿದ್ದು, ಉತ್ತರ ಭಾರತದ ಟೂರು, ಕೆಮ್ಮಣ್ಣುಗುಂಡಿ” ಎಂದಾಗ ವಿಶಾಲು ಎಲ್ಲಕ್ಕೂ ಅಡ್ಡಡ್ಡ ತಲೆ ಆಡಿಸಿದಳು.

“ಇದ್ಯಾವ್ದೂ ಅಲ್ಲ, ಫೆಬ್ರವರಿ 14ರ ವಿಶೇಷತೆ ಏನಿದೆ ಅದನ್ನ ಹೇಳಿ”ಎಂದಾಗ,

“ನಾಲ್ಕು ಕ್ಲೂಸ್ ಕೊಡು” ಎಂದ. ಅವಳು ಕೊಟ್ಟಳು.
1) ಸಂತ 2) ಕೆಂಪು 3) ಮುತ್ತು 4) ಸುಸ್ತು

ನಾಲ್ಕೂ ಪದಗಳನ್ನು ಸೇರಿಸಿ, ‘ಕೆಂಪಗೆ ಮುತ್ತು ಕೊಡಲು ಹೋದ ಸಂತ ಸುಸ್ತಾದ’ ಎಂಬ ವಾಕ್ಯ ಮಾಡಲು ವಿಶ್ವ ಪ್ರಯತ್ನಪಟ್ಟ. ಆದರೆ ಅದು ತಪ್ಪು ಎನ್ನಿಸಿತು.

“ಗೊತ್ತಾಗ್ಲಿಲ್ಲ ವಿಶಾಲು” ಎಂದ.

‘‘ರೀ, ನಮ್ಮ ಮದ್ವೆಗೆ ಮುಂಚಿನ ದಿನಗಳು ನೆನಪು ಮಾಡಿಕೊಳ್ಳಿ. ಆ ದಿನ ನೀವು ನನ್ನ ಕಾಲೇಜ್ ಹತ್ರ ನೀವು ಬಂದಿದ್ರಿ!”. ವಿಶ್ವ ಫ್ಲಾಶ್‌ಬ್ಯಾಕ್‌ಗೆ ಹೋದ. ಖುಷಿಯಾಯ್ತು. ವಿಶಾಲೂ ಕೈ ಕುಲುಕಿದ.

“ಗೊತ್ತಾಯ್ತು ವಿಶಾಲೂ, ಫ್ರೆಬ್ರವರಿ 14 ಅಂದ್ರೆ ಪ್ರೇಮಿಗಳ ದಿನಾಚರಣೆ. ನೀನು ಆವತ್ತು ಕಾಲೇಜ್ ಹತ್ರ ಕಾಯ್ತಾ ಇದ್ದೆ. ತಿಳಿ ನೀಲಿ ಸೀರೆ ಉಟ್ಟು ಬಂದಿದ್ದೆ. ನನಗೋಸ್ಕರ ಕಾಯ್ತಾ ಚಡಪಡಿಸ್ತಿದ್ದೆ. ನಾನು ನಿನ್ಗೆ ಒಂದು ರೋಜಾ ಹೂವು ಕೊಟ್ಟು ಪ್ರೇಮಿಗಳ ದಿನಾಚರಣೆಯ ಶುಭಾಶಯ ಅಂತ ಹೇಳ್ದೆ” ಎಂದಾಗ ವಿಶಾಲೂಗೆ ಖುಷಿಯಾಗಿ,

“ಫುಲ್ ಮಾರ್ಕ್ಸ್”ಎಂದಳು.

ಫೆಬ್ರವರಿ 14 ಅದೆಷ್ಟೋ ಪ್ರೇಮಿಗಳು ಗುಲಾಬಿಗಳನ್ನು ತಮಗೆ ಇಷ್ಟ ಬಂದವರಿಗೆ ಕೊಡುತ್ತಾರೆ. ಗುಲಾಬಿಗಳು ಒಳ್ಳೆಯ ಫಲಿತಾಂಶವನ್ನೂ ತಂದುಕೊಟ್ಟಿದೆ. ಗುಲಾಬಿಯಿಂದಾಗಿ ಎಷ್ಟೋ ಮಂದಿ ಗಂಡ-ಹೆಂಡಿರಾಗಿ ಅನಂತರ ಮುಳ್ಳು ಚುಚ್ಚಿಸಿಕೊಂಡಿದ್ದೂ ಉಂಟು.

ಕ್ರಿ.ಶ. 3ನೇ ಶತಮಾನದಲ್ಲಿದ್ದ ಈ ವ್ಯಾಲೆಂಟೈನ್ ಎಂಬ ಪ್ರೇಮಾತ್ಮನ ನೆನಪಿಗೆ ಈ ದಿನಾಚರಣೆ ರೋಂನಲ್ಲಿ ಶುರುವಾಗಿ ಎಲ್ಲರ ರೂಂ ವರೆಗೆ ಬಂದಿದೆ. ಆತನ ಕಾಲದಲ್ಲಿ ಯುದ್ಧನಿರತ ಸೈನಿಕರು ಮದುವೆಯಾದರೆ

ಪ್ರೇಮಯುದ್ಧದಲ್ಲಿ ಕಾಲ ಕಳೆಯುತ್ತಾರೆ ಎಂಬ ಯೋಚನೆಯಲ್ಲಿ ಪ್ರೇಮದ ಮೇಲೆ ರಾಜ ನಿಷೇಧ ಹೇರಿದ್ದ. ಇದನ್ನು ವಿರೋಧಿಸಿ ಜೈಲು ಸೇರಿದ ಸಂತ ವ್ಯಾಲೆಂಟೈನ್ ನೆನಪಿಗೆ ಈ ಹಬ್ಬ. ಅವನ ಆ ಕಾಲದಲ್ಲಿ ಸೈನಿಕರು ಮದುವೆ ಆಗಲು ಕಷ್ಟ ಇತ್ತಂತೆ.

“ಈವತ್ತಿಗಿಂತ ನೀವು ಆವತ್ತೇ ಚೆನ್ನಾಗಿ ಕಾಣ್ತಿದ್ರಿ” ಎಂದು ವಿಶಾಲು ರೈಲು ಹತ್ತಿಸಿದಳು.

“ಡ್ಯಾಷಿಂಗ್ ಬ್ರಹ್ಮಚಾರಿಯ ಕಳೆ ಬೇರೆ, ಮ್ಯಾಚಿಂಗ್ ಗೃಹಸ್ಥನ ರೀತಿ ಬೇರೆ. ಮದ್ವೆ ಆದ ಮೇಲೆ ಬದಲಾಗ್ಲೇಬೇಕು”.

“ಆಗ ರವೆರವೆ ಗಡ್ಡ ಬಿಟ್ಟಿದ್ರಿ. ಇವತ್ತಿಗೂ ಉಪ್ಪಿಟ್ಟು ಮಾಡೋವಾಗೆಲ್ಲ ನಿಮ್ಮ ಚುಚ್ಚೋ ಗಡ್ಡ ನೆನಪಾಗುತ್ತೆ”ಎಂದು ನಾಚಿದಳು.

“ನಿನಗೆ ಇಷ್ಟವಾದರೆ ರವೆರವೆ ಗಡ್ಡ ಬಿಡೋಕೆ ತೊಂದ್ರೆ ಇಲ್ಲ. ಎಷ್ಟೋ ಮಂದಿ ಹೆಂಡ್ತೀನ್ನೇ ಬಿಡ್ತಾರಂತೆ” ಎಂದು ನಗಿಸಿದ.

“ರೀ, ಹ್ಯಾಗೆ ಈ ದಿನಾನ ಕಳೆಯೋಣ?” ಎಂದಳು.

ಪ್ರಪಂಚದ ಯುವಜನತೆ ಅತ್ಯಂತ ಉತ್ಸಾಹದಲ್ಲಿ ತಮ್ಮ ಪ್ರೇಮಿಗಳನ್ನು ಭೇಟಿ ಮಾಡಿ ಶುಭಾಶಯಗಳನ್ನ ಹಂಚ್ಕೊಳ್ತಾರೆ. ವ್ಯಾಲೆಂಟೈನ್ಸ್ ಡೇ ಬಂದ್ರೆ ಕೋಟ್ಯಂತರ ರೂಪಾಯಿ ವಹಿವಾಟಾಗುತ್ತೆ. ಗಿಫ್ಟುಗಳು ವಿನಿಮಯ ಆಗಿ ಚಾಕ್ಲೆಟ್‌ಗಳು ಕರಗಿ ಹೋಗುತ್ತೆ. ಗುಲಾಬಿಗಳು ಮುದುಡಿ ಹೋಗುತ್ತೆ. ಸಿನಿಮಾ ಮಂದಿರಗಳು ಹೌಸ್‌ಫುಲ್. ಪ್ರವಾಸಿ ತಾಣಗಳಲ್ಲಿ ಜಾಗವೇ ಇರೋದಿಲ್ಲ ಎಂದೆಲ್ಲಾ ವಿಶ್ವ ನೆನಪು ಮಾಡಿಕೊಂಡ.

“ನಿನ್ನಿಷ್ಟ ಏನಿದೆ ಹೇಳು ?” ಎಂದಾಗ ವಿಶಾಲು ನಾಚುತ್ತಾ ಹೇಳಿದಳು.

“ರೀ, ಆವತ್ತು ಕೊಟ್ರಲ್ಲ, ಕೆಂಪು ಗುಲಾಬಿ ಹೂವು ಅದನ್ನ ಮತ್ತೆ ನಂಗೆ ಕೊಡ್ಬೇಕು ರೀ” ಎಂದಳು.

ವಿಶ್ವ ಬೇಗ ರೆಡಿಯಾದ. ಹೂವಿನ ಮಾರ್ಕೆಟ್ಟಿಗೆ ಬಂದ. ಎಲ್ಲಿ ಹುಡುಕಿದರೂ ಕೆಂಪು ರೋಜಾ ಹೂವು ಇರಲಿಲ್ಲ. ಎಲ್ಲರೂ ಕೊಂಡು ಖಾಲಿ ಮಾಡಿದ್ದರು. ಕಡೆಗೆ ಒಂದು ಕೃತಕವಾದ ಕೆಂಪು ರೋಜಾ ಹೂವನ್ನ ಕೊಂಡು ತಂದು ವಿಶಾಲೂ ಕೈಗೆ ಇಟ್ಟ.

“ಪ್ರೇಮಿಗಳ ದಿನಾಚರಣೆಯ ಶುಭಾಶಯಗಳು” ಎಂದ. ಹೂವು ಹಗುರವಾಗಿತ್ತು.

“ರೀ, ಆರ್ಟಿಫಿಷಿಯಲ್ ಇದು”


“ಆದರೇನಂತೆ? ನೋಡೋಕೆ ಹಾಗೇ ಇದೆಯಲ್ಲ? ಎಂದೂ ಬಾಡೊಲ್ಲ.”

“ನೋಡ್ರೀ, ಈ ಥರ ಬೂಟಾಟಿಕೆ ಪ್ರೀತಿ, ಆರ್ಟಿಫಿಷಿಯಲ್ ಪ್ರೀತಿ ನಂಗೆ ಬೇಡ. ಹೋಗಿ ಹುಡುಕಿ, ಕೆಂಪು ರೋಜಾ ಹೂವು ಎಲ್ಲೇ ಇದ್ರೂ ತಂದು ಮುಡಿಸಿ, ಅಲ್ಲೀವರೆಗೆ ನಿಮಗೆ ಮನೇಲಿ ಜಾಗ ಇಲ್ಲ” ಎಂದು ರೇಗಿದಳು.

***

ಬುಕ್ಕಾಂಬುಧಿಯ ವಿಸ್ಮಯ ಕೃಷ್ಣಮೂರ್ತಿ- 99

– ಬೆಂ.ಶ್ರೀ. ರವೀಂದ್ರ



ಪೆನ್ಸಿಲ್ ಸ್ಕೆಚ್ – ಪೃಥ್ವಿ ಪ್ರಭು

2024ರ ಜನವರಿ 8ರಂದು ಒಂದು ಅಪರೂಪದ ಕಾರ್ಯಕ್ರಮದಲ್ಲಿ ಭಾಗವಹಿಸುವ ಸುಯೋಗ ನನ್ನದಾಗಿತ್ತು. ನೇರವಾಗಿ ನನಗೆ ಆಮಂತ್ರಣವಿಲ್ಲದಿದ್ದರೂ, ಗೆಳೆಯ ಶ್ರೀ ಗುರುಪ್ರಸಾದರ ಮೂಲಕ ವಿಷಯ ತಿಳಿದು, ನಾನೇ ಕಾರ್ಯಕ್ರಮಕ್ಕೆ ಹೋಗಲು ಕಾತುರವನ್ನು ವ್ಯಕ್ತಪಡಿಸಿದ್ದೆ. ನನಗೆ ಅಲ್ಲಿಯವರೆಗೆ ಪರಿಚಯವಿಲ್ಲದ ಶ್ರೀ ಬುಕ್ಕಾಂಬುಧಿ ಕೃಷ್ಣಮೂರ್ತಿಯವರ 99 ನೆಯ ಹುಟ್ಟಿದ ಹಬ್ಬದ ಸಂಭ್ರಮವದಾಗಿತ್ತು. ಅವರ ಕುಟುಂಬದವರು ಸೇರಿ "ನಮ್ಮ ನಿಮ್ಮ ಸಂಭ್ರಮ" ವೆಂಬ ಹೆಸರಿನಿಂದ ಹಬ್ಬವನ್ನು ಆಚರಿಸುತ್ತಿದ್ದರು. ಜೊತೆಗೆ ಬುಕ್ಕಾಂಬುಧಿಯವರೇ ರಚಿಸಿದ, "ಬುಕ್ಕಾಂಬುಧಿ ಪ್ರಾದೇಶಿಕ ಕನ್ನಡ ಇಂಗ್ಲೀಷ್ ಶಬ್ದಕೋಶ" ಸೇರಿದಂತೆ, ಮೂರು ಪುಸ್ತಕಗಳು ಬಿಡುಗಡೆಯಾಗಲಿದ್ದವು. ಇವೆರಡಕ್ಕಿಂತ ಹೆಚ್ಚಾಗಿ ಆಶ್ಚರ್ಯವಾದದ್ದು ಕೃಷ್ಣಮೂರ್ತಿಯವರು, ಅಮೇರಿಕಾದ ನಿವಾಸಿ ಹಾಗೂ ಪ್ರಜೆ. ಅಲ್ಲಿ ಒಬ್ಬರೇ ಇರುತ್ತಾರೆ. ಇಲ್ಲಿವರೆಗೆ 11 ಪುಸ್ತಕಗಳನ್ನು ರಚಿಸಿದ್ದಾರೆ.

ಕೃಷ್ಣಮೂರ್ತಿಯವರನ್ನು ಕಂಡ ಕ್ಷಣ ನನಗೆ ಅವರು 98 ತುಂಬಿ 99ನೆಯ ವಯಸ್ಸಿಗೆ ಕಾಲಿಡುತ್ತಿದ್ದಾರೆ ಅಂತ ಅನ್ನಿಸಲೇ ಇಲ್ಲ. ಹೆಚ್ಚೆಂದರೆ 65ರ ತರುಣ ಅನ್ನಬಹುದು. ಬೆನ್ನು ಬಾಗಿಲ್ಲ, ಕಣ್ಣು ಮಂಜಾಗಿಲ್ಲ, ಮೆಟ್ಟಿಲು ಹತ್ತಲು ಯಾರ ಸಹಾಯವೂ ಬೇಕಿಲ್ಲ. ಕಿವಿಗೆ ಯಂತ್ರದ ಸಹಾಯವಿದೆ. ಆಡಿದ ಮಾತುಗಳನ್ನು ಕೇಳಿಸಿಕೊಂಡು ಸ್ಪಷ್ಟವಾಗಿ ಉತ್ತರಿಸುತ್ತಿದ್ದರು.

ಕಾರ್ಯಕ್ರಮದಲ್ಲಿ ಬುಕ್ಕಾಂಬುಧಿಯವರ ಪುಸ್ತಕವೊಂದರಿಂದ ಆಯ್ದ ಕೆಲವು ಭಾಗಗಳ ವಾಚನ, ಚಿತ್ರಗಳಿಂದ ಸಂಸ್ಕರಿಸಿದ್ದ ವಿಡಿಯೊ, ಬುಕ್ಕಾಂಬುಧಿ ಪ್ರಾದೇಶಿಕ ಕನ್ನಡ ಇಂಗ್ಲೀಷ್ ಶಬ್ದಕೋಶ ಆಧಾರಿತ ಥಟ್ ಅಂತ ಹೇಳಿ ಪದ–ಅರ್ಥ ಸ್ಪರ್ಧೆಗಳು, ವೇದಿಕೆಯ ಕಾರ್ಯಕ್ರಮ, ಭಾಷಣಗಳು ನಡೆದವು. ಕನ್ನಡ ಸಾಹಿತ್ಯ ಹಾಗೂ ಚಿತ್ರರಂಗದ ಹಲವು ಪ್ರಸಿದ್ಧರು ಭಾಗವಹಿಸಿದ್ದರು. ಭರ್ಜರಿ ಊಟ, ಪುಸ್ತಕ ತಾಂಬೂಲಗಳೊಡನೆ ಅತ್ಮೀಯ ಕೌಟುಂಬಿಕ ಕಾರ್ಯಕ್ರಮದ ಘಮಲು ಹೊತ್ತು ಮನೆಗೆ ಬಂದೆ.



'ಬಿವಿಕೆ' ಎಂದು ಬಂಧು ಬಾಂಧವರ ನಡುವೆ ಹೆಸರಾದ ಬುಕ್ಕಾಂಬುಧಿ ಕೃಷ್ಣಮೂರ್ತಿಯವರು, 1926ರಲ್ಲಿ ಚಿಕ್ಕಮಗಳೂರಿನಲ್ಲಿ ಜನಿಸಿದರು.


ಬುಕ್ಕಾಂಬುಧಿಯಲ್ಲಿ ಶ್ರೀ ಕೃಷ್ಣಮೂರ್ತಿಯವರ ಮನೆ

ಬಡ ಮಧ್ಯಮ ವರ್ಗದ ಮನೆತನ. ತಂದೆ ವೆಂಕಟರಮಣ ಭಾಗವತರು, ತಾಯಿ ನಂಜಮ್ಮ. ಏಳನೆಯ ವಯಸ್ಸಿಗೆ ತಾಯಿಯ ವಿಯೋಗ. ನೋಡಿಕೊಳ್ಳಲು ಯಾರೂ ಇರಲಿಲ್ಲ. ಅಣ್ಣ ನೊಡನೆ ಮೈಸೂರಿಗೆ ಪಯಣ. 1935ರಲ್ಲಿ ಮಾಧ್ಯಮಿಕ ಶಾಲೆಯ ಓದಿಗಾಗಿ ಮರಳಿ ಚಿಕ್ಕಮಗಳೂರಿಗೆ. ಎಸ್ಸೆಸ್ಸೆಲ್ಸಿ ನಂತರ 1943ರಲ್ಲಿ ಬೆಂಗಳೂರಿಗೆ. ಟೈಪಿಂಗ್, ಶಾರ್ಟ್‌ಹ್ಯಾಂಡ್, ಅಕೌಂಟೆನ್ಸಿಗಳ ಅಧ್ಯಯನ. ಕೆಲಸಕ್ಕಾಗಿ ಪರದಾಟ. ಪುಟ್ಟಪುಟ್ಟ ಕೆಲಸಗಳು. ಹಲವೆಡೆ ಅರೆಕಾಲಿಕ ಕೆಲಸಗಳು.

1944ರಲ್ಲಿ ಸೊದರಮಾವನ ಮಗಳು ಚಿನ್ನಮ್ಮನೊಂದಿಗೆ ವಿವಾಹ. ಕಾಫೀ ಬೋರ್ಡಿನಲ್ಲಿ 58 ರೂಪಾಯಿ ಸಂಬಳದ ಕೆಲಸ, ಜೊತೆಗೆ ಮನೆಯಲ್ಲಿ ಖಾಸಗಿಯಾಗಿ ಹಲವು ಬಗೆಯ ಕೆಲಸ. ಸ್ನಾತಕೋತ್ತರ ವಿದ್ಯಾರ್ಥಿಗಳ ಥೀಸಿಸ್‌ನ್ನು ಹಗಲೂ ರಾತ್ರಿ ಟೈಪ್ ಮಾಡುವುದು, ಕಣ್ಣು ಮಂಜಾಗಿದ್ದ ನಿವೃತ್ತ ನ್ಯಾಯಾಧೀಶರ ಮನೆಗೆ ಹೋಗಿ ದಿನಪತ್ರಿಕೆ ಯನ್ನು ಓದುವುದು.. ಹೀಗೆ. ಸಂಸಾರ ನಿರ್ವಹಣೆಗಾಗಿ ಹರಸಾಹಸ.

1948 ರಲ್ಲಿ ಹುಟ್ಟಿದ ಮಗಳು ಜಯಶ್ರೀ ಬಹಳ ಕಾಲ ಉಳಿಯಲಿಲ್ಲ. 1950ರಲ್ಲಿ ಮೊದಲ ಮಗ ಪ್ರಭಾಕರ, 1953ರಲ್ಲಿ ಅವಳಿ ಮಕ್ಕಳು ಇಂದು, ಶ್ರೀಧರ, 1961ರಲ್ಲಿ ಕೊನೆಯ ಮಗ ಆನಂದ ಹುಟ್ಟಿದ್ದು. ಈ ನಡುವೆ ಹಲವಾರು ಬಾರಿ ಕಾರ್ಯನಿಮಿತ್ತ ವರ್ಗಾವರ್ಗಿ, ಮಕ್ಕಳ ವಿದ್ಯಾಭ್ಯಾಸ, ನೆಂಟರಿಷ್ಟರ ಮದುವೆ ಮತ್ತಿತರ ಸಾಮಾಜಿಕ ಕಾರ್ಯಕ್ರಮಗಳಲ್ಲಿ, ಆಫೀಸಿನಲ್ಲಿ ಸಹೋದ್ಯೋಗಿಗಳ ಜತೆಗೂಡಿ ಹಲವಾರು ನಾಟಕಗಳಲ್ಲಿ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಿ ಕೃಷ್ಣಮೂರ್ತಿಯವರು ಭಾಗವಹಿಸುತ್ತಿದ್ದರು. 1959ರಲ್ಲಿ ಬೆಂಗಳೂರಿನ ಜಯನಗರದಲ್ಲಿ ನಿವೇಶನವೊಂದನ್ನು ಕೊಂಡು ಮನೆ ಕಟ್ಟಿದರು. 1977ರಲ್ಲಿ, ಅಧಿಕಾರಿಯಾಗಿ, 1982ರಲ್ಲಿ ಡೆಪ್ಯುಟಿ ಡೈರೆಕ್ಟರ್ ಆಗಿ ಬಡ್ತಿ, 1984ರಲ್ಲಿ ನಿವೃತ್ತಿ.

1980ರಲ್ಲಿ ಹೆಂಡತಿ ಚಿನ್ನಮ್ಮನವರಿಗೆ ಲಕ್ವಾ ಹೊಡೆದು ಎಡಗೈ, ಎಡಗಾಲು ಸ್ವಾಧೀನ ತಪ್ಪಿತು. ಉಳಿದಿದ್ದೆ ಹೆಚ್ಚಿನ ವಿಷಯವಾಯಿತು ಎನ್ನುತ್ತಾರೆ ಕೃಷ್ಣಮೂರ್ತಿಗಳು. ಸ್ನಾನ ಮಾಡಿಸಿ, ತಲೆಬಾಚಿ, ಸೀರೆ ಉಡಿಸುವುದು, ಗಾಲಿ ಕುರ್ಚಿಯಲ್ಲಿ ಸುತ್ತಾಡಿಸುವುದು ಮುಂತಾದ ಶುಶ್ರೂಷೆಗಳನ್ನು ಸ್ವತಃ ಕೃಷ್ಣಮೂರ್ತಿಗಳೇ ಮಾಡುತ್ತಿದ್ದರು. ಚಿನ್ನಮ್ಮನವರಿಗೆ ಬೇಸರ ಹಾಗೂ ಸಂಕೋಚವಾಗುತ್ತಿತ್ತು. ಬಿವಿಕೆಯವರು ಒಮ್ಮೆಯೂ ಬೇಸರಿಸದೆ ಪತ್ನಿಯ ಸೇವೆಯನ್ನು ಮಾಡಿದರು. ಹೆಂಡತಿಯು ಗಂಡನಿಗೆ ಅಗತ್ಯವಿದ್ದಾಗ ಸೇವೆ ಮಾಡುವುದಿಲ್ಲವೇ ಅಂತೆಯೇ ಗಂಡಸರೂ ಮಾಡಬೇಕು ಎಂಬುದು ಬುಕ್ಕಾಂಬುಧಿಯವರ ನಿಲುವು. 1994ರಲ್ಲಿ, 13 ವರ್ಷಗಳ ನೋವು ಅನುಭವಿಸಿ ಚಿನ್ನಮ್ಮ ತೀರಿಕೊಂಡರು. 49 ವರ್ಷಗಳ ಅನುರೂಪದ ದಾಂಪತ್ಯ ಕೊನೆಗೊಂಡಿತು. ಆ ವೇಳೆಗೆ ಮಕ್ಕಳು ತಮ್ಮ ಸ್ವಂತ ಕಾಲಿನ ಮೇಲೆ ನಿಲ್ಲುವಂತಾಗಿದ್ದರು.

ಬಿವಿಕೆ ಅವರಿಗೆ ಬೇಸರ, ಹಳೆಯ ನೆನಪುಗಳು. ಬಾಳಸಂಗಾತಿಯು ಜೊತೆಗಿಲ್ಲ ಏನು ಮಾಡಲಿ ಎಂಬ ಅಸ್ತವ್ಯಸ್ತ ಭಾವ.

ಇಲ್ಲಿಂದ ಹೊಸ ಕಥೆ ಆರಂಭವಾಗುತ್ತದೆ. ಅಮೇರಿಕಾದಲ್ಲಿದ್ದ ಮಗಳು "ಇಲ್ಲಿಗೆ ಬಾ, ಸ್ವಲ್ಪ ದಿನ ಇರಬಹುದು" ಅನ್ನುತ್ತಾರೆ. 1997ರ ಫೆಬ್ರವರಿಯಲ್ಲಿ, ಬುಕ್ಕಾಂಬುಧಿಯವರು ಮಗಳ ಸಹಾಯದಿಂದ ಗ್ರೀನ್ ಕಾರ್ಡ್ ವೀಸಾದಲ್ಲಿ ಅಮೇರಿಕಾಗೆ ಪ್ರಯಾಣ ಬೆಳೆಸುತ್ತಾರೆ. ಮೊದಲ ಮೂರು ತಿಂಗಳು ನೆಂಟರ ಮನೆಗಳಲ್ಲಿ ವಾಸ್ತವ್ಯ, ಆದರ ಆತಿಥ್ಯ ನಡೆಯಿತು. ಆದರೆ ಇವರಿಗೆ ಸುಮ್ಮನೆ ಕೂರಲು ಆಗುತ್ತಿರಲಿಲ್ಲ. ತಮ್ಮ ಖರ್ಚುಗಳನ್ನು ಇತರರ ಮೇಲೆ ಹಾಕುವುದು ಸರಿಯಲ್ಲ ಅನ್ನಿಸುತ್ತಿತ್ತು. ಬೆಂಗಳೂರಿನಿಂದ ತಂದ ಡಾಲರುಗಳು ಆವಿಯಾಗುತ್ತಿದ್ದವು. ಬೇರೆ ಬೇರೆ ಊರು ಕೇರಿಗಳನ್ನು ನೋಡುವ ಆಸೆ. ಆದರೆ ಹಣಕ್ಕಾಗಿ ಯಾರನ್ನು ಕೇಳುವುದು. ಒಂದೊಂದು ಸರ್ತಿ ನಗು ಬರ್ತಿತ್ತು, "ನಾನೇಕೆ ಎಲ್ಲಾ ಬಿಟ್ಟು ಇಂಥಾ ದೇಶಕ್ಕೆ ಬಂದೆ" ಅಂತ. ಗಮನಿಸಿ ಆಗ ಬುಕ್ಕಾಂಬುಧಿಯರಿಗೆ 71 ವರ್ಷ.

ಸರಿ, ಕೆಲಸದ ಬೇಟೆ ಆರಂಭಿಸಿದರು. ಸಂಬಂಧಿಕ ಡಾಕ್ಟರ್ ಒಬ್ಬರ ಸಹಾಯದಿಂದ ಬೇರೊಂದು ಆಸ್ಪತ್ರೆಯಲ್ಲಿ ಒಂದು ತಿಂಗಳ ಕಾಲ ಸ್ವಯಂಸೇವಕ. ಸಂಬಳ ಇಲ್ಲ, ಪ್ರಮಾಣಪತ್ರ ಮಾತ್ರ. ವಾರಕ್ಕೆ 25 ಗಂಟೆ ಕೆಲಸ ಮಾಡಿದ್ದರೆ ಸಾಕಿತ್ತು, ಇವರು 60 ಗಂಟೆ ಮಾಡಿದರು. ಆ ಕೆಲಸ ಬಿಡುವಾಗ ಆಸ್ಪತ್ರೆಯವರು ದಿನಕ್ಕೆ 2-3 ಗಂಟೆಗಳ ಕೆಲಸ ಕೊಡುವುದಾಗಿ ಹೇಳಿದರು. ಆದರೆ ಬಂಧುಗಳ ಮನೆಯಲ್ಲಿ ವಾಸವಿರಬೇಕಾಗಿತ್ತು. ಕೃಷ್ಣಮೂರ್ತಿ ಬೇಡವೆಂದರು. ಬೇರೆ ಬೇರೆ ಸಂಸ್ಥೆಗಳಿಗೆ ಅರ್ಜಿ ಹಾಕಿದರು. ಸಂದರ್ಶನಗಳಾಯಿತು. ತೇರ್ಗಡೆಯಾಗಲಿಲ್ಲ.

ಮತ್ತೊಂದು, ಟಚ್ ಕೇರ್ ಎಂಬ ಸಂಸ್ಥೆ. ವಯಸ್ಸಾದವರನ್ನು [!] ಬೆಳಗಿನಿಂದ ಸಂಜೆಯವರೆಗೂ ನೋಡಿ ಕೊಳ್ಳುವುದು. ಅಗತ್ಯ ಬಿದ್ದರೆ ಹೊರಗೂ ಕರೆದೊಯ್ಯಬೇಕು. ಗಂಟೆಗೆ ಆರು ಡಾಲರ್, ದಿನಕ್ಕೆ ಎಂಟು ಗಂಟೆ. ಬಿವಿಕೆ ತಯಾರಾದರು. ಅಗ ನ್ಯೂಯಾರ್ಕಿನಲ್ಲಿ, ಒಂದು ಘಟನೆಯಾಗಿತ್ತು. ಒಬ್ಬ ಸೇವಾಕರ್ತ ಮನೆಯಲ್ಲಿದ್ದ ಇಬ್ಬರು ಹಿರಿಯ ಮಹಿಳೆಯರನ್ನು ಕೊಲೆ ಮಾಡಿ ದರೋಡೆ ಮಾಡಿದ್ದ. ಸುದ್ದಿ ತಿಳಿದ ಮಗಳು ಹೌಹಾರಿ, "ಅಣ್ಣಾ, ನಿನಗೆ ಕೆಲಸ ಸಿಕ್ಕದಿದ್ದರೂ ಪರವಾಗಿಲ್ಲ, ಈ ಕೆಲಸಕ್ಕೆ ಮಾತ್ರಾ ಹೋಗಬೇಡ" ಎಂದು ಕಟ್ಟಾಜ್ಞೆ ಮಾಡಿದರು. ಬಿವಿಕೆ ಒಪ್ಪಲೇ ಬೇಕಾಯಿತು.

ಒಂದೆರಡು ಖಾಸಗಿ ಸಂಸ್ಥೆಗಳಲ್ಲಿ ಪ್ರಯತ್ನವಾಯಿತು. ಆದರೆ ಅವರೆಂದರು "ಸ್ವಾಮಿ, ಇದು ಶ್ರಮದಾಯಕ ಕೆಲಸ, ನಿಮ್ಮ ವಯಸ್ಸಿಗೆ ಆಗುವುದಿಲ್ಲ" ಕೃಷ್ಣಮೂರ್ತಿಯವರು ಅಕ್ಕಪಕ್ಕ ನೋಡಿದರು. "ಹೌದು, ಈ ಸಂಸ್ಥೆಯವರು ನನಗೇ ಹೇಳಿದ್ದು, ಆದರೆ ನನಗೆ ವಯಸ್ಸಾಗಿದೆ ಅಂತ ಅವರಿಗೆ ಯಾರು ಹೇಳಿದ್ದು. ನಾನಂತೂ ಚಿಕ್ಕ ವಯಸ್ಸಿನ ಹುಡುಗನೇ!". ಇನ್ನೊಂದು ಆಸ್ಪತ್ರೆಯಲ್ಲಿ ಕೆಲಸ ಮಾಡಿದರು. ಅಲ್ಲಿಯೂ ಎಲ್ಲರೂ ಆದರದಿಂದ ನೋಡಿಕೊಂಡರು. ಆದರೆ ಕೆಲಸದ ಹುಡುಕಾಟ ನಿಲ್ಲಲಿಲ್ಲ.

1997ರ ಡಿಸೆಂಬರ್ ಕಡೆಯಲ್ಲಿ, ಮಗಳು-ಅಳಿಯನಿಗೆ ಪರಿಚಿತರಾಗಿದ್ದ ತೆರಿಗೆ ಸಲಹೆಗಾರರಾದ ಶ್ರೀ ನಾಗಾನಂದ ಅನ್ನುವವರನ್ನು ಭೇಟಿ ಮಾಡಿ ಕೆಲಸ ಕೇಳಿದರು. ಅವರೆಂದರು "ನೀವು ಮುಂಚೆ ಮಾಡುತ್ತಿದ್ದ ಕೆಲಸ ಮತ್ತು ಇತರ ಅಗತ್ಯ ಮಾಹಿತಿಗಳನ್ನು ನೀಡಿರಿ. ಸದ್ಯಕ್ಕೆ ನಮ್ಮಲ್ಲಿ ಕೆಲಸವಿಲ್ಲ. ಸಾಮಾನ್ಯವಾಗಿ ತೆರಿಗೆ ಕಾಲದಲ್ಲಿ ಅಗತ್ಯಕ್ಕೆ ತಕ್ಕಂತೆ ಮೂರು ತಿಂಗಳು ಕೆಲವರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತೇವೆ. ನೋಡೋಣ." ಈ ಮಧ್ಯೆ ದೇವಸ್ಥಾನವೊಂದರಲ್ಲಿ ಹಂಗಾಮಿ ಕೆಲಸವಿದೆಯೆಂದು ಗೆಳೆಯರೊಬ್ಬರು ತಿಳಿಸಿದರು. ಆದರೆ ಆ ಬಗ್ಗೆ ಚಿಂತಿಸುವ ಮುನ್ನವೇ ಬುಕ್ಕಾಂಬುಧಿಯವರ ಬದುಕಿನಲ್ಲಿ ರೋಚಕ ತಿರುವು ದೊರೆಯಿತು. ಆ ತಿರುವು ಅವರ ಸ್ಥಾನ ಗೌರವವನ್ನು ಏರಿಸಿದ್ದಲ್ಲದೆ, ಬುಕ್ಕಾಂಬುಧಿಯವರನ್ನು ಇತರರ ಜೀವನಾದರ್ಶ ವ್ಯಕ್ತಿಯನ್ನಾಗಿ ರೂಪಿಸಿತು. ಏನದು?

1998ರ ಫೆಬ್ರವರಿ 24ರಂದು, ನಾಗಾನಂದ ಅವರಿಂದ ಕರೆ ಬಂತು. "ಈಗಲೂ ಕೆಲಸ ಮಾಡಲು ಇಷ್ಟವಿದ್ದಲ್ಲಿ ಬರಬಹುದು" ಅನ್ನುವ ಸಂದೇಶ. ಬಿವಿಕೆ ಬರೆಯುತ್ತಾರೆ "ಒಂದೇ ನೆಗೆತದಲ್ಲಿ ಹೊರಟು ಬಂದೆ, ಅದೂ ಬಸ್ಸಿನಲ್ಲಿ, ಪೋರ್ಟ ಲಾಟರ್ಡೇಲ್‌ನಿಂದ ನ್ಯೂಯಾರ್ಕಿಗೆ 1200 ಮೈಲಿ ಪ್ರಯಾಣ. ಫೆಬ್ರವರಿ 26 ರಂದು ಕೆಲಸ ಆರಂಭ".

ಕೃಷ್ಣಮೂರ್ತಿಯವರಿಗೆ ಟೈಪಿಂಗ್ ಕರತಲಾಮಲಕ. ನಾಗಾನಂದ ಅವರು 72ರ ಈ ತರುಣನಿಗೆ ಕಂಪ್ಯೂಟರ್ ಹೇಳಿಕೊಟ್ಟರು. ನಾಗಾನಂದ ಅವರು ಭಾರತದಲ್ಲಿ ಐಎಎಸ್ ಅಧಿಕಾರಿಯಾಗಿದ್ದರು. ಚಾರ್ಟೆಡ್ ಅಕೌಂಟೆನ್ಸಿ ಮಾಡಿದ್ದರು. ಐಎಎಸ್ ತೊರೆದು ಅಮೇರಿಕೆಗೆ ಹೋಗಿ ನ್ಯೂಯಾರ್ಕ್‌ನಲ್ಲಿ ತೆರಿಗೆ ಸಲಹೆ ಮತ್ತು ವಕೀಲ ವೃತ್ತಿ ಮಾಡುತ್ತಿದ್ದರು. ಅಂಥವರು ಸ್ವಲ್ಪವೂ ಬೇಸರಿಸದೆ ಬಿವಿಕೆ ಅವರಿಗೆ ಕೆಲಸ ಕಲಿಸಿದರು. ಈ ವಿದ್ಯಾರ್ಥಿಯೋ ಏಕಸಂಧಿಗ್ರಾಹಿ.

1998ರ ಟ್ಯಾಕ್ಸ್ ಋತು ಮುಗಿಯಿತು. ನಾಗಾನಂದ ಅವರು ಸಂಸ್ಥೆಯ ಪಾಲುದಾರರಿಂದ ಬೇರೆಯಾಗಿ ಹೊಸ ಕಛೇರಿ ಸ್ಥಾಪಿಸಿದರು. ಬಿವಿಕೆ ಅವರನ್ನು ಕೆಲಸದಲ್ಲಿ ಮುಂದುವರೆಸಿದರು. ಮಗಳ ಮನೆಯಿಂದ ಸಬ್‌ವೇನಲ್ಲಿ ನಿತ್ಯ ಪ್ರಯಾಣ. ಒಂದೇ ರೈಲು. ಇವರಿಗೆ ತೊಂದರೆ ಅನ್ನಿಸಲಿಲ್ಲ. ನಾಗಾನಂದ ಅವರ ಮನೆ ಇದ್ದಿದ್ದು ನ್ಯೂಜರ್ಸಿಯಲ್ಲಿ. ಬಂದು ಹೋಗಲು 3 ಗಂಟೆ ಸಮಯ. "ನೀವೂ ನನ್ನ ಜೊತೆ ಇದ್ದುಬಿಡಿ" ಅಂದರು. ಹಿಂದು ಮುಂದು ನೋಡದೆ ಬಿವಿಕೆ ಒಪ್ಪಿದರು. ಮಗಳ ಮನೆಗೆ 8-10 ದಿನಕ್ಕೊಮ್ಮೆ ಭೇಟಿ.

ಸೆಪ್ಟಂಬರ್ 2001ರಲ್ಲಿ ವರ್ಲ್ಡ್ ಟ್ರೇಡ್ ಸೆಂಟರ್ ಮೇಲೆ ಉಗ್ರಗಾಮಿಗಳ ದಾಳಿಯಾಯಿತು. ನಾಗಾನಂದ ಅವರು ನ್ಯೂಯಾರ್ಕಿನಿಂದ ನ್ಯೂಜರ್ಸಿಗೆ ಕಛೇರಿಯನ್ನು ಬದಲಿಸಬೇಕೆಂದು ಬಯಸಿದರು. ಆದರೆ ಅಲ್ಲಿನ ನಿಯಮಾವಳಿಗಳಂತೆ ನಾಗಾನಂದ ಅವರು ಪುನಃ ಎರಡು ವರ್ಷ ಕಾನೂನನ್ನು ನ್ಯೂಜರ್ಸಿಯಲ್ಲಿ ಅಭ್ಯಾಸ ಮಾಡಬೇಕಾಯಿತು. ಆ ಎರಡು ವರ್ಷಗಳು, ಬುಕ್ಕಾಂಬುಧಿಯವರು ಒಬ್ಬರೇ ನಿತ್ಯವೂ ನ್ಯೂಜರ್ಸಿ-ನ್ಯೂಯಾರ್ಕ್ ನಡುವೆ ರೈಲಿನಲ್ಲಿ ಓಡಾಡಿದರು. ಕಚೇರಿಯ ಎಲ್ಲಾ ಕೆಲಸಗಳನ್ನು ನಿರ್ವಹಿಸಿ, ನಾಗಾನಂದ ಅವರಿಂದ ಸಮ್ಮತಿಯನ್ನು ಪಡೆಯುತ್ತಿದ್ದರು.



ಬುಕ್ಕಾಂಬುಧಿ ಕೃಷ್ಣಮೂರ್ತಿಯವರೊಂದಿಗೆ
ಲೇಖಕ ಬೆಂ.ಶ್ರೀ.ರವೀಂದ್ರ, ಗುರುಪ್ರಸಾದ್ ಹಾಲ್ಕುರಿಕೆ ಮತ್ತಿತರರು

ಈಗ ನಾಗಾನಂದ ನ್ಯೂಜರ್ಸಿಯಲ್ಲಿ ಆದಾಯ ತೆರಿಗೆ, ಇಮ್ಮಿಗ್ರೇಶನ್ ಮುಂತಾದ ಹಲವಾರು ಕೆಲಸಗಳನ್ನು ಮಾಡುತ್ತಿದ್ದಾರೆ. ಅವರ ಇಬ್ಬರು ಮಕ್ಕಳು ದೊಡ್ಡವರಾಗಿದ್ದಾರೆ. ನಾಗಾನಂದ ಮತ್ತು ಕೃಷ್ಣಮೂರ್ತಿಯವರ ಬಾಂಧ್ಯವ್ಯ 26 ವರ್ಷಗಳನ್ನು ಕಂಡಿದೆ. 71 ವರ್ಷದ ನಾಗಾನಂದ ಮತ್ತು 98ರ ಹರೆಯದ ಕೃಷ್ಣಮೂರ್ತಿಗಳು, ಇಬ್ಬರೂ ಈಗ ಅಖಂಡ ಮಿತ್ರರಾಗಿದ್ದಾರೆ.

ಬಿವಿಕೆಯವರು ನಾಟಕ ಪ್ರಿಯರು. ಭಾರತದಿಂದ, ಕರ್ನಾಟಕದಿಂದ ಹೋದ ಹಲವು ಸಾಹಿತಿ, ಕಲಾವಿದರಿಗೆ ಆತಿಥ್ಯ ನೀಡಿದ್ದಾರೆ. ಕನ್ನಡ ಸಂಘಗಳಲ್ಲಿ ಕ್ರಿಯಾಶೀಲರಾಗಿದ್ದಾರೆ. ಸ್ವತಃ ಸಾಹಿತಿಯೂ ಆಗಿರುವ ಬಿವಿಕೆ ಇಲ್ಲಿಯವರೆಗೆ ಹನ್ನೊಂದು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅದರಲ್ಲಿ ಇತ್ತೀಚಿಗೆ ಬಿಡುಗಡೆಯಾದ "ಬುಕ್ಕಾಂಬುಧಿ ಕನ್ನಡ-ಇಂಗ್ಲೀಷ್ ಪ್ರಾದೇಶಿಕ ನಿಘಂಟು" ಮಹತ್ವದ್ದು. ಪ್ರೊಫೆಸರ್ ಜಿ ಅಶ್ವತ್ಥನಾರಾಯಣ ಸಹ-ನಿಘಂಟುಕಾರರಾಗಿದ್ದಾರೆ.

ಬಿವಿಕೆಯವರು ಪ್ರಪಂಚದ ಎಲ್ಲಾ ದೇಶಗಳನ್ನು ಪ್ರವಾಸ ಮಾಡಿದ್ದಾರೆ. ಭಾರತಕ್ಕೆ ಬಂದಾಗ ದೇಶದೊಳಗೆ ತಿರುಗಾಡುತ್ತಾರೆ. ಈ ಬಾರಿ ಅಯೋಧ್ಯೆಗೆ ಹೋಗಿದ್ದರು.

2010ರಲ್ಲಿ ಬುಕ್ಕಾಂಬುಧಿಯವರ ಮಗಳು ಭಾರತಕ್ಕೆ ವಾಪಸ್ಸು ಬಂದರು. ಈಗ ಅವರ ಮಕ್ಕಳು ಯಾರೂ ಅಮೇರಿಕೆಯಲ್ಲಿ ಇಲ್ಲ. ಬಿವಿಕೆಯೊಬ್ಬರೇ ನಾಗಾನಂದರ ಜೊತೆ ಇನ್ನೂ ಕೆಲಸ ಮಾಡುತ್ತಾ ಅಮೆರಿಕೆಯಲ್ಲಿಯೇ ಇದ್ದು ಅಮೇರಿಕಾದ ಪ್ರಜೆಯಾಗಿದ್ದಾರೆ. ಹೇಗಿದೆ? ನೀವು ಕೇಳಿರುವ ಕಥೆಗಳಲ್ಲಿ ಮಕ್ಕಳು ವಿದೇಶದಲ್ಲಿ ಇರುತ್ತಾರೆ. ವಯಸ್ಸಾದ ತಂದೆ ತಾಯಿ ಭಾರತದಲ್ಲಿ ಇರುತ್ತಾರೆ. ಆದರೆ ಬುಕ್ಕಾಂಬುಧಿಯವರು ಅಮೇರಿಕೆಯಲ್ಲಿದ್ದರೆ ಅವರ ಮಕ್ಕಳು ಭಾರತದಲ್ಲಿ.

ನಾನು ಬುಕ್ಕಾಂಬುಧಿಯವರನ್ನು ಭೇಟಿ ಮಾಡಿದಾಗ ಒಂದು ಮನವಿ ಮಾಡಿದೆ. “ಸ್ವಾಮಿ, ನಿಮ್ಮ ಶತಮಾನೋತ್ಸವಕ್ಕೆ ಬೆಂಗಳೂರಿಗೆ ಬನ್ನಿ ನಾವೆಲ್ಲಾ ಕೂಡಿ ಆಚರಿಸೋಣ” ಅವರು ನಕ್ಕರು.

ಆ ನಗುವಿನಲ್ಲಿ ಬುಕ್ಕಾಂಬುಧಿಯ ವಿಸ್ಮಯವಿತ್ತು.

ಶ್ರೀ ಬಿವಿಕೆ ಅವರ ಫೋನ್ ನಂಬರ್, ಇಮೇಲ್ ಮತ್ತು ವಿಳಾಸ;

Sri KB Murthy, 27 N, Juliet Street , ISELIN, New Jersey, USA.
Phone: +1 732 986 7041
E mail address. kbmurthy26@hotmail.com

***

'ಬ್ರೇಕಿಂಗ್ ನ್ಯೂಸ್'ನಲ್ಲಿ ಏಕಲವ್ಯನ ಗುರುದಕ್ಷಿಣೆ

– ಕಮಲಾಕ್ಷಿ ಸಿ.ಆರ್.

ಇದೀಗ ಬಂದ ಸುದ್ದಿ!

ಮಹಾ ಬ್ರೇಕಿಂಗ್ ನ್ಯೂಸ್

ಬ್ರೇಕ್ ಮಾಡ್ತಿರೋದು ನಮ್ಮ ಮಭಾ ನ್ಯೂಸ್ ಚಾನೆಲ್

ನಾಡಿನ ಜನತೆಯನ್ನು ಬೆಚ್ಚಿಬೀಳಿಸುವ ಘಟನೆ...

ಹಿಂದೆಂದೂ ನಡೆಯದ ಮನಕಲುಕುವ ಹೃದಯ ವಿದ್ರಾವಕ ಘಟನೆ..

ಘಟನೆಯ ವಿಸ್ತೃತ ವಿವರಣೆ ಕೆಲವೇ ಕ್ಷಣಗಳಲ್ಲಿ ನಿಮ್ಮ ಮುಂದೆ..

ಮಹಾ ಬ್ರೇಕಿಂಗ್ ನ್ಯೂಸ್!

ದ್ರೋಣಾಚಾರ್ಯರ ಗುರುಕುಲ ಸಮೀಪದ ಅರಣ್ಯ ಪ್ರದೇಶದಲ್ಲಿ ಇಂದು ಘಟಿಸಿದೆ ಎಂದು ಬಲ್ಲ ಮೂಲಗಳಿಂದ ತಿಳಿದು ಬಂದಿದೆ. ಇನ್ನೇನು ಕೆಲವೇ ಕ್ಷಣಗಳಲ್ಲಿ ನಮ್ಮ ವರದಿಗಾರರು ಘಟನಾ ಸ್ಥಳವನ್ನು ತಲುಪಲಿದ್ದಾರೆ. ಕೆಲವೇ ನಿಮಿಷಗಳಲ್ಲಿ ನೇರ ಪ್ರಸಾರದೊಂದಿಗೆ ನಿಮ್ಮ ಮುಂದೆ ಹಾಜರಾಗಲಿದ್ದೇವೆ..

ಹೃದಯ ವಿದ್ಯಾವಕ ಘಟನೆ...

ದ್ರೋಣಾಚಾರ್ಯರಿಂದ ಬಾಲಕನ ಹೆಬ್ಬೆರಳು ಗುರುದಕ್ಷಿಣೆಯಾಗಿ ಕೋರಿಕೆ...

ಕ್ಷಣಮಾತ್ರದಲ್ಲಿ ಹೆಬ್ಬೆರಳನ್ನು ಕತ್ತರಿಸಿ ಮಾನಸ ಗುರುಗಳ ಪಾದಕ್ಕೆ ಅರ್ಪಿಸಿದ ಬಾಲಕ...

ಬಾಲಕನ ಗುರುಭಕ್ತಿಗೆ ಫಿದಾ ಆದ ಅರ್ಜುನ..

ನಾಡಿನ ಪ್ರಜೆಗಳಿಂದ ಬಾಲಕನಿಗೆ ನ್ಯಾಯ ಕೊಡುವಂತೆ ದೊರೆಗೆ ಆಗ್ರಹ...

ಹೆಲೋ.. ಹೆಲೋ... ಹೆಲೋ ಲಕ್ಷ್ಮಣ್..., ಕೇಳಿಸ್ತಾ ಇದೆಯಾ.. (ವರದಿಗಾರ)

ಹೇಳಿ... ಹೇಳಿ.. ರವೀಂದ್ರ.. ಏನಿದು ಗುರುದಕ್ಷಿಣೆ ಘಟನೆ? ಈ ಘಟನೆ ಹೇಗಾಯ್ತು ಅಂತ.

ಕೆಲಕಾಲದಿಂದ ಏಕಲವ್ಯ ಎಂಬ ಬಾಲಕ ದ್ರೋಣಾಚಾರ್ಯರನ್ನೇ ಮಾನಸ ಗುರುಗಳೆಂದು ಸ್ವೀಕರಿಸಿ ಬಿಲ್ವಿದ್ಯೆ ಕಲಿಯುತ್ತಿದ್ದನಂತೆ. ಅದನ್ನು ತಿಳಿದ ದ್ರೋಣಾಚಾರ್ಯರು ಬಾಲಕನ ಬಲಗೈ ಹೆಬ್ಬೆರಳನ್ನು ಗುರುದಕ್ಷಿಣೆಯಾಗಿ ಕೇಳಿದರಂತೆ. ಆ ಬಾಲಕ ಹಿಂದೆ ಮುಂದೆ ನೋಡದೆ ತಮ್ಮ ಬಲಗೈ ಹೆಬ್ಬೆರಳನ್ನು ಕತ್ತರಿಸಿ ಕೊಟ್ಟಂತಹ ಹೃಯವಿದ್ರಾವಕ ಘಟನೆ ನಡೆದಿದೆ.

ಹೆಬ್ಬೆರಳನ್ನು ಗುರುದಕ್ಷಿಣೆಯಾಗಿ ಕೇಳಿದ್ರಾ ದ್ರೋಣಾಚಾರ್ಯರು? ಇದರ ಬಗ್ಗೆ ಹೆಚ್ಚಿನ ಮಾಹಿತಿ ಏನಿದೆ ನಿಮ್ಮ ಬಳಿ?

ಇಂದು ಬೆಳಗ್ಗೆ ಬಿಲ್ವಿದ್ಯೆ ಅಭ್ಯಾಸಕ್ಕೆ ಅಂತ ದ್ರೋಣಾಚಾರ್ಯರು, ಅರ್ಜುನ ದುರ್ಯೋಧನರಾದಿಯಾಗಿ ಎಲ್ಲ ರಾಜಕುಮಾರರನ್ನೂ ಅರಣ್ಯ ಪ್ರದೇಶಕ್ಕೆ ಕರೆತಂದಿದ್ದರಂತೆ. ಆ ಸಮಯದಲ್ಲಿ ಬೇಟೆ ನಾಯಿಯೊಂದು ಬೊಗಳುತ್ತ ಅಭ್ಯಾಸಕ್ಕೆ ಭಂಗ ತಂದಿತಂತೆ. ರಾಜಕುಮಾರ ಅರ್ಜುನ ಶಬ್ದ ಬಂದಕಡೆ ಬಾಣಗಳನ್ನು ಹೂಡಿದರಂತೆ. ಆ ಶಬ್ದ ಅರಸಿ ಹೋದಾಗ ಅ ನಾಯಿಯ ಬಾಯಿಯಲ್ಲಿ ಇದ್ದದ್ದು ಅರ್ಜುನನ ಬಾಣಗಳ ಬದಲು ಬೇರೆ ಬಾಣಗಳಂತೆ. ಬಾಣದ ದಿಕ್ಕನರಸಿ ಹೋದಾಗ ಏಕಲವ್ಯ ಬಿಲ್ವಿದ್ಯೆಯ ಅಭ್ಯಾಸದಲ್ಲಿ ತೊಡಗಿದ್ದನ್ನು ಎಲ್ಲರೂ ನೋಡಿದ್ದಾರೆ. ಆಗ ಈ ಘಟನೆ ನಡೆದಿದೆ.

ಆ ಬಾಲಕ ಬಿಲ್ವಿದ್ಯೆ ಅಭ್ಯಾಸಕ್ಕೂ ದ್ರೋಣಾಚಾರ್ಯರು ಈ ಬಾಲಕನ ಬಳಿ ಗುರುದಕ್ಷಿಣೆ ಕೇಳೋದಕ್ಕೂ ಏನು ಸಂಬಂಧ? ಅವರು ಏಕಲವ್ಯನ ಗುರುಗಳಾ? ಅಷ್ಟಕ್ಕೂ ಕ್ರೂರವಾದ ಗುರು ದಕ್ಷಿಣೆ ಕೇಳಿದ್ದಾದ್ರೂ ಏಕೆ? ಈ ಬಾಲಕ ಏಕಲವ್ಯ ಯಾರು ಅಂತ?

ಬಾಲಕ ಏಕಲವ್ಯ ಬೇಡ ಜನಾಂಗದ ನಾಯಕ ಹಿರಣ್ಯದನ್ಯ ಹಾಗೂ ಸುಲೇಖ ದಂಪತಿಗಳ ಮಗನಂತೆ. ಒಮ್ಮೆ ದ್ರೋಣಾಚಾರ್ಯರ ಬಳಿ ಬಿಲ್ವಿದ್ಯೆ ಕಲಿಸಿ ಎಂದು ಏಕಲವ್ಯ ವಿನಂತಿಸಿದಾಗ, ಅವರು ರಾಜಕುಮಾರರಿಗಲ್ಲದೆ ಬೇರಾರರಿಗೂ ವಿದ್ಯೆ ಕಲಿಸುವುದಿಲ್ಲ ಎಂದು ಹೇಳಿ, ಒಳಿತಾಗಲಿ ಎಂದು ಆಶೀರ್ವಾದ ಮಾಡಿ ಕಳಿಸಿದ್ದರಂತೆ. ಅಂದಿನಿಂದ ದ್ರೋಣಾಚಾರ್ಯರ ಪ್ರತಿಮೆಯನ್ನು ಮಾಡಿಟ್ಟುಕೊಂಡು ಪ್ರತಿಮೆಯ ಸಮ್ಮುಖದಲ್ಲಿ ಬಿಲ್ವಿದ್ಯೆ ಮಾಡುತ್ತಿದ್ದನಂತೆ ಏಕಲವ್ಯ. ಇಂದು ಬೆಳಗ್ಗೆ ಅರ್ಜುನ, 'ಶಬ್ದವೇಧಿ ವಿದ್ಯೆಯಲ್ಲಿ ನನಗಿಂತ ಇವನು ನಿಪುಣನಾಗಿದ್ದಾನೆ, ನನಗೆ ಕೊಟ್ಟ ವಚನ ಮೀರಿದಿರಿ' ಎಂದು ದ್ರೋಣಾಚಾರ್ಯರನ್ನು ಆಕ್ಷೇಪಿಸಿದನಂತೆ. ತಮ್ಮ ಪ್ರಿಯ ಶಿಷ್ಯ ಅರ್ಜುನನಿಗೆ ಕೊಟ್ಟ ಮಾತು ಉಳಿಸಿಕೊಳ್ಳುವುದಕ್ಕಾಗಿ ಆಚಾರ್ಯರು ಈ ನಿರ್ಧಾರ ಮಾಡಿದರಂತೆ. ಏಕಲವ್ಯನಿಗೆ ಔಪಚಾರಿಕವಾಗಿ ವಿದ್ಯೆ ಕಲಿಸಿಲ್ಲದಿದ್ದರೂ ಆ ಬಾಲಕ ತನ್ನ ಮಾನಸ ಗುರುಗಳು ಎಂದು, ಕೇಳಿದಾಕ್ಷಣ ಹಿಂದೆ ಮುಂದೆ ನೋಡದೆ ತನ್ನ ಬಲಗೈ ಹೆಬ್ಬೆರಳು ಕತ್ತರಿಸಿ ಕೊಟ್ಟನಂತೆ. ಅವರ ಪ್ರಕಾರ ತಾವು ಕಲಿಸದಿದ್ದರೂ ತಮ್ಮ ಹೆಸರು ಬಳಸಿಕೊಳ್ಳುವುದು ತಪ್ಪು... ಇದಕ್ಕಾಗಿ ಗುರುದಕ್ಷಿಣೆ ಹೆಸರಲ್ಲಿ ಈ ರೀತಿಯ ಶಿಕ್ಷೆ ವಿಧಿಸಿದ್ದಾರೆ.

ಮತ್ತೆ ಆ ಬಾಲಕನ ಪರಿಸ್ಥಿತಿ ಹೇಗಿದೆ? ಆ ಬಾಲಕನೊಡನೆ ಮಾತನಾಡಲು ಸಾಧ್ಯವಾಯ್ತಾ? ಅಲ್ಲಿ ಪರಿಸ್ಥಿತಿ ಹೇಗಿದೆ?

ಆ ಬಾಲಕ ತನ್ನ ಬಲಗೈ ಹೆಬ್ಬೆರಳು ಕತ್ತರಿಸಿ ಕೊಟ್ಟ ಮೇಲೂ ಕಿಂಚಿತ್ ಬೇಸರಪಟ್ಟಿಲ್ಲವಂತೆ. ಬಲಗೈ ಹೆಬ್ಬೆರಳು ಹೋದರೇನಂತೆ.., ಎಡಗೈ ಹೆಬ್ಬೆರಳು ಇದೆಯಲ್ಲ ಎಂದನಂತೆ. ಆಚಾರ್ಯರು ಇಂತಹ ಬಾಲಕನಿಗೆ ಅನ್ಯಾಯ ಮಾಡಿದೆ ಎಂದು ದುಃಖಪಟ್ಟರಂತೆ. ಅರ್ಜುನ ತನಗೆ ಕೊಟ್ಟ ಮಾತು ಉಳಿಸಿಕೊಳ್ಳಲು ಈ ಘಟನೆ ನಡೆಯಿತಲ್ಲ ಎಂದು ಮರುಗಿದನಂತೆ.

ಮುಂದೆ..? ಏಕಲವ್ಯನ ಜೀವನ ಹೇಗೆ? ಅವನ ತಂದೆ ತಾಯಿಗೆ ವಿಷಯ ಗೊತ್ತಾಯ್ತಾ? ಅವರು ಏನು ಹೇಳಿದ್ರು?

ಈ ಘಟನೆ ಆದ ಕ್ಷಣದಲ್ಲೇ ದ್ರೋಣಾಚಾರ್ಯರು ತಮ್ಮ ಶಿಷ್ಯರನ್ನು ಕರೆದುಕೊಂಡು ಹಸ್ತಿನಾಪುರದ ಕಡೆ ಹೊರಟರಂತೆ. ಈ ಪ್ರಕರಣ ಕುರಿತು ದೃತರಾಷ್ಟ್ರ ಏನು ಪ್ರತಿಕ್ರಿಯಿಸುವರೋ ನೋಡಬೇಕು.

ಇತ್ತ ಏಕಲವ್ಯನ ತಂದೆ ತಾಯಿ ಕೂಡ ಏಕಲವ್ಯನತ್ತ ಧಾವಿಸಿ ಬಂದು ಚಿಕಿತ್ಸೆ ಕೊಡಿಸುತ್ತಿದ್ದಾರೆ. ನಮ್ಮನ್ಯಾರನ್ನೂ ಏಕಲವ್ಯನ ಬಳಿ ಮಾತನಾಡಲು ಬಿಡುತ್ತಿಲ್ಲ. ಬಹುಶಃ ಹಸ್ತಿನಾಪುರಕ್ಕೆ ಹೋಗಿ ಮಹಾರಾಜರ ಬಳಿ ನ್ಯಾಯಕ್ಕಾಗಿ ಆಗ್ರಹಿಸುವ ಸಾಧ್ಯತೆ ಕಂಡುಬರುತ್ತಿದೆ. ಅದಕ್ಕೆ ಬೆಂಬಲವಾಗಿ ಬಹಳಷ್ಟು ಜನ ಇಲ್ಲಿ ಒಟ್ಟಾಗಿದ್ದಾರೆ. ಗುರುಕುಲದಿಂದ ಕ್ಯಾಮೆರಾಮ್ಯಾನ್ ಪ್ರಸನ್ನ ಅವರೊಂದಿಗೆ ಲಕ್ಷ್ಮಣ, ಮಭಾ ನ್ಯೂಸ್‌ನೊಡನೆ.

ಹೆಲೋ.. ಸುಮನಾ? ಮಹಾರಾಜ ದೃತರಾಷ್ಟ್ರರಿಗೆ ಅರಣ್ಯದಲ್ಲಿ ನಡೆದ ಘಟನೆ ತಿಳೀತಾ? ಘಟನೆಗೆ ಸಂಬಂಧಪಟ್ಟಂತೆ ಅವರಿಂದ ಪ್ರತಿಕ್ರಿಯೆ ಸಿಕ್ಕಿತಾ.. ಏನ್ ಹೇಳ್ತಾರೆ?

ಹಸ್ತಿನಾವತಿಯಲ್ಲಿ ದೃತರಾಷ್ಟ್ರ ಮಹಾರಾಜರಿಗೆ ಈ ಬಗ್ಗೆ ಕೇಳಿದಾಗ.., ಇಂದು ಸಂಜಯ ಬೆಳಗಿನಿಂದ ನನ್ನ ಬಳಿ ಬಂದಿಲ್ಲ. ಅವನು ಬಂದ ನಂತರ ಮಾಹಿತಿ ತಿಳಿದು ಇದರ ಬಗ್ಗೆ ಪ್ರತಿಕ್ರಿಯೆ ನೀಡುವೆ ಎಂದಿರುವರು. ನಾವೂ ಕೂಡ ಹೆಚ್ಚಿನ ಮಾಹಿತಿ ನಿರೀಕ್ಷೆಯಲ್ಲಿರುವೆವು. ಲಭ್ಯವಾದ ಬಳಿಕ ನಿಮ್ಮನ್ನು ಸಂಪರ್ಕಿಸುವೆ, ರವೀಂದ್ರ. ಹಸ್ತಿನಾಪುರದಿಂದ.. ಕ್ಯಾಮರಾಮ್ಯಾನ್ ಕಿರಣ್ ಅವರೊಂದಿಗೆ.. ಸುಮನಾ..., ಮಭಾ ನ್ಯೂಸ್‌ಗಾಗಿ

ವೀಕ್ಷಕರೆ.. ನಿಮ್ಮ ಅಭಿಪ್ರಾಯವನ್ನು ಹಂಚಿಕೊಳ್ಳಿ. ಮುಂದೆಂದೋ ಬಿಲ್ವಿದ್ಯೆ ಪ್ರವೀಣ ಎಂದು ಹೆಸರು ಪಡೆಯ ಬೇಕೆಂದಿದ್ದ ಅರ್ಜುನನಿಗಾಗಿ ಬೇಡರ ಬಾಲಕ ಸ್ವಯಂ ವಿದ್ಯೆ ಕಲಿತರೂ, ವಿದ್ಯೆ ಕಲಿಸದ ಆಚಾರ್ಯ ದ್ರೋಣಾಚಾರ್ಯರು ಗುರುದಕ್ಷಿಣೆ ಕೇಳಿದ್ದು ನ್ಯಾಯವಾ.? ಮಹಾರಾಜರು ಏಕಲವ್ಯನಿಗೆ ಯಾವ ಪರಿಹಾರ ಕೊಡುವರೊ ಎಂಬ ವಿಷಯ ತಿಳಿಯಬೇಕಾಗಿದೆ. ಈಗಾಗಲೇ ದ್ರೋಣಾಚಾರ್ಯರ ನಡೆ ಖಂಡಿಸಿ ಪ್ರತಿಭಟನೆ ಶುರುವಾಗುವ ಎಲ್ಲ ಲಕ್ಷಣಗಳು ಗೋಚರಿಸುತ್ತಿವೆ. ಯಾವ ತಿರುವು ಸಿಗುವುದೋ ಕಾದು ನೋಡೋಣ..

ನೋಡೋಣ ಹಸ್ತಿನಾಪುರದಿಂದ ಸ್ವಲ್ಪ ಹೊತ್ತಿನ ಬಳಿಕ ಮತ್ತಾವ ನ್ಯೂಸ್ ಸಿಗುವುದೆಂದು.

ಅಲ್ಲೀವರೆಗೆ ನೋಡ್ತಾ ಇರಿ..ನಮ್ಮ ಮಭಾ ನ್ಯೂಸ್ ಚಾನೆಲ್.

***

ಹೀಗೊಂದು ಪ್ರೇಮಗೀತೆ

–ಶೀಲಾ ಅರಕಲಗೂಡು

ಪ್ರೇಮದ್ಗೀತೆ ಬರ್ಯೋ ಆಸೆ
ಮೂಡ್ಲೇ ಇಲ್ಲ... ಛೇ!... ಇಲ್ಲೀತನ್ಕ
ಮೂಡ್ಲೇ ಇಲ್ಲ
ಈಗ...
ಮುಪ್ಪಾಗ ಹುಟ್ಟೈತಲ್ಲೋ...
ನಿನ್ಮ್ಯಾಲೆ ಪಿರೂತಿ
ಹುಟ್ಟೇಬಿಟ್ಟೈತಲ್ಲೋ..
ತಪ್ಪೇನಲ್ಲ... ಅಲ್ವಾ?
ತಪ್ಪೆಂಥದ್ದು?... ಇದೇ ಸರಿ

ಹರೇದ್ ವಯಸ್ನಾಗ
ಕೆಲ್ಸೋ ಕೆಲ್ಸ
ಬಿಡ್ವೇ ಕಾಣ್ಲೆಲ್ವಲ್ಲ... ನಿಜ್ಕೂ
ನೀನು ನೆಪ್ಪಾಗ್ಲೇ ಇಲ್ಲ
ಮುಪ್ಪು ಬಂದಾಯ್ತೀಗ...
ಮನ್ಸು ಮಾಗ್ಲಿಕತ್ತೈತೀಗ...
ಕಲ್ಪನಾ ಚಿಗುರ್ಲಿಕತ್ಯಾಳ! ಹಾಂ..!
ಗೀತೆ ಹುಟ್ಟೈತಲ್ಲ!
ಮೆಲ್ಲಾನೆ ರಾಗ್ವಾಯ್ತಲ್ಲ!

ನಿನ್ನನ್ನ ನನ್‌ಮನಸ್ನಾಗೆ ಮೂಡ್ಕೊಂಡು
ನಾದಾನ ಬೆರಸ್ಕೊಂಡು
ಹಾಡ್ತೀನಿ ನಾ ನಂದೇ ಕವನಾವ
ಅವ್ನು ಯಾರಂತ ಕೇಳೀರೇನು?
ಎಲ್ರೂ ಬಯ್ಸೋಂಥವ್ನು
ಎಲ್ರಿಗೂ ಬೇಕಾದಂಥೋವ್ನು
ಬ್ರಹ್ಮಾಂಡ ಕಾಯ್ಸೋನು
ಬರ್ತಾನೇನ್ ನನ್ ಸನಿಹಕ್ಕ?
ಒಪ್ತಾನೇನ್ ನನ್‌ಪ್ರೇಮಾವಾ?
ಕಾಯ್ತಾ ಕುಂತೀವ್ನಿ ನಾನು

ನನ್ ಪ್ರೇಮದ್ ಹಾಡ್ ಹೆಂಗೈತೋ?
ರಾಗ ಮತ್ತಿನ್ನೆಂಗೈತೋ?
ಕೊರ್ತೆಯ ಕಂಡ್ಯಾ ಓ ನಲ್ಲ?
ಕಾಯ್ಬೇಕ ಮತ್ತೊಂದಷ್ಟ್ ಜನ್ಮಾವ?
ಕಾದೇನು ಬುಡು... ಕಾಯ್ತಾ ನಿಂದೇನು
ನಿನ್ ಧ್ಯಾನ್ದಾಗ... ಯುಗಾನೇ ಕಳ್ದೇನು
ಆದ್ರೂ... ಆದ್ರೂ... ಒಂದೀಟು
ಬೇಗನೆ ದಯ್ಮಾಡೋ ನನ ನಲ್ಲ ...
ಬಂದುದ್ಧರ್ಸೋ ಬಾ ನಲ್ಲ

ನಿನ್ನನ್ನ ಬಿಡದ್ದಾಂಗ
ಮತ್ತೆಂದೂ ಮರೀದ್ಹಾಂಗ
ಬದುಕ್ನಲ್ಲೆಲ್ಲೆಲ್ಲೂ ನಿನ್ನೇ ಕಾಣ್ವೆ
ಅಂಥಿಂಥ ಪ್ರೇಮ ನಂದಲ್ಲ ಕಾಣ್ಲಾ
ನಿನ್ನೊಳ್ಗೆ ನಾನು ನನ್ನೊಳ್ಗೆ ನೀನು...
ಸೋಹಂ ಸೋಹಂ ಅನ್ಲಿಕತ್ತೀನಿ...
ಅನ್ಕೋತ ಅನ್ಕೋತ ಕಾಯ್ಲಿಕತ್ತೀನಿ...
ಕಾದು ಕಾದು ಹಣ್ಣಾಗ್ಲಿಕತ್ತೀನಿ
ಕೇಳಸ್ಕೊ ಒಂದೀಟು ನನ್ಮಾತ್ನ
ಸೆಳೀ ನಿನ್ನಡೀಕೆ ನನ್ನನ್ನ
ತಯಾರಿ ಮಾಡ್ಕೋತ ಕುಂತಿವ್ನಿ ನಾ
ಹಾಂ....
ತಯಾರಿ ಮಾಡ್ಕೋತ ಕಾಯ್ತಿವ್ನಿ ನಾ

***

ಭಾಗ 2

ಶಿಶಿರ ವಸಂತ

– ಪೂರ್ಣಿಮ ಭಗವಾನ್

ಇಲ್ಲಿಯವರೆಗೆ –

ಬ್ಯಾಂಕಿನಿಂದ ಏರ್ಪಡಿಸಿದ್ದ ಒಂದು ದಿನದ ಪ್ರವಾಸದಲ್ಲಿ ಮಂಗಳ ಮತ್ತು ಮಂಗಳೆಯ ತಮ್ಮ ವಸಂತನ ಆಪ್ತ ಗೆಳೆಯ ಮೂರ್ತಿ ಬಹಳ ಅಪರೂಪಕ್ಕೆ ಭೇಟಿಯಾಗಿದ್ದರು. ಉಭಯಕುಶಲೋಪರಿಯ ನಂತರ ಮೂರ್ತಿ ವಸಂತ ವಾಸವಾಗಿದ್ದ ಮನೆ ಅವನ ತಂದೆಯವರ ಸ್ವಯಾರ್ಜಿತ ಆಗಿದ್ದು ಅದರ ವಿಲೇವಾರಿಯ ಬಗ್ಗೆ ತಂದೆಯವರ ಮನಸ್ಸಿನಲ್ಲಿ ಏನಿದೆ ಎಂಬುದನ್ನು ತಿಳಿದುಕೊಳ್ಳುವಂತೆ ಹೇಳಿದನು. ಮಂಗಳಾ ಹಾಗೆ ಕೇಳುವುದರಿಂದ ತಂದೆಯವರ ಮನಸ್ಸಿಗೆ ನೋವಾಗಬಹುದು, ಅವರಿಷ್ಟದಂತೆ ಮಾಡಲಿ, ತನಗೆ ಆ ವಿಷಯದಲ್ಲಿ ಆಸಕ್ತಿ ಇಲ್ಲ ಎಂದು ಹೇಳಿದ್ದಳು.

ಮುಂದಕ್ಕೆ –

ಮಂಗಳೆಯ ಮನಸ್ಸು ಅಲ್ಲೋಲ ಕಲ್ಲೋಲವಾಗಿ ನಿಂತಲ್ಲಿ ನಿಲ್ಲಲೂ ಆಗದೆ ಕುಳಿತಲ್ಲೇ ಕೂರಲೂ ಆಗದೆ ಚಡಪಡಿಸುತ್ತಾ ಇದ್ದಳು. ಮೂರ್ತಿಯ ಮಾತಿನಲ್ಲಿ ಗೆಳೆಯ ವಸಂತನ ಭವಿಷ್ಯದ ಬಗೆಗಿನ ಕಾಳಜಿಯ ಹೊರತಾಗಿ ಬೇರೆ ಯಾವ ಸ್ವಾರ್ಥ ಲವಲೇಶವೂ ಇರಲಿಲ್ಲ. ಆರೋಗ್ಯ ಚೆನ್ನಾಗಿ ಇದ್ದರೆ ಹೇಗಾದರೂ ದುಡಿದು ತಿನ್ನಬಹುದು. ಆರೋಗ್ಯವೇ ಕೈಕೊಟ್ಟರೆ ಇಂದಿನ ವೈದ್ಯಕೀಯ ವ್ಯವಸ್ಥೆಯಲ್ಲಿ ಲಕ್ಷಾಂತರ ರೂಪಾಯಿಗಳು ಕೈಬಿಟ್ಟು ಹೋಗುತ್ತದೆ. ಆರೋಗ್ಯದ ಜೀವವಿಮೆ ಮಾಡಿಸಿದ್ದರೂ ಸಹ ಕೆಲವೊಮ್ಮೆ ಅದು ಯಾವ ಖರ್ಚಿಗೂ ಸಾಲುವುದಿಲ್ಲ. ಹಾಗಿರುವಾಗ ತಾನು ಮಾತನಾಡುವ ಮೊದಲು ಯೋಚಿಸಬೇಕಾಗಿತ್ತು ಎಂದೆನಿಸಿತು.

ಮಂಗಳೆಯ ಮನಸ್ಸು ಬಾಲ್ಯದ ಕಡೆಗೆ ಜಾರಿತು. ಹಿರಿಯ ಮಗಳಾದ ಅವಳನ್ನು ಮುದ್ದಿನಿಂದ ಬೆಳೆಸಿದ್ದರು. ತನಗಿಂತಲೂ ನಾಲ್ಕು ವರ್ಷ ಕಿರಿಯನಾದ ವಸಂತನನ್ನು ಅವಳು ಬಹಳ ಇಷ್ಟಪಡುತ್ತಿದ್ದಳು. ಮನೆಯವರು ಗಂಡು ಹೆಣ್ಣೆಂದು ಯಾವುದೇ ಬೇಧಭಾವ ಮಾಡುತ್ತಿರಲಿಲ್ಲ. ಪರಿಚಯದವರು ವಸಂತ ಗಂಡು ಮಗುವಾಗಿದ್ದರಿಂದ ಜವಾಬ್ದಾರಿ ಖರ್ಚು ಎಲ್ಲವೂ ಕಡಿಮೆಯಾಗುತ್ತದೆ ಎಂದು ಮಂಗಳೆಯ ತಾಯಿಯ ಬಳಿ ಹೇಳಿದರೆ ಮಂಗಳಾ ಏನೂ ಅರ್ಥವಾಗದೆ ಪಿಳಿಪಿಳಿ ಕಣ್ಣು ಬಿಡುತ್ತಾ ನೋಡುತ್ತಾ ನಿಂತಿರುತ್ತಿದ್ದಳು. ಅವರ ಕಾಲಿನ ಮೇಲೆ ಅವರು ನಿಂತರೆ ಸಾಕು ಎನ್ನುವ ಹಿರಿಯರ ಸಂಭಾಷಣೆ ಕೇಳಿದಾಗ ಈಗಲೂ ನಾವು ನಿಂತಿರುವುದು ನಮ್ಮ ಕಾಲಿನ ಮೇಲೇ ಅಲ್ವಾ, ನಾವೇನು ಬೇರೆಯವರ ಕಾಲಿನ ಮೇಲೆ ನಿಂತಿದ್ದೇವಾ, ಈ ದೊಡ್ಡವರು ಅನ್ನಿಸಿಕೊಂಡವರು ಇದ್ಯಾಕೆ ಹೀಗೆ ಮಾತಾಡ್ತಾರೆ ಎನ್ನುವ ಹಲವು ಪ್ರಶ್ನೆಗಳು ಮುಟ್ಟ ಮಂಗಳೆಯ ಹೃದಯದಲ್ಲಿ. ಯಾರನ್ನಾದರೂ ಕೇಳಿ ತಿಳಿದುಕೊಳ್ಳೋಣ ಎಂದುಕೊಂಡರೆ ಗೆಳೆಯ ಗೆಳತಿಯರಿಗೂ ಗೊತ್ತಿರುವುದಿಲ್ಲ. ತಾನೇ ಅವರೆಲ್ಲರಿಗಿಂತಲೂ ಬುದ್ಧಿವಂತೆ ಎಂದು ಎಲ್ಲರೂ ಮಾತನಾಡಿಕೊಳ್ಳುತ್ತಾ ಇರುತ್ತಾರೆ. ಮತ್ತೆ ದೊಡ್ಡವರನ್ನೇ ಕೇಳಬೇಕು, ಹೋಗಲಿ ಬಿಡು, ಇದನ್ನು ತಿಳಿದುಕೊಂಡು ಏನಾಗಬೇಕು, ತಿಳಿದುಕೊಳ್ಳುವುದಕ್ಕೆ ಬೇಕಾದಷ್ಟು ವಿಷಯ, ಸಮಯ ಎರಡೂ ಇದೆಯಲ್ಲ. ಬೆಳೆದು ದೊಡ್ಡವಳಾಗುತ್ತಾ ಇದ್ದಂತೆ ಮುಂದೆ ತಾನಾಗಿಯೇ ಸ್ವಲ್ಪ ಸ್ವಲ್ಪ ಗೊತ್ತಾಗುತ್ತದೆ ಎಂದು ತನ್ನನ್ನು ತಾನೇ ಸಮಾಧಾನ ಮಾಡಿಕೊಳ್ಳುತ್ತಿದ್ದಳು ಮಂಗಳ.

ವ್ಯಾಪಾರಸ್ಥರಾದ ಮಂಗಳೆಯ ತಂದೆ ಯಾವ ವಿಷಯಕ್ಕೂ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ತಾವಾಯಿತು ತಮ್ಮ ಕೆಲಸವಾಯಿತು ಎಂಬಂತೆ ಇರುತ್ತಿದ್ದರು. ನಗರದಲ್ಲಿ ಚಿಕ್ಕದೊಂದು ಅಂಗಡಿಯನ್ನು ಇರಿಸಿಕೊಂಡಿದ್ದರು. ತಕ್ಕಮಟ್ಟಿಗೆ

ವ್ಯಾಪಾರವೇನೋ ಆಗುತ್ತಿತ್ತು. ಅಜ್ಜಿ, ಕಾಲೇಜು ವಿದ್ಯಾಭ್ಯಾಸ ಮಾಡುತ್ತಿದ್ದ ಇಬ್ಬರು ತಮ್ಮಂದಿರು, ತಂಗಿ ಎಲ್ಲರೂ ಅವರ ಮನೆಯಲ್ಲಿಯೇ ಇದ್ದು ಮನೆ ಖರ್ಚನ್ನು ತೂಗಿಸಲು ಸ್ವಲ್ಪ ಹೆಣಗಾಡಬೇಕಿತ್ತು. ಜೊತೆಗೆ ಅಂಗಡಿಯಲ್ಲಿ ಸಹಾಯಕ್ಕೆ ಎಂದು ಇನ್ನೊರ್ವ ತಮ್ಮ. ಅಂತೂ ಇಂತೂ ಆದಾಯಕ್ಕಿಂತ ಹೆಚ್ಚಿನ ವೆಚ್ಚ ತೂಗಿಸಿಕೊಂಡು ಹೇಗೋ ಸಂಸಾರ ನಿರ್ವಹಣೆ ಮಾಡುತ್ತಿದ್ದರು. ಆದಾಯ ಸೋರಿಕೆಯು ಮನೆಯೊಳಗಿನ ಹಿತಶತ್ರುಗಳಿಂದಲೇ ಆಗುತ್ತಿದೆ ಎಂದು ತಿಳಿದಿದ್ದರೂ ಸಹ ಧೈರ್ಯದಿಂದ ಹೇಳಲು ಅಸಮರ್ಥರಾಗಿದ್ದರು. ಹೋದರೆ ಹೋಗಲಿ ಎನ್ನುವ ನಿರುಮ್ಮಳ ಸ್ವಭಾವ. ನಂತರದ ದಿನಗಳಲ್ಲಿ ತಮ್ಮ ಮಕ್ಕಳನ್ನು ಬೆಳೆಸುವ ಸಮಯದಲ್ಲಿ ಅಂಗಡಿಯನ್ನು ಮುಚ್ಚಿ ಬೇರೊಬ್ಬರ ಅಂಗಡಿಯಲ್ಲಿ ದುಡಿಯುವ ಪರಿಸ್ಥಿತಿ ನಿರ್ಮಾಣ ಆಗಿತ್ತು. ಬೇಲಿಯೇ ಎದ್ದು ಹೊಲ ಮೇಯುತ್ತಿದ್ದರೆ ಬೆಳೆಗೆ ಉಳಿಗಾಲ ಇದೆಯೇ ಎನ್ನುವಂತೆ.

ಮಗಳು ಚಿತ್ರಾಳ ಮನೆಯ ಆರ್ಥಿಕ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಾ ಇದ್ದ ಮಂಗಳಾಳ ತಾತ ನಮ್ಮೂರಿಗೆ ವಸಂತನನ್ನು ಕೆಲಕಾಲ ಕಳುಹಿಸಿಕೊಡಿ. ಅಲ್ಲಿಯೇ ವಿದ್ಯಾಭ್ಯಾಸ ಮುಂದುವರೆಸಲಿ. ವಸಂತನಿಗೆ ಸ್ವಲ್ಪ ವ್ಯವಹಾರ ಜ್ಞಾನ ಬೆಳೆಯುತ್ತದೆ ಇಲ್ಲದಿದ್ದರೆ ಬರೇ ಆಟದ ಕಡೆ ಗಮನ ಹೋಗುತ್ತದೆ, ಎಂದು ಹೇಳಿ ವಸಂತನನ್ನು ತಮ್ಮ ಮನೆಗೆ ಕಳುಹಿಸುವಂತೆ ಮಂಗಳೆಯ ತಾಯಿ ತಂದೆಯನ್ನು ಒಪ್ಪಿಸಿ ವಸಂತನನ್ನು ತಮ್ಮೂರಿಗೆ ಕರೆದುಕೊಂಡು ಹೋದರು. ವಸಂತ ಆಗಿನ್ನೂ ಬಹಳ ಚಿಕ್ಕವನು. ಅಲ್ಲಿಯೇ ವಿದ್ಯಾಭ್ಯಾಸ ಮುಂದುವರೆಸಿದನು. ಬಿಡುವಿನ ಸಮಯದಲ್ಲಿ ಅಂಗಡಿಯಲ್ಲಿ ಕುಳಿತು ವ್ಯಾಪಾರ ಗಮನಿಸುತ್ತಿದ್ದನು. ತಾತನ ಮನೆಯ ಶ್ರೀಮಂತಿಕೆಯ ಪ್ರಭಾವ ಪುಟ್ಟ ವಸಂತನ ಮನಸ್ಸಿನ ಮೇಲೆ ಅಗಾಧವಾದ ಪರಿಣಾಮ ಬೀರಿತ್ತು. ಮಂಗಳ ಮತ್ತು ಇತರ ಸಹೋದರರು ಒಂದು ತರಹ ಇದ್ದರೆ ವಸಂತನ ಸ್ವಭಾವ ಸ್ವಲ್ಪ ಭಿನ್ನವಾಗಿತ್ತು. ಮಾತುಗಾರಿಕೆ, ಯೋಚನಾ ಲಹರಿ, ಇತರರೊಂದಿಗೆ ವ್ಯವಹರಿಸುವ ರೀತಿ ಎಲ್ಲವೂ. ಎಲ್ಲರೂ ಓದಿನಲ್ಲಿ ಜಾಣರು. ತರಗತಿಯಲ್ಲಿ ಮೊದಲಿಗರಾಗಿದ್ದರು. ಒಂದೆರಡು ವರ್ಷಗಳ ಕಾಲ ಊರಿನಲ್ಲಿ ಓದಿದ ನಂತರ ಹೈಸ್ಕೂಲು ವಿದ್ಯಾಭ್ಯಾಸಕ್ಕೆಂದು ವಸಂತ ತನ್ನೂರಿಗೆ ಮರಳಿ ಬಂದನು.

ವಸಂತ ಹೈಸ್ಕೂಲಿಗೆ ಸೇರಿದನು. ವಸಂತನ ಶಾಲೆ ಮನೆಯಿಂದ ಸ್ವಲ್ಪ ದೂರವೇ ಇತ್ತು. ಆಗೆಲ್ಲಾ ಆಟೋ, ಶಾಲೆಯ ಬಸ್ಸು, ವ್ಯಾನ್‌ಗಳು ಇರಲಿಲ್ಲ. ನಡೆದುಕೊಂಡು ಹೋಗಲು ದೂರ. ಹಾಗಾಗಿ ವಸಂತನಿಗೆ ಶಾಲೆಗೆ ಹೋಗಿ ಬರಲು ಸೈಕಲ್ ಕೊಡಿಸಿದ್ದರು. ವಯೋಸಹಜವಾಗಿ ಮಂಗಳೆಗೂ ಸೈಕಲ್ ಕಲಿಯುವ ಆಸೆ, ಆಸಕ್ತಿ ಎರಡೂ ಇತ್ತು. ಆದರೆ ಹುಡುಗರ ಸೈಕಲ್ ಅನ್ನು ಉದ್ದ ಲಂಗ ಹಾಕಿಕೊಂಡು ಓಡಿಸಲು ಆಗುತ್ತಿರಲಿಲ್ಲ. ಹುಡುಗಿಯರು ಚೂಡಿದಾರ್, ಪ್ಯಾಂಟ್ ಧರಿಸುತ್ತಾ ಇದ್ದುದು ಬಹಳ ಅಪರೂಪ. ಎಲ್ಲೋ ಕೆಲವು ಶ್ರೀಮಂತರು, ಸ್ವಲ್ಪ ಮುಂದುವರೆದ ಆಲೋಚನಾ ಲಹರಿ ಉಳ್ಳವರ ಮನೆಯ ಹೆಣ್ಣು ಮಕ್ಕಳಿಗೆ ವಾಹನ ಕಲಿಯಲು, ಹೊಸ ವಿನ್ಯಾಸದ ಉಡುಪುಗಳನ್ನು ಧರಿಸಲು ಸ್ವಾತಂತ್ರ್ಯ ಇತ್ತು. ಜೊತೆ ಜೊತೆಗೆ ಹೆಣ್ಣು ಮಕ್ಕಳಿಗೇಕೆ ಸೈಕಲ್ ಸವಾರಿ. ಅವರು ಕಲಿತರೆಷ್ಟು, ಬಿಟ್ಟರೆಷ್ಟು. ಹೆಣ್ಣು ಮಕ್ಕಳು ಸೈಕಲ್ ಕಲಿಯುವುದು ಬೇಡ. ಹೇಗಿದ್ದರೂ ಮದುವೆ ಮಾಡಿ ಕಳುಹಿಸಿದರೆ ಆಯಿತು ಎನ್ನುವ ಮನೆಯವರ ಧೋರಣೆ.

ಮಂಗಳಾ ಆಗಲೇ ನಿರ್ಧರಿಸಿದ್ದು ತಾನು ಚೆನ್ನಾಗಿ ಓದಿ ಕೆಲಸಕ್ಕೆ ಸೇರಿ ಮನೆಗೆ ಆರ್ಥಿಕವಾಗಿ ಸಹಾಯ ಮಾಡಬೇಕು, ಸ್ವಾವಲಂಬಿಯಾಗಿ ಜೀವನ ನಡೆಸಬೇಕು, ಹೆಣ್ಣು ಗಂಡು ಎನ್ನುವ ಭೇದ ಭಾವಕ್ಕೆ ಸೊಪ್ಪು ಹಾಕಬಾರದು ಎಂದು. ಅವಳು ಯಾವುದಕ್ಕೂ ಹೆಚ್ಚು ಆಸೆ ಪಡದೆ ಸರಳತೆಯನ್ನು ಮೆಚ್ಚಿ, ಅಪ್ಪಿ ಅದರಲ್ಲೇ ಅಧಿಕ ಸಂತೋಷವನ್ನು

ಕಾಣುತ್ತಿದ್ದಳು. ಹೆಚ್ಚು ಹಣ ವೆಚ್ಚವಾಗುವ ಅದ್ದೂರಿ ಆಡಂಬರದ ಕಾರ್ಯಕ್ರಮಗಳಿಗೆ ಅವಳ ಸಹಮತ ಇರಲಿಲ್ಲ. ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು ಎನ್ನುವ ನಿಲುವು ಅವಳದ್ದು.

ಲೋಕೋ ಭಿನ್ನ ರುಚಿ: ಎನ್ನುವಂತೆ ಅವರವರ ಅಭಿಪ್ರಾಯ, ನಡೆನುಡಿಗಳು ಅವರಿಗೆ ಸರಿ ಎನ್ನಿಸುತ್ತದೆ. ಮಾವ ಕೊಟ್ಟಿದ್ದು ಮನೆಯವರೆಗೆ, ದೇವರು ಕೊಟ್ಟದ್ದು ಕೊನೆಯವರೆಗೆ ಅನ್ನುವ ನುಡಿಯನ್ನು ಅವರಿವರು ಕೊಟ್ಟಿದ್ದು ಕ್ಷಣಿಕ, ಸ್ವಂತ ದುಡಿಮೆ ಕೊನೆತನಕ ಎಂದು ಮಾರ್ಪಾಡು ಮಾಡಿಕೊಳ್ಳುತ್ತಿದ್ದಳು. ಹಾಗಾಗಿಯೇ ಅವಳು ಇತರರಿಗಿಂತ ಸ್ವಲ್ಪ ಬೇರೆಯೇ ಆಗಿದ್ದಳು. ಮೂರ್ತಿಯ ಮಾತಿಗೆ ಅವಳಗರಿವಿಲ್ಲದೆಯೇ ಅಯಾಚಿತವಾಗಿ ಅವಳು ನುಡಿದಿದ್ದಳು.

ಅಪರೂಪಕ್ಕೊಮ್ಮೆ ಮಂಗಳಾ ತಮ್ಮ ವಸಂತನ ಜೊತೆ ಬೆಳಗಿನ ನಡಿಗೆಯಲ್ಲಿ ಜೊತೆಯಾಗುತ್ತಿದ್ದಳು.

ವ್ಯಾಪಾರ ಹೇಗಿದೆಯೋ ವಸಂತ ಎಂದು ಪ್ರಶ್ನಿಸಿದಳು. ಪರವಾಗಿಲ್ಲ ಎಂದು ಚುಟುಕಾಗಿ ಉತ್ತರಿಸಿದ ವಸಂತ. ಹಾಗೆಯೇ ಲೋಕಾಭಿರಾಮವಾಗಿ ಮಾತನಾಡುತ್ತ ಸಾಗಿದರು. ಏನೋ ವಿಷಯ ಬಂದಾಗ ವಸಂತ ಅಪ್ಪ ತಮ್ಮ ಮನೆಯನ್ನು ತಮಗೆ ಇಷ್ಟವಾದ ರೀತಿಯಲ್ಲಿ ಪರಭಾರೆ ಮಾಡಲಿ. ಅವರಿಗೆ ಏನನ್ನಿಸುತ್ತದೆಯೋ ಹಾಗೆ ಮಾಡಿಕೊಳ್ಳಲಿ ಎಂದನು.

ಕಾಲೇಜಿನಲ್ಲಿ ಓದುತ್ತಿರುವಾಗಲೇ ಅಪ್ಪ ಬೇರೊಬ್ಬರ ಅಂಗಡಿಯಲ್ಲಿ ಕೆಲಸ ಮಾಡುವುದನ್ನು ವಿರೋಧಿಸಿ ಸ್ವಂತವಾಗಿ ಚಿಕ್ಕದೊಂದು ಅಂಗಡಿ ಇಡಲು ಪ್ರೇರೇಪಿಸಿ ಯಶಸ್ವಿಯಾಗಿದ್ದನು. ಅಪ್ಪನ ವ್ಯಾಪಾರದಲ್ಲಿ ಕೈ ಜೋಡಿಸಿ, ನಂತರವೂ ಜೊತೆಯಾಗಿ ಅಂಗಡಿಯನ್ನು ಅಭಿವೃದ್ಧಿ ಮಾಡಿ, ಮನೆ ಕಟ್ಟುವಾಗ ದುಡಿದಿದ್ದ ಎಲ್ಲಾ ಹಣವನ್ನು ಅದರಲ್ಲಿಯೇ ಹೂಡಿದ್ದನು ವಸಂತ. ಮಂಗಳಾಗೆ ತಮ್ಮನ ಸ್ವಭಾವ ಗೊತ್ತಿತ್ತು. ಆದರೂ ಅವನ ಬಾಯಿಂದಲೇ ಬಂದ ಮಾತುಗಳು ವಸಂತನ ಉದಾತ್ತ ವ್ಯಕ್ತಿತ್ವವನ್ನು ಎತ್ತಿ ಹಿಡಿದು ಅದರಲ್ಲಿ ವಸಂತನ ಪತ್ನಿ ಶಿಶಿರಳ ಪಾತ್ರವೂ ಇದೆಯಲ್ಲ ಎಂದು ಅವಳ ಬಗ್ಗೆಯೂ ಮೆಚ್ಚುಗೆ ಮೂಡಿತು. ತನ್ನ ಒಳಮನಸ್ಸಿಗೆ ತಮ್ಮ ವಸಂತನ ಸ್ವಭಾವದ ಪರಿಚಯ ಚೆನ್ನಾಗಿ ಇದ್ದುದರಿಂದಲೇ ತಾನು ವಸಂತನ ಗೆಳೆಯ ಮೂರ್ತಿಯ ಮಾತಿಗೆ ನೀಡಿದ ಉತ್ತರ ಸಮಂಜಸವಾಗಿಯೇ ಇತ್ತು ಎಂದೆನಿಸಿ ನೆಮ್ಮದಿಯ ನಿಟ್ಟುಸಿರು ಬಿಟ್ಟಳು.

***

ವೇಣಿ ದಾನದ ಜೊತೆ ಬಾಗಿನದ ಸಾರ್ಥಕತೆ

– ಅನ್ನಪೂರ್ಣ ಸುಬ್ಬರಾವ್

ಕಾಶಿಗೆ ಹೋಗುವುದು ಬಹುದಿನಗಳ ಬಯಕೆ ಇತ್ತಾದರೂ ಹೋಗುವ ಘಳಿಗೆಯೇ ಕೂಡಿಬಂದಿರಲಿಲ್ಲ. ನನ್ನವರಿನ್ನೂ ಸರ್ಕಾರಿ ಸೇವೆಯಲ್ಲಿದ್ದುದರಿಂದ ರಜಾ ಸಿಗುವುದು ಕಷ್ಟವಾಗಿತ್ತು. ಮನೆಕಡೆ ಜವಾಬ್ಧಾರಿಯೂ ಕಟ್ಟಿ ಹಾಕಿತ್ತು. ಕೊನೆಗೂ ಒಂದು ವಾರ ರಜಾ ಹಾಕಿ, ಹೋಗುವುದೆಂಬ ತೀರ್ಮಾನಕ್ಕೆ ಬಂದೇಬಿಟ್ವಿ.

ನಾನು, ಯಜಮಾನ್ರು, ತಂಗಿ, ತಂಗಿ ಯಜಮಾನ್ರು ನಾಲ್ಕೂ ಜನ ಹೊರಟ್ವಿ. ತಂಗಿ ಯಜಮಾನ್ರಿಗೆ ಕಾಶಿಯಲ್ಲಿ ಸ್ನೇಹಿತರೊಬ್ಬರು ಇದ್ದ ಕಾರಣ ಅಲ್ಲಿನ ವ್ಯವಸ್ಥೆಗೇನು ಕಷ್ಟ ಆಗ್ಲಿಲ್ಲ. ಎರಡು ದಿನ ಕಾಶಿಯಲ್ಲಿ ಸುತ್ತಿ, ವಿಶ್ವನಾಥ, ವಿಶಾಲಾಕ್ಷಿಯರ ದರ್ಶನ ಪಡೆದು ಗಯಾದಲ್ಲಿ ವಿಶೇಷವಾಗಿ ಪಿತೃಕಾರ್ಯ ಮುಗಿಸಿಕೊಂಡು ಅಲಹಾಬಾದ್‌ನಲ್ಲಿ ತ್ರಿವೇಣಿ ಸಂಗಮಕ್ಕೆ ಭೇಟಿಕೊಟ್ಟೆವು. ನದೀ ತೀರದಲ್ಲಿ ಅಲ್ಲಲ್ಲಿ ದಂಪತಿಗಳನ್ನು ಕೂಡಿಸಿ ಮಾಡಿಸುತ್ತಿದ್ದ ವಿಶಿಷ್ಠ ಆಚರಣೆ ನನ್ನ ಗಮನ ಸೆಳೆಯಿತು. ಎಲ್ಲಿಯೂ ಕೇಳಿಲ್ಲ, ಕಂಡಿಲ್ಲ. ಕುತೂಹಲ ತಡೆಯದೆ ಅವರಲ್ಲಿ ಕೇಳಿದೆ, ಇದು ಎಂಥ ಪೂಜೆ, ಇದರ ವಿಶೇಷ ಏನು ಎಂದು. ನನ್ನ ಕುತೂಹಲ ಕಂಡು, ಪುರೋಹಿತರು ಇದಕ್ಕೆ "ವೇಣಿದಾನ" ಅಂತಾರೆ. ಇಲ್ಲಿ ವೇಣಿದಾನ ಬಹಳ ಶ್ರೇಷ್ಠವಾದುದು. ಇಲ್ಲಿಗೆ ಬಂದ ದಂಪತಿಗಳು ಈ ಆಚರಣೆಯಲ್ಲಿ ಪಾಲ್ಗೊಂಡರೆ ಪತಿಗೆ ಆರೋಗ್ಯ, ದೀರ್ಘಾಯುಷ್ಯ ದೊರೆಯುವುದು ಎನ್ನುವ ಪ್ರತೀತಿ. ಇದು ಒಂದು ಧರ್ಮಾಚರಣೆ. ಯಾರಿಗೂ ಬಲವಂತ ಇಲ್ಲ. ಸಾಮಾನ್ಯವಾಗಿ ಯಾರೂ ನಿರಾಕರಿಸುವುದೂ ಇಲ್ಲ ಎಂದು ಆದರ ವಿವರಣೆ ಕೊಟ್ಟರು. ವೇಣಿದಾನ ಅಂದಕೂಡಲೇ ನನ್ನ ಮನಸಿಗೂ ಏನೋ ಖುಷಿ ಅನ್ನಿಸಿತು. ನಾವೂ ಮಾಡಬೇಕೆಂಬ ಬಯಕೆ ಸಹಜವಾಗಿ ಮೂಡಿ ನನ್ನವರ ಕಡೆ ನೋಡಿದೆ. ನಿನ್ನಾಸೆಗೆ ಅಡ್ಡಿ ಬರಲ್ಲ, ಮುಂದುವರಿಸು ಅಂದ್ರು. ನಮಗೂ ಅದರ ವಿಧಿವಿಧಾನ ಮಾಡಿಸಲು ಕೇಳಿಕೊಂಡೆ.

ಇಬ್ಬರು ದಂಪತಿಗಳನ್ನು ಎದುರುಬದುರು ಕೂಡಿಸಿ, ಕೊರಳಿಗೆ ಚೆಂಡು ಹೂವಿನ ಹಾರ ಹಾಕಿ, ಹಣೆಗೆ ತಿಲಕ ಇಟ್ಟು, ಮದುವೆ ಕ್ರಮದಂತೆ ಕಂಕಣ ಕಟ್ಟಿಸಿ, ಅರಿಶಿನ ಕುಂಕುಮ ಹೂಗಳಿಂದ ಗಂಗೆಗೆ ಪೂಜೆ ಸಲ್ಲಿಸಿ, ಪುರೋಹಿತರು ಹೇಳಿದಂತೆ ನನ್ನನ್ನು ಇವರ ತೊಡೆಯ ಮೇಲೆ ಕೂಡಿಸಿಕೊಂಡು ತಲೆಬಾಚಿ ಜಡೆ ಹಾಕಿದರು. ನಂತರದ ಕೆಲವು ಪೂಜಾ ವಿಧಿಗಳನ್ನು ಮಾಡಿದ ಮೇಲೆ ಜಡೆಯ ತುದಿಯ ಕೂದಲನ್ನು ಕತ್ತರಿಸಿ, ಒಂದು ಎಲೆಯ ಮೇಲೆ ಹಾಕಿದರು. ಅವರಿಗೆ ದಕ್ಷಿಣೆ ಕೊಟ್ಟು, ಆ ಎಲೆಯನ್ನು ಹಾಗೂ ನಾವು ಸಿದ್ಧಪಡಿಸಿಕೊಂಡು ಹೋಗಿದ್ದ ಮೊರದ ಬಾಗಿನವನ್ನು ತೆಗೆದುಕೊಂಡು ದೋಣಿಯಲಿ ಕೂತು, ನದಿಯ ಮದ್ಯೆ ಸಂಗಮದ ಬಳಿ ಆ ಎಲೆಯನ್ನೂ, ಬಾಗಿನವನ್ನೂ ಗಂಗೆಯ ಮಡಿಲಿಗೆ ಅರ್ಪಿಸಿ, ಸಂಗಮದಲ್ಲಿ ಸ್ನಾನಮಾಡಿ, ದೋಣಿಯಲ್ಲೆ ಬಟ್ಟೆ ಬದಲಿಸಿಕೊಂಡು, ಸ್ನಾನಮಾಡಿದ ಒದ್ದೆ ಬಟ್ಟೆಯನ್ನು ನೀರಲ್ಲೇ ಬಿಟ್ಟುಬರುವುದು ಕೂಡ ಒಂದು ಪದ್ಧತಿಯೆಂಬ ಅವರ ಸೂಚನೆಯಂತೆ ನಾವೂ ಹಾಗೇ ಮಾಡಿದೆವು.

ನನಗಂತೂ ಇದು ಹೊಸ ಅನುಭವ. ಗಂಡನ ತೊಡೆಯ ಮೇಲೆ ಕೂತು ಅವರು ನಯವಾಗಿ ಜಡೆ ಹೆಣೆದದ್ದು ಒಳಗೊಳಗೇ ಏನೋ ಒಂದು ನವಿರಾದ ಭಾವ, ಜೊತೆಗೆ ಗಂಡನಿಗೆ ಆರೋಗ್ಯ. ಆಯುಷ್ಯ ವೃದ್ಧಿಯಾಗುತ್ತೆ ಅಂದರೆ ಯಾವ ಹೆಣ್ಣು ನಿರಾಕರಿಸುತ್ತಾಳೆ..? ಅವರ ಏಳಿಗೆ ಬಯಸುವ ಹೆಣ್ಣು ಎಂಥ ಆಚರಣೆಗೂ ತಯಾರಾಗುತ್ತಾಳೆ. ಅದನ್ನೇ ನಾನೂ ಮಾಡಿದೆ.

ಯಾತ್ರೆ ಮುಗಿಸಿ ಹಗುರಾದ ಮನಸ್ಸಿನಿಂದ ಊರಿನ ಕಡೆಗೆ ರೈಲು ಹತ್ತಿದೆವು. ನಮ್ಮಂತೆ ಯಾತ್ರೆ ಮುಗಿಸಿ ಬಂದಿದ್ದವರೆಲ್ಲ ಮತ್ತೆ ಆದರ ನೆನಪುಗಳನ್ನು ಮೆಲುಕುಹಾಕುತ್ತ, ವೇಣಿದಾನದ ಬಗ್ಗೆ ಮಾತು ಬಂತು. ಕೆಲವರು ಇದನ್ನು ತಪ್ಪು ಎಂದು ವಿರೋಧ ಮಾಡಿ ಬಂದದ್ದೂ ಉಂಟು. ನಮ್ಮ ಸಂಪ್ರದಾಯದಲ್ಲಿ ಹೆಣ್ಣು ಮಕ್ಕಳಿಗೆ ಮುಡಿ ಕೊಡುವ ಪದ್ಧತಿಯೂ ಇಲ್ಲದಿರುವಾಗ ಮಡದಿಯ ತಲೆಕೂದಲನ್ನು ಗಂಡನೇ ಕತ್ತರಿಸುವುದು ಯಾವ ಸಂಪ್ರದಾಯ? ಸ್ನಾನ ಮಾಡಿ ಮೈ ಮೇಲಿನ ಬಟ್ಟೆಗಳನ್ನು ನೀರಲ್ಲೇ ಬಿಟ್ಟು ಬಿಡುವುದಂತೆ. ಇದೂ ಅನಿಷ್ಠ ಪದ್ಧತಿ ಅಲ್ಲವೇ? ಜನ ಮರುಳೋ ಜಾತ್ರೆ ಮರುಳೋ ಅಂತ ನಮ್ಮ ಜನಕ್ಕೆ ಯಾವಾಗ ಬುದ್ಧಿ ಬರುತ್ತೋ ಎಂದು ಮೂಗು ಮುರಿದವರ ಗುಂಪು ಒಂದಾದರೆ..

ನಾವು ಕ್ಷೇತ್ರ ದರ್ಶನ ಮಾಡುವುದು ಯಾಕೆ? ಮನಸಿನ ನೆಮ್ಮದಿ, ಶಾಂತಿಗೆ. ನಾವು ಗೊತ್ತಿದ್ದೋ ಗೊತ್ತಿಲ್ಲದೆಯೋ ಮಾಡಿದ ತಪ್ಪು, ಪಾಪಗಳನ್ನು ಕಳೆದುಕೊಂಡು ಇನ್ನಾದರೂ ನಮಗೂ ನಮ್ಮ ಕುಟುಂಬಕ್ಕೂ ಒಳ್ಳೆಯದಾಗಲಿ ಎಂದು ಬೇಡಿಕೊಳ್ಳಲು, ಮಕ್ಕಳಲ್ಲಿ ಅನಾರೋಗ್ಯ ಸಮಸ್ಯೆ ಬಂದಾಗ, ದೇವ್ರೆ, ಮಗು ಬೇಗ ಹುಷಾರಾದ್ರೆ ನಿನಗೆ ಮುಡಿ ಕೊಡಿಸುತ್ತೇನೆ ಎಂದು ಹರಕೆ ಕಟ್ಟಿಕೊಳ್ಳುತ್ತೇವೆ. ಅದರಂತೆ ಮುಡಿ ಕೊಡುವುದಿಲ್ಲವೆ..? ಆಯಾ ಕ್ಷೇತ್ರಕ್ಕೆ ಬಂದಾಗ ಅಲ್ಲಿನ ನಂಬಿಕೆಯನ್ನು ಪಾಲಿಸುವುದು ನಮ್ಮ ಕರ್ತವ್ಯ ಕೂಡ. ನಂಬಿಕೆ ಇಲ್ಲದಿದ್ದವರು ಕ್ಷೇತ್ರಕ್ಕೆ ಭೇಟಿ ಕೊಡುವುದರಲ್ಲಿ ಏನರ್ಥ? ನಿಮಗೆ ಇಷ್ಟ ಇಲ್ಲದಿದ್ದರೆ ಇನ್ನೊಬ್ಬರ ನಂಬಿಕೆಯನ್ನು ಅಲ್ಲಗಳೆಯುವುದು ಸರಿಯಲ್ಲ. ಅವರವರ ನಂಬಿಕೆ ಅವರಿಗೆ.. ಬಿಟ್ಟುಬಿಡಿ.! ಎಂದು ವಾದಿಸಿದವರ ಗುಂಪು ಇನ್ನೊಂದು ಕಡೆ.

ಇದನ್ನೆಲ್ಲ ಕೇಳುತ್ತಿದ್ದ ನನಗೂ ಒಂದು ಕ್ಷಣ ಅನ್ನಿಸಿತು. ಅವರವರ ಪ್ರಕಾರ ಎರಡೂ ವಾದಗಳೂ ಸರಿಯೇ. . ಹಾಗಂತ ಎರಡು ದೋಣಿಯಲ್ಲಿ ಕಾಲಿಟ್ಟು ನಡೆಯಲು ಸಾಧ್ಯವೇ? ಯಾವುದಾದರೊಂದನ್ನು ನಂಬಲೇಬೇಕು. ನನಗೆ ಇದರಲ್ಲಿ ನಂಬಿಕೆ ಇದ್ದದ್ದರಿಂದ ನಾನು ಕೂಡ ಹಾಗೇ ನಡೆದುಕೊಂಡೆ..!

ಕೇವಲ ವೇಣಿ (ಕೂದಲು) ದಾನ ಮಾಡುವುದರಿಂದ ಇದೆಲ್ಲ ಸಾಧ್ಯವಾ ಅನ್ನುವವರಿಗೆ, ಈ ಕ್ಷೇತ್ರದಲ್ಲಿ ಗಂಗೆಯ ಸಾನ್ನಿಧ್ಯದಲ್ಲಿ ಧರ್ಮಾಚರಣೆ ಮಾಡುವುದರಿಂದ ಎಲ್ಲವೂ ಸಾಧ್ಯ ಯಾಕಾಗಬಾರದು ಅನ್ನುತ್ತದೆ ನನ್ನ ಮನಸು.. ಇದು ನನ್ನ ನಂಬಿಕೆಯೂ ಹೌದು.

ಯಾರ ನಂಬಿಕೆಯನ್ನೂ ಯಾರೂ ಅಲ್ಲಗಳೆಯುವುದು ಸರಿಯಲ್ಲ. ಅವರವರ ನಂಬಿಕೆ ಅವರಿಗೆ. ಪ್ರತಿಯೊಂದು ಕ್ಷೇತ್ರದಲ್ಲೂ ಅದರದ್ದೇ ಆದ ಆಚರಣೆ, ನಂಬಿಕೆ ಇರುವುದನ್ನು ಸಾಮಾನ್ಯವಾಗಿ ಕೇಳಿರುತ್ತೇವೆ.

ಇದಕ್ಕಿಂತ ಮುಖ್ಯವಾಗಿ ನಾವು ತಿಳಿದ ಅಂಶ ಅಂದರೆ ನಾವು ಗಂಗೆಗೆ ಬಾಗಿನ ಅರ್ಪಿಸಿದ ಕೂಡಲೇ ಅಲ್ಲಿ ದೋಣಿ ನಡೆಸುವವರು ಅದನ್ನು ತೆಗೆದುಕೊಂಡು ಹೋಗಿ ಅದರಲ್ಲಿರುವ ಪದಾರ್ಥಗಳಿಂದ ಒಂದು ದಿನದ ಅವರ ಹೊಟ್ಟೆಪಾಡು ನೀಗುತ್ತದೆ, ನಾವು ಬಿಟ್ಟು ಬಂದ ಒದ್ದೆ ಬಟ್ಟೆಗಳು ಅವರ ಮನೆಯವರ ಮೈ ಮುಚ್ಚುತ್ತವೆ ಎನ್ನುವುದನ್ನು ಅವರ ಬಾಯಿಂದಲೇ ಕೇಳಿದಾಗ ನನಗೆ ಈ ಆಚರಣೆಯಲ್ಲೂ ಒಂದು ಸಾರ್ಥಕತೆ ಇದೆ ಅನ್ನಿಸಿದ್ದಂತೂ ಸತ್ಯ. ಅಷ್ಟೇ ಸಮಾಧಾನದ ಸಂಗತಿ ಕೂಡ..!!

***

ಯತ್ನ-ವಿಫಲತೆ – ಲೇಖನ ಮಾಲೆ-2

ಫ್ಯಾಷನ್ ಸೆನ್ಸ್

– ಮಾಧುರಿ ಕೃಷ್ಣ

ಹೊರಗೆ ಕಾರು ಬಂದು ನಿಂತ ಶಬ್ದವಾಗುತ್ತಲೇ ಅಷ್ಟೊತ್ತಿಂದ ಕೂತಲ್ಲಿ ಕೂರಲಾಗದೇ ತವಕದಿಂದ ಕಾಯುತ್ತಲೇ ಇದ್ದ ನಾನು ಸ್ಟೌವ್ ಆಫ್ ಮಾಡಿ ಓಡೋಡಿ ಬಂದು ಬಾಗಿಲು ತೆಗೆದೆ. ಯಜಮಾನರು ಒಂದು ಗೇಟ್ ಆಗಲೇ ತೆರೆದು ಇನ್ನೊಂದನ್ನು ತಳ್ಳುತ್ತಾ ಇದ್ದರು. ಕಾರಿನ ಹಿಂದಿನ ಸೀಟಿನಲ್ಲಿದ್ದ ತಮ್ಮ ಮತ್ತು ಅವನ ಮಗ ಹಾಗೇ ಕುಳಿತು ಏನೋ ಬಿಸಿ ಚರ್ಚೆಯಲ್ಲಿದಂತೆ ಕಾಣಿಸಿತು. ನನಗೋ ತಡೆಯಲಾಗದ ಕುತೂಹಲ! ಯಜಮಾನರನ್ನು ನೋಡುತ್ತ, "ಏನು? ಹಣ್ಣೋ ಕಾಯಿಯೋ?" ಎಂದು ಕೇಳಿದೆ.

ಯಜಮಾನರು ತಲೆ ಕೊಡವುತ್ತ, "ಏನೋ ಗೊತ್ತಿಲ್ಲ ಮಾರಾಯ್ತಿ. ನೀನೇ ಕೇಳು!" ಎಂದು ತೆರೆದಿಟ್ಟ ಬಾಗಿಲೊಳಗೆ ಹೋಗಿ ಅದೃಶ್ಯರಾದರು. ನಾನೋ ಆ ಅಪ್ಪ ಮಗ ಇಳಿಯುವುದನ್ನೇ ಕಾಯುತ್ತ ಗೇಟಲ್ಲೇ ನಿಂತೆ. ಕೊನೆಗೂ ನಾನು ಗೇಟಲ್ಲಿ ನಿಂತಿದ್ದನ್ನು ಗಮನಿಸಿದ ಅಪ್ಪ ಮಗ ಇಬ್ಬರೂ ಒಂದೊಂದು ಕಡೆಯ ಬಾಗಿಲನ್ನು ತೆರೆದುಕೊಂಡು ಕೆಳಗಿಳಿದರು. ತಮ್ಮನ ಮಗನ ಮುಖವನ್ನೇ ನೋಡುತ್ತ ತಮ್ಮನನ್ನು ಕೇಳಿದೆ, "ಕನ್ಯೆ ಒಪ್ಪಿಗೆ ತಾನೇ?"

"ದಾರಿ ಬಿಡಿ ಆಂಟೀ, ಮೊದಲು ಒಳಗೆ ಹೋಗೋಣ" ಎಂದು ಮದುವೆಗಿರುವ ಮಾಣಿ ಒಳಗೆ ನುಗ್ಗಿಯೇಬಿಟ್ಟ. ಅವನು ಹೋದೆಡೆಗೇ ನೋಡುತ್ತ, ತಮ್ಮ ನನ್ನ ಪ್ರಶ್ನೆಗೆ ಉತ್ತರ ಕೊಡುವ ಬದಲು ಬೇರೇನೋ ಹೇಳಿದ. "ಈಗಿನ ಕಾಲದ ಮಕ್ಕಳಿಗೆ ಅದೇನು ಬುದ್ಧಿಯೋ ಒಂದೂ ಗೊತ್ತಾತಿಲ್ಲೆ ಮಾರಾಯ್ತಿ" ಎಂದು ನಿಟ್ಟುಸಿರು ಬಿಟ್ಟು, ನನ್ನನ್ನು ದಾಟಿಕೊಂಡು ತಾನೂ ಒಳಹೋದ. ಏನೂ ಅರ್ಥವಾಗದೆ ಬೆಪ್ಪುತಕ್ಕಡಿಯಾದ ನಾನು ನಿಧಾನಕ್ಕೆ ಒಳಬಂದೆ.

"ಯಾಕೆ ಅವನಿಗೆ ಹೆಣ್ಣು ಹಿಡಿಸಲಿಲ್ಲವೇ?" ಕೊನೆಗೂ ನನ್ನ ಬಾಯಿಂದ ಹೊರಬಿದ್ದ ಧ್ವನಿ ನನಗೇ ಅಪರಿಚಿತವಾಗಿತ್ತು.

"ಆಗಲೇ ಹೇಳಿದೆನಲ್ಲ, ಈ ಬಿಸಿಪ್ರಾಯದ ತರುಣರ ಮನಸ್ಸು ಅದೇನು ಯೋಚಿಸುತ್ತೋ, ಅದ್ಹೇಗೆ ಕೆಲಸ ಮಾಡುತ್ತೋ ಉಡುಪಿ ಕೃಷ್ಣನಿಗೇ ಗೊತ್ತು!" ತಮ್ಮ ಸುಸ್ತಾದವನಂತೆ ಕುಳಿತುಬಿಟ್ಟ. ಇಲ್ಲಿಗೆ ಮನಸ್ಸಿಗೆ ಬೇಸರ ತಟ್ಟಿದ್ದು ನನಗೆ ! ಇದು ನಾನೇ ತಂದ ಪ್ರಪೋಸಲ್. ನನ್ನ ಸ್ನೇಹಿತೆಯ ಮಗಳ ಮಗಳೇ. ತೆಳ್ಳಗೆ ಬೆಳಗ್ಗೆ ಇದ್ದು ಜಾತಕವೂ ಚೆನ್ನಾಗಿ ಹೊಂದುತಿದ್ದುದು ಇನ್ನೊಂದು ಪ್ಲಸ್ ಪಾಯಿಂಟ್ ಆಗಿತ್ತು.

"ಇಲ್ಲಿಗೆ ನಾವು ನೋಡಿದ್ದು ಈತನಕ ಬರೋಬ್ಬರಿ ಹತ್ತು ಹೆಣ್ಣುಗಳಾಯ್ತು. ನೋಡಿದ ಅಷ್ಟೂ ಹೆಣ್ಣುಗಳಿಗೂ ಒಂದಿಲ್ಲಾ ಒಂದು ದೋಷ ಕಟ್ಟುತ್ತಾನೆ. ಒಬ್ಬಳು ಉದ್ದ ಅಡಿಕೆ ಮರ ಎಂದರೆ, ಈ ಕುಳ್ಳಿಯನ್ನು ಪಾಕೆಟ್‌ನಲ್ಲಿಟ್ಟು ತಿರುಗಲೇ ನಾನು? ಎನ್ನುತ್ತಾನೆ. ಮತ್ತೊಬ್ಬಳು ಭಾರೀ ಚೆಂದವಿದ್ದರೂ ಇನ್ನೆರಡು ವರ್ಷದಲ್ಲಿ ಅವಳಮ್ಮನಂತೆ ದಪ್ಪವಾಗುವುದರಲ್ಲಿ ಸಂದೇಹವೇ ಇಲ್ಲ ಎಂದು ಬಿಟ್ಟೇ ಬಿಟ್ಟ. ಅದಕ್ಕೇ ಅವನಮ್ಮ ಖಡಾಖಂಡಿತವಾಗಿ ಹೇಳಿದ್ದು, 'ನಾ ಬರೋದಿಲ್ಲ, ನೀವು ಅಪ್ಪ ಮಗನೇ ಹೋಗಿ ಬನ್ನಿ' ಎಂದು". ತಮ್ಮ ತನ್ನ ಗೋಳು ಹೊರಹಾಕಿದ.

ಅಷ್ಟರಲ್ಲಿ ಸೋಫಾ ಮೇಲೆ ಕುಳಿತು, ಕಟ್ಟಿಕೊಂಡಿದ್ದ ಟೈಯನ್ನು ಬಿಚ್ಚುತ್ತಾ ತಮ್ಮನ ಮಗ ನನ್ನೆಡೆಗೆ ದಿಟ್ಟಿಸುತ್ತಾ ಕೇಳಿದ, "ಅಲ್ಲಾ ಆಂಟಿ, ಎಷ್ಟು ವರ್ಷವಾಯ್ತು ನೀವೀ ಈ ಬೆಂಗಳೂರು ಸಿಟಿಗೆ ಬಂದು?"

ಪೆದ್ದಿಯಂತೆ ಅವನಿಗೆ ಉತ್ತರಿಸಿದೆ. "1972 ರಲ್ಲಿ! ಯಾಕೇ?"

"ನಿಮಗಾದರೂ ಫ್ಯಾಶನ್ ಸೆನ್ಸ್ ಬೇಡವೇ? ಹೋಗಿಹೋಗಿ ಪುರಾಣಕಾಲದ ಪುಟ್ಟಕ್ಕನನ್ನು ನನಗೆ ತೋರಿಸುವುದೇ?"

ಈಗ ನಿಜಕ್ಕೂ ಬೆಚ್ಚಿ ಬಿದ್ದ ಪಾಡು ನನ್ನದು!. "ಏನಂದೀ??"

"ಆಗಲೇ ನಾನು ಹೇಳಿದೆನಲ್ಲ.." ತಮ್ಮ ಅವನಷ್ಟಕ್ಕೆ ತೊದಲಿದ.

"ಯಾಕೋ ಹಾಗಂತೀಯಾ? ಅವಳಲ್ಲೇನು ದೋಷ. ಕಂಡೆ ನೀನು?" ಘಟ್ಟಿಸಿ ಕೇಳಿದೆ ನಾನು, ಸೋದರಳಿಯನನ್ನು. "ಇಲ್ಲೇ ಹುಟ್ಟಿ, ಇಲ್ಲೇ ಬೆಳೆದು, ಇಲ್ಲೇ ಕಾಲೇಜಿನಲ್ಲಿ ಫ್ಯಾಶನ್ ಡಿಸೈನಿಂಗ್‌ನಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಮಾಡುತ್ತಿದ್ದಾಳೆ ಹುಡುಗಿ! ನೋಡಲೂ ಚೆಲುವೆಯೇ! ಬಾಡಿ ಫಿಟ್ಟಿಂಗ್, ಚೂಡಿದಾರಗಳಲ್ಲದೆ ಪ್ಯಾಂಟ್ ಸ್ಕರ್ಟ್ ಗಳಲ್ಲೂ ಅಂದವಾಗಿ ಕಾಣಿಸುತ್ತಾಳೆ!"

"ಹಾಗೆಂದೇ ಪುಸಲಾಯಿಸಿ ಕಳಿಸಿದ್ದು ನನ್ನನ್ನು!" ತಮ್ಮನ ಮಗ ತಿರುಗಿ ನನ್ನನ್ನೇ ಎದುರಿಸಿದ. "ಕಡುಕೆಂಪು ಕಣ್ಣು ಕುಕ್ಕುವ ಸೀರೆಗೆ ಅರ್ಧ ಸೀರೆಯ ತುಂಬಾ ಗಟ್ಟಿ ಹಸುರಿನ ಜರಿ ಹಚ್ಚಿದ ಬಾರ್ಡರ್, ಕೈಗಂಟಿನಿಂದ ಕೆಳಗಿಳಿದ ಸಡಿಲು ಸಡಿಲು ಶರ್ಟಿನ ಹಾಗಿನ ಕುಬುಸ, ಕೊರಳಲ್ಲಿ ದಪ್ಪ ಕಾಸಿನ ಸರ, ಅದರ ಮೇಲೆ ನಾಲಕ್ಕು ಎಳೆಯ ಇನ್ನೊಂದು ಮ್ಯಾಂಗೋ ಮಾಲಾ, ಕೈಯಲ್ಲೋ ಡಜನ್‌ಗಟ್ಟಲೆ ಬಳೆಗಳು, ಸೊಂಟಕ್ಕೆ ಅದೇನೋ ಗಟ್ಟಿಯಾಗಿ ಸುತ್ತಿ ಕಟ್ಟಿದ ಉಡುದಾರ,..",

ಮಧ್ಯದಲ್ಲೇ ಕೋಣೆಯ ಬಾಗಿಲಲ್ಲೇ ಕುಳಿತು ವಾರ್ತಾಪತ್ರಿಕೆಯಲ್ಲಿ ಮುಖ ಮುಚ್ಚಿಕೊಂಡಿದ್ದ ಯಜಮಾನರು "ಏ..ಏ.. ಏಯ್.. ಅದು ಉಡುದಾರ ಅಲ್ಲವೋ ಮಾಣೀ.. ಸೊಂಟದ ಡಾಬು. ಅಪ್ಪಟ ಬಂಗಾರದ ಡಾಬು ಮಾರಾಯಾ.." ಎಂದು ಕಿರುಚಿಕೊಂಡರು.

"ಅದೇನೇ ಇರಲಿ, ಈಗ ನೀವೇ ಹೇಳಿ ಅಂಕಲ್, ಆಕೆ ಗುಡಿಯೊಳಗಿನ ಮಾತನಾಡದ ಅಲಂಕರಿಸಿದ ದೇವತಾ ಮೂರ್ತಿಯನ್ನು ಎರಡೂ ಕೈಗಳಿಂದ ಎತ್ತಿ ತಂದಿಟ್ಟಂತಿರಲಿಲ್ಲವೇ? "

ಈಗ ಪುನಹ ಮೌನ ಕವಿಯಿತು ನನ್ನಲ್ಲಿ. ಐದು ಹೆಣ್ಣು, ಮೂರು ಗಂಡು ಮಕ್ಕಳ ದೊಡ್ಡ ಕುಟುಂಬ ನಮ್ಮದು. ಒಬ್ಬೊಬ್ಬರಿಗೂ ಕಾಲೇಜು ವಿದ್ಯಾಭ್ಯಾಸ ಕೊಡಿಸಿ, ಎರಡೆಳೆಯ ಚಿನ್ನದ ಸರ, ಕೈಗಳಿಗೆ ನಾಲ್ಕು ಚಿನ್ನದ ಬಳೆ ಹಾಕಿ ಮದುವೆ ಮಾಡಿಕೊಟ್ಟು, ಗಂಡು ಮಕ್ಕಳನ್ನು ಡಾಕ್ಟರು, ಎಂಜಿನೀಯರ್‌ಗಳನ್ನಾಗಿ ಮಾಡಿದ ತಂದೆಯ ಶ್ರಮ ಕಣ್ಮುಂದೆ ಬಂತು. ತಮ್ಮನ ಮುಖವೂ ಅದನ್ನೇ ಜ್ಞಾಪಿಸಿಕೊಂಡಿತೇನೋ! ಆದರೂ ಅಷ್ಟೊಂದು ಚಿನ್ನಾಭರಣ! ಸೋದರಳಿಯನ ಮುಖ ನೋಡಿದೆ. .ಅದು ನಿರ್ಲಿಪ್ತವಾಗಿತ್ತು. ಚುಕ್ಕಿಯಷ್ಟೂ ಲೋಭ ಕಾಣಿಸಲಿಲ್ಲ.

"ಅಲ್ಲೋ ಮಾರಾಯ, ನಮ್ಮಲ್ಲಿ ಹೆಣ್ಣು ತೋರಿಸುವುದೆಂದರೆ ಹೀಗೇ ಅಲ್ಲವೇ?" ಬಿಡದೆ ಕುಟುಕಿದೆ.

"ಅದು ನಿಮ್ಮ ಕಾಲಕ್ಕಾಗಿರಬಹುದು!" ಸಾಫ್ಟ್‌ವೇರ್ ಎಂಜಿನೀಯರ್‌ನಿಂದ ಖಡಕ್ ಉತ್ತರ.

"ಸೀರೆ ಉಟ್ಟಿದ್ದು ಮದುವೆ ಟೈಮ್‌ಗೆ ಪ್ರಾಕ್ಟೀಸ್ ಆಗಲಿ ಎಂದಿರಬೇಕು" ಮತ್ತೂ ಸಮಜಾಯಿಸುವ ಪ್ರಯತ್ನ ನನ್ನದು.

"ಅಷ್ಟಕ್ಕೂ ಡೀಸೆನ್ಸೀನೇ ಇಲ್ಲ ಆಂಟೀ, 'ಲೈಕ್ ಟು ಟಾಕ್ ಟು ಯು' ಎಂದರೆ ಅವಳು ತಲೆ ಕೆಳಗೆ ಹಾಕೋದೇ?"

ಈಗ ತಮ್ಮ ಮಧ್ಯೆ ಬಾಯಿ ಹಾಕಿದ, " ಸುಮ್ಮನೆ ಕೂತಿದ್ದವನು ಇದ್ದಕ್ಕಿದ್ದಂತೆ ಹುಡುಗಿಗೆ ನೇರವಾಗಿ ಐ ಲೈಕ್ ಟು ಟಾಕ್ ಟು ಯು, ಶೆಲ್ ವಿ ಗೋ ಟು ಎ ರೂಮ್ ಆಂಡ್ ಟಾಕ್ ಎಂದು ಏಕಾಏಕಿ ಕೇಳಿಯೇಬಿಡೋದೇ? ನನ್ನಲ್ಲಿ ಹೇಳಿದ್ದರೆ ನಾನೇ ಏರ್ಪಾಡು ಮಾಡುತ್ತಿರಲಿಲ್ಲವೇ?" ಎಂದು ಮಗನನ್ನು ಆಕ್ಷೇಪಿಸಿದ.

ಮಗ ತಟ್ಟನೆ ಎದ್ದು ನಿಂತ. "ನೀವಿನ್ನೂ ಯಾವ ಶತಮಾನದಲ್ಲಿದ್ದೀರಿ ಅಪ್ಪಾ, ಹುಡುಗ ಹುಡುಗಿ ಫ್ರಾಂಕಾಗಿ ಈಗಲೇ ಮಾತಾಡಿಕೊಳ್ಳದಿದ್ದರೆ ಮುಂದೆ ವರ್ಷಗಟ್ಟಲೆ ಜತೆಯಲ್ಲಿದ್ದು ಬಾಳೋದಾದರೂ ಹೇಗೆ? ಸ್ವಲ್ಪ ಅರ್ಥಮಾಡಿಕೊಳ್ಳುವ ಪ್ರಯತ್ನಮಾಡಿ!" ಎಂದು ಎದ್ದು ಹೋದ ಯುವಕನನ್ನು ನೋಡುತ್ತ ನನ್ನ ಯತ್ನ ವೈಫಲ್ಯದಲ್ಲೂ ನಾನು ಯೋಚಿಸತೊಡಗಿದೆ.

'ಹೌದಲ್ವೇ! ಈಗಂತೂ ಮಹಿಳೆ ಪುರುಷ ಸಮಾನವಾಗಿ ದುಡಿದು ಸಂಪಾದನೆ ಮಾಡಬೇಕಾದ ಅಗತ್ಯವಿದೆ. ವೈರುಧ್ಯಗಳು, ವೈಮನಸ್ಯಗಳು ಹೆಜ್ಜೆ ಹೆಜ್ಜೆಗೂ ತಲೆದೋರುತ್ತವೆ. ಬರೇ ದೈಹಿಕ ಅಲಂಕಾರ, ಬಾಹ್ಯರೂಪ ನೋಡಿ 'ಆಯ್ತು, ಒಪ್ಪಿಗೆ ' ಎಂದು ಬಿಡೋದೇ? ಹೆಣ್ಣಾಗಲೀ ಗಂಡಾಗಲೀ ಅವರವರೊಳಗೆ ಮೊದಲೇ ಮಾತಾಡಿಕೊಂಡು ಸಮನ್ವಯತೆ ಸಾಧಿಸಿಕೊಳ್ಳುವ ಅಗತ್ಯತೆ ಖಂಡಿತಾ ಇದೆ!' ಯೋಚಿಸುತಿದ್ದಂತೆ ಈ ಆಧುನಿಕ ಯುವಕನ ಮುಂಜಾಗ್ರತೆಯ ದೃಷ್ಟಿಕೋನ ನನ್ನಲ್ಲಿ ಮೆಚ್ಚುಗೆ ಗಳಿಸಿಕೊಂಡಿತು.

***

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ, 1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061
ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ –
ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 222 ನಡೆದ ದಿನಾಂಕ: 10 ಫೆಬ್ರವರಿ 2024
ಸಂಚಿಕೆಯ ಬಿಡುಗಡೆ ದಿನಾಂಕ: 09 ಮಾರ್ಚ್ 2024 – ಶನಿವಾರ

ಕರೋನ ಮದುವೆ 2021

– ನಾಗರತ್ನ ಚಂದ್ರಶೇಖರ್

(ನನ್ನ ಕರೋನಾ ಡೈರಿಯ ನೆನಪಿನ ಪುಟಗಳಲ್ಲಿ ಅಡಗಿದ್ದ ಕರೋನಾ ಮದುವೆಯ ಬಗ್ಗೆ ಬರೆದ ಲೇಖನ. ಇಲ್ಲಿ ಬರುವ ಇಬ್ಬರು ಮಹಿಳೆಯರು ಒಂದೇ ಬಡಾವಣೆಯ ಬೇರೆ ಬೇರೆ ಬೀದಿಗಳಲ್ಲಿರುವ ಶಾಂತ ಮತ್ತು ವಿಜಯ. ಇಬ್ಬರ ಸಂಭಾಷಣೆಯ ಸಾರ ಇಲ್ಲಿದೆ.)

"ಅನ್ರೀ ಶಾಂತಮ್ಮ, ನಿಮ್ ಕಲ್ಲೇಶನಿಗೆ ಹುಡುಗಿ ನೋಡಿದ್ದರಲ್ಲ ಏನಾಯ್ತು?"

"ಅಯ್ಯೋ ಹುಡುಗಿ ಏನೋ ಚೆನ್ನಾಗಿದ್ದಾಳೆ. ಆದ್ರೆ ಅದ್ಯಾಕೋ ಹೆಸರೇ ಸರಿ ಹೋಗ್ತಾ ಇಲ್ಲ. ಹೆಸರು ಕರೀನಾ ಅಂತೆ."

"ಅನ್ರೀ, ಹೆಸರಿನಲ್ಲಿ ಏನಿದೆ? ಮದುವೆಯಾದ ಮೇಲೆ ಹೇಗೂ ಗಂಡನ ಮನೆಯವರು ಹೆಸರು ಬದಲಾಯಿಸೋ ಸಂಪ್ರದಾಯ ನಿಮ್ಮಲ್ಲಿದೆ ಅಲ್ವೇ?"

"ಅದು ಸರಿ, ಆದರೆ ಈ ಕರೋನಾ ಬಂದ ಮೇಲೆ ಕರೋನಾನೋ, ಕರೀನಾನೋ ಅಂತ ಜನ ಹೆಚ್ಚು ಕೀಟ್ಲೆ ಮಾಡ್ತಾರಲ್ವಾ? ಆ ಹುಡುಗಿ ಅಂತೂ ಹೆಸರು ಬದಲಾಯಿಸ್ಕೊಳ್ಳಕ್ಕೆ ಒಪ್ತಾನೇ ಇಲ್ಲ ರೀ"

"ಹೋಗ್ಲಿ ಬಿಡಿ, ನಿಮ್ಮ ಕಲ್ಲೇಶಂಗೆ ಏನ್ ಕಡಿಮೆ ಆಗಿರೋದು? ಯಾರಾದ್ರೂ ಕರೆದು ಹೆಣ್ಣು ಕೊಡುತ್ತಾರೆ. ಚಿನ್ನದಂತ ಹುಡುಗ. ಕೈ ತುಂಬಾ ಬೇಕಾದಷ್ಟು ದುಡ್ಡು ಕೊಡುತ್ತಾರೆ”.

"ಅಯ್ಯೋ ಹಾಗೆಲ್ಲ ನಾವು ವರದಕ್ಷಿಣೆ ತಗೊಳೋದಿಲ್ಲ ರೀ... ಗ್ರಾಂಡ್ ಆಗಿ ಮದುವೆ ಮಾಡಿಕೊಟ್ಟರೆ ಸಾಕು ಅಂತಿದ್ವಿ ಇಷ್ಟು ದಿವಸ. ಆದರೆ ಈಗ ಅದಕ್ಕೂ ಸಂಚಕಾರ ಬಂತಲ್ಲ".

"ಹೌದು ರೀ.. ಈಗ ಮದುವೆ ಮಾರ್ಕೆಟ್ ತುಂಬಾ ಡಲ್ ಆಗೋಗಿದೆ. ಅದೆಷ್ಟು ಜನ ಹುಡುಗ, ಹುಡುಗಿಯರು ಮದುವೆ ಮಾಡಿಕೊಳ್ಳೋಕೆ ಕಾಯ್ತಾ ಇದಾರೋ"

"ನಮ್ ಮಂತ್ರಿಗಳೇ ಸರಳವಾಗಿ ಮಕ್ಕಳು ಮದುವೆ ಮಾಡಬೇಕು ಅಂತ ಶುರು ಮಾಡಿದ್ಮೇಲೆ ಮಿಕ್ಕವರು ಹೇಗೆ ಅದ್ದೂರಿ, ಆಡಂಬರ ಅಂತ ಹೋಗಕಾಗುತ್ತೆ ಹೇಳಿ?

"ಅದೂ ಅಲ್ಲದೆ 50 ರಿಂದ 100 ಜನಕ್ಕಿಂತ ಜಾಸ್ತಿ ಕರೆಯೋ ಹಾಗೆ ಇಲ್ವಲ್ಲ."

"ನಿಜಾರೀ, ಮೊನ್ನೆ ನನ್ ಮಗನ ಸ್ನೇಹಿತನ ಮದುವೆ ಅದೆಷ್ಟು ಸಿಂಪಲ್ಲಾಗ್ ಮಾಡಿದ್ರು ಅಂತೀರ. ದೇವಸ್ಥಾನಲ್ಲಿ ಮದುವೆ, ಹೋಟೆಲ್‌ನಲ್ಲಿ ಚಿಕ್ಕ ಪಾರ್ಟಿ ಅಷ್ಟೇ."

"ನಿಮಗೆ ಗೊತ್ತಾ? ನಿಮ್ಮನೆ ಬೀದೀಲಿರೋ ಸುಧಾಕರ ಶೆಟ್ರ ಮಗಳ ಮದುವೆ ನಿಶ್ಚಯ ಆಯ್ತೂಂತ ಸುದ್ದಿ. ನಿಜಾನಾ?”

"ಹೌದು ರೀ, ನಮ್ ಬಡಾವಣೆಗೇ ಅವರು ಭಾರಿ ಕುಳ! ಅವರ ಮನೆನೇ ಒಳ್ಳೆ ಅರಮನೆ ಥರ ಇದೆ. ಮನೇಲೆ ಸರಳವಾಗಿ ನಿಶ್ಚಿತಾರ್ಥ ಮಾಡ್ಬಿಟ್ರು"

"ಹಾಗಾದ್ರೆ ಮದುವೆ ದಾಂ ದೂಂ ಆಗಿ ಇರೋಲ್ವೇನೋ"

"ಹಾಗೆ ಕಾಣುತ್ತಪ್ಪ. ಮೊನ್ನೆ ನಮ್ಮನೆಗೆ ಇನ್ವಿಟೇಶನ್ ಕೊಟ್ಟುಹೋದ್ರು. ತಾಳ, ನನ್‌ಬ್ಯಾಗಲ್ಲಿ ಇರಬೇಕು ತೋರಿಸ್ತೀನಿ."

"ಅದೇನ್ರೀ ಅಷ್ಟೊಂದು ಶ್ರೀಮಂತರು, ಒಂದು ಸಣ್ಣ ಹಬ್ಬ ಬಂದ್ರೆ ಅದೆಷ್ಟು ವೈಭವ, ಆಡಂಬರದಿಂದ ಆಚರಿಸುತ್ತಿದ್ದರಲ್ಲ. ಆಹ್ವಾನ ಪತ್ರಿಕೆ ಕೂಡ ತುಂಬಾ ವಿಚಿತ್ರವಾಗಿದೆಯಲ್ಲ. ನಮಗೂ ಅವರು ತುಂಬಾ ಪರಿಚಯ ಇದ್ದೋರು .ಈ ಕಡೆ ಬರಲೇ ಇಲ್ಲ".

"ಬರಬಹುದು ಬಿಡಿ. ಪತ್ರಿಕೆ ನೋಡಿದ್ರಲ್ಲ, ಅಲ್ಲಿರೋ ಹಸಿರು, ಕೆಂಪು, ಹಳದಿ ಚೌಕ ಯಾರ್ಯಾರನ್ನು ಯಾವಾಗ ಕರಿಬೇಕು ಅಂತ ವಿಂಗಡಿಸಿಟ್ಟಿದ್ದಾರೆ."

"ಅದೇನ್ರೀ ಹಾಗಂದ್ರೆ?"

"ಹಸಿರು ಚೌಕ ಇದ್ರೆ ಧಾರೆಗೆ ಮಾತ್ರ.. ಕೆಂಪು ಇದ್ರೆ ಆರತಕ್ಷತೆಗೆ ಮಾತ್ರ. ಎರಡು ಬಣ್ಣ ಇದ್ರೆ, ಎರಡಕ್ಕೂ ಬನ್ನಿ ಅಂತ. ಹಳದಿ ಚೌಕ ಇದ್ರೆ ಬೀಗರ ಊಟಕ್ಕೆ ಬನ್ನಿ ಅಂತ ಅರ್ಥ ಅಂತೆ."

"ಸರಿ ಹೋಯ್ತು, ಭಾಳ ಜಾಣ್ತನ ಮಾಡಿದ್ದಾರೆ ಬಿಡಿ."

"ಅಷ್ಟೇ ಅಲ್ಲ ಪತ್ರಿಕೆ ಮೇಲೆ ಎರಡು ನಂಬರ್ ಇದ್ರೆ ಇಬ್ಬರಿಗೆ ಮಾತ್ರ. ನಾಲಕ್ಕಿದ್ರೆ ನಾಕು ಜನ ಮಾತ್ರ ಬರಬೇಕು ಅಂತ."

"ಒಳ್ಳೆ ಸಿನಿಮಾಕ್ಕೋ ನಾಟಕಕ್ಕೋ ಪಾಸ್ ಥರ ಆಯ್ತಲ್ಲ"

"ಮತ್ತೆ ನೂರು ಜನಕ್ಕಿಂತ ಜಾಸ್ತಿ ಜನ ಸೇರೋ ಹಾಗಿಲ್ಲ ಅಂತ ರೂಲ್ಸ್ ಇದಿಯಲ್ಲ ರೀ".

"ಎಲ್ಲಾ ಕರೋನಾ ಪ್ರಭಾವ ಬಿಡಿ."

"ಅಷ್ಟೇ ಅಲ್ಲ. ಆಹ್ವಾನ ಪತ್ರಿಕೆ ಹಿಂಬದಿಯಲ್ಲಿ ಅವರ ಬ್ಯಾಂಕ್ ಅಕೌಂಟ್ ನಂಬರ್ ಕೊಟ್ಟಿದ್ದಾರೆ. ಉಡುಗೊರೆ ಬದ್ಲು ಹಣ ಬೇಕಾದರೆ ಟ್ರಾನ್ಸ್‌ಫರ್ ಮಾಡಬಹುದು ಅಂತ"

"ಸರಿಯಪ್ಪ. ಯಾರಾದರೂ ನಂಬರಿಗೆ ದುಡ್ಡು ಹಾಕಕ್ಕಾಗ್ದೆ, ಮದುವೆಗೆ ಗಿಫ್ಟ್ ಅಂತ ಏನಾದರೂ ಹಿಡ್ಕೊಂಡು ಹೋದ್ರೆ ಏನ್ ಮಾಡ್ತಾರೆ?"

"ಅದಕ್ಕೂ ಉಪಾಯ ಮಾಡಿದ್ದಾರಂತೆ. ಎಂಟ್ರೆನ್ಸ್ ನಲ್ಲೆ ದೊಡ್ಡ ಡಬ್ಬ ಇಟ್ಟಿರ್ತಾರಂತೆ. ಅದರೊಳಗೆ ಹಾಕಬಹುದಂತೆ."

"ಓಹೋ ದೇವರ ಹುಂಡೀಲಿ ಕಾಣಿಕೆ ಹಾಕ್ದಂಗೆ. ತಾಂಬೂಲಕ್ಕೆ ಸ್ಯಾನಿಟೈಜರ್, ಮುಖದ ಮಾಸ್ಕನ್ನೇ ಕೊಡ್ತಾರೆನೋ"

"ಕರೆಕ್ಟಾಗಿ ಹೇಳದ್ರಿ .ಒಳ್ಳೆ ಮಿರ ಮಿರ ಮಿಂಚೋ, ನಕ್ಕಿ ಹಾಕಿರೋ ಮ್ಯಾಚಿಂಗ್ ಆಗೋ ಮಾಸ್ಕ್‌ಗಳಿಗೆ ಆರ್ಡರ್ ಕೊಟ್ಟಿದ್ದಾರಂತೆ. ಪ್ರತಿಯೊಂದು 150 ರೂಪಾಯಿ ಅಂತೆ"

"ಗೊತ್ತಾಯ್ತು ಬಿಡಿ, ಪನ್ನೀರ್ ಬದಲು ಸ್ಯಾನಿಟೈಜರ್ ಹಾಕ್ಕೊಂಡು, ಬೇಕಾದ ಮ್ಯಾಚಿಂಗ್ ಮಾಸ್ಕ್ ತೊಗೊಂಡು ಒಳಗಡೆ ಹೋದರೆ ಆಯಿತಲ್ಲ, ಇನ್ನೇನು ಊಟ ಒಂದೇ ಅಲ್ವಾ ಬಾಕಿ."

"ಸರತಿ ಸಾಲಲ್ಲಿ ಹೋಗಿ ಹುಡುಗ ಹುಡುಗಿ ಕೈ ಕುಲುಕೋದು, ಫೋಟೋ ಯಾವುದೂ ಇಲ್ವಂತೆ. ಹುಡುಗ ಹುಡುಗಿನೇ ನಮ್ಮ ಹತ್ತಿರ ಬಂದಾಗ ದೂರದಿಂದ ಶುಭಾಶಯ ಹೇಳದರೆ ಆಯ್ತಂತೆ, ಫೋಟೋ ತೆಗೆಯೋ ಕೆಲಸ ಡ್ರೋನು ಮಾಡುತ್ತಂತೆ."

"ಶೆಟ್ರು ಮನೆ ಊಟ ಅಂದ್ರೆ ಕನಿಷ್ಠ ನಲವತ್ತು ನಿಮಿಷನಾದ್ರು ಬೇಕು. ಅಷ್ಟೊಂದು ವೆರೈಟಿ ಇರುತ್ತೆ ಅಲ್ವಾ."

"ಅದೆಲ್ಲಾ ಏನೂ ಇಲ್ವಂತೆ, ಹೋದ ಕೂಡಲೇ ಟೀ, ಕಾಫಿ, ಐಸ್ ಕ್ರೀಮ್, ಮಿಲ್ಕ್ ಶೇಕು, ಏನ್ ಬೇಕೋ ಕೊಡ್ತಾರೆ .ಹೋಗುವಾಗ ಒಂದು ದೊಡ್ಡ ಬಾಕ್ಸ್‌ನಲ್ಲಿ ಐದು ಥರ ಸಿಹಿ ತಿಂಡಿ, ಐದು ಥರ ಖಾರ ಪ್ಯಾಕ್ ಮಾಡಿ ಇಟ್ಟಿದ್ದು ಕೊಡ್ತಾರಂತೆ. ಮನೆಗೆ ಹೋಗಿ ನಿಧಾನಕ್ಕೆ ಎರಡಲ್ಲ, ನಾಲ್ಕು ದಿನ ತಿನ್ನಬಹುದು."

"ಅಲ್ಲಾ.. ನಮ್ಮ ಮಗಳ ಮದುವೆ ಈಗ ಎರಡು ವರ್ಷದ ಹಿಂದೆ 50-60 ಲಕ್ಷ ಖರ್ಚು ಮಾಡಿ ಎಷ್ಟು ಗ್ರಾಂಡ್ ಆಗಿ ಮಾಡಿದ್ವಲ್ರೀ .ಈ ಕರೋನ ಆಗ್಩ಾದ್ರೂ ಬಂದಿದ್ರೆ ನಮ್ ದುಡ್ಡು ಎಷ್ಟೊಂದು ಉಳಿತಿತ್ತಲ್ಲ ಅನ್ಕೊಂತೀನಿ."

"ಅಯ್ಯೋ ರಾಮ, ಈ ಕರೋನ ಹಿಂದೆನೂ ಬೇಡ, ಮುಂದೇನು ಬೇಡ, ಯಾವಾಗಲೂ ಬರುವುದೇ ಬೇಡ. .ಎಲ್ಲರ ಜೀವ ತಿಂದಾಗ್ತಾ ಇರೋದು ಸಾಕು ಸುಮ್ಮನೆ ಇರಿ."

"ಅಲ್ಲಾ ಮಾತಿಗ್ ಹೇಳ್ದೆ. ಸದ್ಯ ಬರೋದೇನು ಬೇಡ. ನಮ್ ಜನ ಈಗಲಾದರೂ ಸರಳವಾಗಿ ಬದುಕೋದನ್ನ ಕಲೀಬೇಕು .ಮದುವೆ ನೆಪದಲ್ಲಿ 10-15 ವೆರೈಟಿ ಅಡುಗೆ ಮಾಡಿ ತಟ್ಟೆ ತುಂಬಾ ಹಾಕ್ಕೊಂಡು ರುಚಿ ನೋಡ್ತಾ, ಅರ್ಧಕರ್ಧ ತಿಂದು ಬಿಸಾಡ್ತ ಇದ್ರೆ ನೋಡಕ್ ತುಂಬಾ ಬೇಜಾರಾಗುತ್ತೆ."

"ಈಗ್ಲಾದ್ರೂ ಸುಧಾರಣೆಯಾದರೆ ಒಳ್ಳೆಯದಲ್ಲವೆ? ಮುಂದೆ ಹೋಗ್ತಾ, ಹೋಗ್ತಾ ಆನ್‌ಲೈನಲ್ಲೇ ಮದುವೆಗಳು ಆಗಿ ಕೊರಿಯರ್‌ನಲ್ಲಿ ಸ್ವೀಟ್ ಕಳಸಿದರೆ ಆಶ್ಚರ್ಯ ಇಲ್ಲ ಬಿಡಿ."

"ಅದೂ ಸರಿ ಅನ್ನಿ. ದುಡ್ಡಿಲ್ದೆ ಇರೋರೆಲ್ಲ ಪಾಪ 'ಕರೋನಾಗೆ ಜೈ..' ಅಂತ ಅನ್ನಬಾರದು ಅಷ್ಟೇ ಅಲ್ವೇ". ಇಬ್ಬರೂ ನಗುವರು.

***

ಋಣದ ರತ್ನ ಗಣಿಯು...

– ಟಿ.ಎಸ್. ಶ್ರವಣ ಕುಮಾರಿ

ಕಳೆದ ಸಂಚಿಕೆಯಿಂದ:

(ಸಾವಿನ ಆ ಘಳಿಗೆ ಬಂದಾಗಲೂ, ನನ್ನೆದುರು ನಿಂತಾಗಲೂ ಭಯವಾಗಿರಲಿಲ್ಲ; ಆದರೆ ನನ್ನ ಕೃತಜ್ಞತೆಯನ್ನು ತಿಳಿಸಿ "ಹೋಗ್ಬರ್ತೀನಿ" ಎಂದು ಹೇಳಿ ಹೋಗಬೇಕೆನಿಸಿತ್ತು ಎನ್ನುವುದನ್ನು ನೆನಪಿಸಿಕೊಂಡಾಗ ಸಾವಿನ ಭಯವನ್ನು ಗೆದ್ದಿದ್ದೇನೇನೋ ಎಂದು ನನಗನ್ನಿಸುತ್ತದೆ..).

ಎನಿತು ಜನ್ಮದಲಿ ಎನಿತು ಜೀವರಿಗೆ ಎನಿತು ನಾವು ಋಣಿಯೋ
ತಿಳಿದು ನೋಡಿದರೆ ಬಾಳು ಎಂಬುದಿದು ಋಣದ ರತ್ನ ಗಣಿಯೋ"

ಪ್ರಾಯಶಃ ಪ್ರತಿಯೊಬ್ಬ ಜೀವಿಯೂ ಸದಾಕಾಲವೂ ಸಹಜೀವಿಗಳ ಋಣದಲ್ಲೇ ಬದುಕುತ್ತಾನೆ ಎಂದೇ ನನ್ನ ನಂಬಿಕೆ. ಕೆಲವರ ಜೀವನದಲ್ಲಿ ಅದು ಸದಾ ಉಳಿಯುವಂತಹುದಾಗಿರಬಹುದು, ಕೆಲವರ ಜೀವನದಲ್ಲಿ ಆಗಾಗ ಬಂದು ಹೋಗುವ ಅತಿಥಿಯಂತಿರಬಹುದು. ಎಲ್ಲವನ್ನೂ ನಾನು ನಿಭಾಯಿಸಬಲ್ಲೆ ಎನ್ನುವ ಶಕ್ತಿ, ದೇಹದಲ್ಲಿ ಆರೋಗ್ಯ, ಮನಸ್ಸಿನಲ್ಲಿ ಹುಮ್ಮಸ್ಸು ತುಂಬಿದ್ದಾಗ 'ನನಗ್ಯಾರಿಂದ ಏನಾಗಬೇಕಾಗಿದೆ?!' ಎನ್ನುವ ಉಡಾಫೆ ತಲೆದೋರಬಹುದೇನೋ. ಆದರೆ ನಡೆಯುತ್ತಿರುವ ವಿದ್ಯಮಾನಗಳು ನನ್ನ ಅಂಕೆಗೆ ಮೀರಿದ್ದು, ಬೇರೆ ಯಾರದ್ದೋ, ಯಾವುದೋ ಸಹಾಯ ಬೇಕೇಬೇಕು ಎನ್ನುವಂತಹ ಪ್ರಸಂಗ ಬಂದಾಗ ಈ ಬಾಳು ಋಣದ ರತ್ನ ಗಣಿ ಎಂಬುದನ್ನು ವಿನೀತರಾಗಿ ಒಪ್ಪಿಕೊಳ್ಳಲೇಬೇಕಾಗುತ್ತದೆ.

ರೊಮಟಾಯ್ಡ್ ಸಂಧಿವಾತಕ್ಕೆ ತುತ್ತಾಗಿ ಅದರ ಪರಿಣಾಮದಿಂದಾಗಿ ನಿಲ್ಲುವುದೂ, ನಡೆಯುವುದೂ ಅಸಾಧ್ಯವೆನ್ನುವ ಮಟ್ಟ ಮುಟ್ಟಿದ್ದೆ. ಸದಾಕಾಲ ಬಾಧಿಸುತ್ತಲೇ ಇರುವ ನೋವಿನ ಸ್ಥಿತಿಗೆ ತಲುಪಿ ಒಂದು ಹತಾಶೆಯನ್ನು ಅನುಭವಿಸುತ್ತಿದ್ದಾಗ ಅದೇ ರೋಗದಿಂದ ಬಳಲುತ್ತಿದ್ದ ನಮ್ಮ ದೂರದ ಸಂಬಂಧಿಯೊಬ್ಬರು ನನ್ನೊಡನೆ ಮಾತನಾಡಬೇಕೆಂದು ಬಂದಿದ್ದರು. "ಇಷ್ಟರವರೆಗೆ ಚೆನ್ನಾಗಿ ಓಡಾಡಿಕೊಂಡಿದ್ದ ನಿನಗೆ, ಯಾವುದೇ ಪರಾಧೀನತೆ ಇಲ್ಲದೆ ಬದುಕಿದ್ದ ಜೀವನ ಕ್ರಮಕ್ಕೆ, ಈ ರೋಗ ಒಂದು ದೊಡ್ಡ ಸವಾಲು. ಎಷ್ಟೇ ಕಷ್ಟವಾದರೂ ನೀನು ನಿಜ ಸ್ಥಿತಿಯನ್ನು ಒಪ್ಪಿಕೊಳ್ಳಲೇಬೇಕು. ಓಡಿಹೋಗಲು ಆಗುವುದಿಲ್ಲ. ಮನಸ್ಸಿನ ಹೇಡಿತನವನ್ನು ದೂರಮಾಡಿಕೊಳ್ಳಬೇಕು. ಯಾರ ಸಹಾಯ, ಯಾವಾಗಲೇ ಬೇಕಾದರೂ ಹಿಂಜರಿಯದೆ ಒಪ್ಪಿಕೊಳ್ಳಬೇಕು. ಜಗತ್ತು ಅಷ್ಟೊಂದು ಕೆಟ್ಟದಿಲ್ಲ. ಮನಸ್ಸಿಗೆ ಹಿಂಸೆ ಮಾಡಿಕೊಂಡರೆ ನಿನಗೇ ಕಷ್ಟ. ಬೇರೆಯವರು ಆ ಸ್ಥಿತಿಯಲ್ಲಿದ್ದು, ನೀನು ಚೆನ್ನಾಗಿದ್ದರೆ ಸಹಾಯ ನೀಡಲು ಕೈಚಾಚುತ್ತಿದ್ದೆಯೋ ಇಲ್ಲವೋ? ಹಾಗೇ ಅವರಿಗೂ ನಿನಗೆ ಸಹಾಯ ಬೇಕೇನೋ ಎನ್ನಿಸಿ ಕೈಚಾಚುತ್ತಾರೆ. ಸಹಾಯದ ಕೈಯನ್ನು ತಳ್ಳಿದರೆ, ಅವರ ಋಣವೇಕೆಂದು ತಿರಸ್ಕರಿಸಿದರೆ ಮುಂದೆ ಹೋಗಲು ಸಾಧ್ಯವಾಗದೆ ನೀನು ಒಂಟಿಯಾಗಿ ನಿಂತಿರುತ್ತೀಯ. ಅದೇ ಕೈಯನ್ನು ಹಿಡಿದು ಹೊರಟರೆ ಜೊತೆಯಲ್ಲಿ ಹೆಜ್ಜೆ ಹಾಕುತ್ತಿ. ಅಷ್ಟೇ ವ್ಯತ್ಯಾಸ. ಆಯ್ಕೆ ನಮ್ಮದೇ. ಜೀವನ ಸಹನೀಯ ಎನ್ನಿಸಬೇಕಾದರೆ ಯಾರದೇ ಉಪಕಾರವನ್ನು ಕೃತಜ್ಞತೆಯಿಂದ ಪಡೆದುಕೊಳ್ಳುವ, ನಮ್ಮ ಕೈಲಾದ ಉಪಕಾರವನ್ನು ಬೇರೆಯವರಿಗೆ ಮಾಡುವ ಮನೋಭಾವವನ್ನು ಬೆಳೆಸಿಕೊಳ್ಳಬೇಕಷ್ಟೇ" ಎಂದಿದ್ದರು.

ಅವರ ಮಾತಿನಲ್ಲಿ ಅಡಗಿದ್ದ ಸತ್ಯವನ್ನು ನಾನು ಈ ಮೂವತ್ತು ವರ್ಷಗಳಲ್ಲಿ ಸಾಕಷ್ಟುಬಾರಿ ಕಂಡುಂಡಿದ್ದೇನೆ. ಯಾವುದೋ ಮೆಟ್ಟಿಲ ಮುಂದೆ ಹತಾಶೆಯಿಂದ ನಿಂತಿದ್ದಾಗ ಯಾವುದೋ ಅಪರಿಚಿತ ಕೈ ನನ್ನನ್ನು ಮೇಲಕ್ಕೆಳೆದುಕೊಂಡದ್ದಿದೆ. ಯಾವುದೋ ಕ್ಷಣದಲ್ಲಿ ಹೃದಯ ಮಮ್ಮಲ ಮರುಗಿದಾಗ ಇನ್ಯಾವುದೋ ಸಹಾನುಭೂತಿಯ ಆಸರೆ

'ನಾ ನಿನಗಿದ್ದೇನೆ' ಎಂದದ್ದಿದೆ. ಈಗ ಸದ್ಯದಲ್ಲಿ ನಾನು ನನ್ನ ಆಸ್ಪತ್ರೆಯ ಅನುಭವಗಳ ಬಗ್ಗೆ ಹೇಳುತ್ತಿರುವಾಗ ಅಲ್ಲಿ ನಾನು ಕಂಡ ಸುಂದರ ಮನಸ್ಸುಗಳ, ಹೃದಯಗಳ ಬಗ್ಗೆ ಹೇಳದಿದ್ದರೆ ನನಗೇ ನಾನು ಮೋಸ ಮಾಡಿಕೊಂಡಂತೆ!

"ಇಪ್ಪತ್ತೈದು ವರ್ಷಗಳಿಂದ ನನ್ನ ಆರೋಗ್ಯವನ್ನು ನಿಮ್ಮ ಕೈಗೆ ಹಾಕಿ ನಿಶ್ಚಿಂತೆಯಿಂದ ಇದೀನಿ ಡಾಕ್ಟ್ರೆ. ಥ್ಯಾಂಕ್ಸ್ ಅಂದರೆ ತುಂಬಾ ಕಡಿಮೆಯೆನಿಸುತ್ತೆ. ಇನ್ನೇನು ಹೇಳಲಿ?" ಎಂದೆ ನಾನು ಡಾ. ಚಂದ್ರಶೇಖರ್ ಬಳಿ ಕಳೆದಬಾರಿ ತಪಾಸಣೆಗೆ ಹೋಗಿದ್ದಾಗ. ಅವರು ನಗುತ್ತಾ "ನೀವೂ ಚಿಕಿತ್ಸೆಗೆ ಚೆನ್ನಾಗಿ ಸ್ಪಂದಿಸಿದ್ದೀರಿ; ಅದು ಮುಖ್ಯ" ಎಂದರು. ಅವರ ಬಳಿಯಿರುವ ರೋಗಿಗಳ ಗುರುತಿನ ಸಂಖ್ಯೆ ಈಗ ಆರು ಅಂಕೆಗಳಲ್ಲಿ ನಡೆಯುತ್ತಿದೆ. ಮೂರರ ಅಂಕೆಯೊಳಗೆ ಇರುವ ನನ್ನಲ್ಲಿ ಇದುವರೆಗೂ ಬದುಕಿನಲ್ಲಿ ಆಸಕ್ತಿಯನ್ನು, ಭರವಸೆಯನ್ನೂ ಉಳಿಸಿಕೊಂಡು ಬಂದಿದ್ದಾರೆ. ನೋವಿನಿಂದ ಕುಸಿಯುವ ಪ್ರತಿ ಸಂದರ್ಭದಲ್ಲೂ 'ಅದೇನೂ ದೊಡ್ಡದಲ್ಲ; ಮೇಲೇಳಿ' ಎಂದು ಹುರುಪನ್ನು, ಶಕ್ತಿಯನ್ನು ತುಂಬುವ ಅವರಿಗೆ ನಾನೆಷ್ಟು ಋಣಿಯೋ!

ಹನ್ನೊಂದು ವರ್ಷಗಳ ಹಿಂದೆ ಉಸಿರಾಡುವುದೇ ಕಷ್ಟವಾಗಿ ನನ್ನ ದೇಹದ ಆಮ್ಲಜನಕದ ಮಟ್ಟ ದಾರುಣವಾಗಿ ಇಳಿಯುತ್ತಿದ್ದಾಗ ಹೊರ ರೋಗಿಗಳ ವಿಭಾಗದಿಂದ ತಕ್ಷಣವೇ ತುರ್ತುಚಿಕಿತ್ಸಾ ಘಟಕಕ್ಕೆ; ಅಲ್ಲಿಂದ ನೇರವಾಗಿ ತೀವ್ರ ನಿಗಾ ಘಟಕಕ್ಕೆ ವರ್ಗಾಯಿಸಿದ್ದ ಡಾಕ್ಟರ್ ಶೋಭಾ ನಾಯ್ಡು, ನನ್ನ ಮುಂದೆ "ನಿನಗೇನಾಗಿದೆ ಧಾಡಿ, ಮೂರ್ನಾಲ್ಕು ದಿನದಲ್ಲಿ ಡಿಸ್ಚಾರ್ಜ್ ಆಗಿ ಮನೆಗೆ ಹೋಗುತ್ತಿ" ಎನ್ನುತ್ತಿದ್ದವರು, ಮನೆಯವರ ಮುಂದೆ "ಅವಳು ಉಳಿಯುವುದಾದರೆ ಅದವಳ ಆತ್ಮವಿಶ್ವಾಸ ಮತ್ತು ದೈವ ಸಹಾಯದಿಂದಷ್ಟೇ. ಯಾವುದೇ ದೈಹಿಕ ನಿಯತಾಂಕಗಳೂ ಅವಳನ್ನು ಉಳಿಸಿಕೊಳ್ಳುವುದಕ್ಕೆ ಪೂರಕವಾಗಿಲ್ಲ" ಎಂದಿದ್ದರಂತೆ. ಆದರೆ ಅವರಿಗೂ ಮತ್ತು ಅವರೊಂದಿಗಿದ್ದ ಕೆಲವು ದಾದಿಯರಿಗೂ ನನ್ನನ್ನು ಉಳಿಸಿಕೊಳ್ಳಲೇಬೇಕೆಂಬ ಛಲ ಹುಟ್ಟಿದ್ದು, ಕಾಯಾ ವಾಚಾ ಮನಸಾ ಅವರು ಶ್ರಮಿಸಿದ್ದನ್ನು ನಾನು ಕಂಡಿದ್ದೇನೆ. ಆಮ್ಲಜನಕದ ಮಟ್ಟ ಅರವತ್ತಕ್ಕೂ ಕೆಳಗಿಳಿದು ಸಾವಿನ ಹಾದಿಯತ್ತ ಸಾಗುತ್ತಿದ್ದಾಗ, ತೀವ್ರ ನಿಗಾ ಘಟಕದಲ್ಲಿ ನನ್ನನ್ನಿರಿಸಿದ್ದ ಡಾಕ್ಟರಿಗೆ ನಿದ್ರೆಮಾಡಲು ಸಾಧ್ಯವಾಗಿರಲಿಲ್ಲ. ಯಾವುದೋ ಮಂಪರಿನಲ್ಲಿದ್ದ ನಾನು ಕಣ್ಬಿಟ್ಟಾಗ, ಆ ಮಧ್ಯರಾತ್ರಿಯಲ್ಲಿ ಮನೆಯಿಂದ ಒಬ್ಬರೇ ಬಂದಿದ್ದ ಡಾಕ್ಟರ್ ಎಲ್ಲಾ ಉಪಕರಣಗಳ ಬಡಿತಗಳನ್ನು ನಿರೀಕ್ಷಿಸುತ್ತಾ ನನ್ನೆದುರು ನಿಂತಿದ್ದರು. ಅವರ ಯೋಚನಾಭರಿತ ಮುಖ ಇಂದಿಗೂ ನನ್ನ ಕಣ್ಣಿಗೆ ಕಟ್ಟಿದಹಾಗಿದೆ. ಎರಡು ದಿನಗಳ ನಂತರ ವೆಂಟಿಲೇಟರ್‌ಗೆ ವರ್ಗಾವಣೆಯಾದಾಗ 'ಇನ್ನು ನನ್ನ ಕತೆ ಮುಗಿಯಿತು' ಎಂದೇ ಭಾವಿಸಿದ್ದೆ. ಐದು ದಿನಗಳ ನಂತರ ಅದರಿಂದ ಹೊರಬಂದು ಪರಿಸ್ಥಿತಿ ಸುಧಾರಿಸತೊಡಗಿದಾಗ, ನನ್ನನ್ನು ನೋಡಲು ಬರುವಾಗೆಲ್ಲಾ ಡಾಕ್ಟರ ಮುಖದಲ್ಲಿ ಯಾವುದೋ ಯುದ್ಧವನ್ನು ಗೆದ್ದ ಸಂಭ್ರಮ ಇರುತ್ತಿದ್ದನ್ನು ನಾನು ಮರೆಯಲು ಸಾಧ್ಯವೇ?! ಇಂದಿಗೂ ನಾನು ಅವರ ಬಳಿ ಹೋದಾಗೆಲ್ಲಾ 'ನನ್ನ ವೃತ್ತಿಜೀವನದ ವಿಜಯದ ಸಂಕೇತ ನೀನು' ಎಂದು ತಬ್ಬಿಕೊಳ್ಳುವ ಆತ್ಮೀಯತೆ ಅವರದ್ದು!

ಆ ಘಳಿಗೆಯಲ್ಲಿ ನನ್ನನ್ನು ನೋಡಿಕೊಂಡ ಎಲ್ಲಾ ದಾದಿಯರೂ ಒಳ್ಳೆಯ ಶುಶ್ರೂಷೆಯನ್ನೇ ನೀಡಿದರೂ ಅವರಲ್ಲಿ ತೀವ್ರ ನಿಗಾ ಘಟಕದಲ್ಲಿದ್ದ ದಾಕ್ಷಾಯಿಣಿ ಮತ್ತು ಅಶ್ವಿನಿ ಎಂಬ ಇಬ್ಬರನ್ನು ಪ್ರಾಯಶಃ ನಾನು ಜೀವಂತವಾಗಿರುವವರೆಗೂ ಮರೆಯಲಾರೆ. ಯಾವಾಗ ಕರೆದರೂ, ಕೈಸನ್ನೆ ಮಾಡಿದರೂ, ಮುಖ ಬಾಡಿದರೂ ತಕ್ಷಣವೇ ಓಡಿ ಬರುತ್ತಿದ್ದ, ಆತ್ಮೀಯತೆಯಿಂದ ಮಾತನಾಡಿಸುತ್ತಿದ್ದ, ಸ್ಪಂದಿಸುತ್ತಿದ್ದ ಅವರಿಬ್ಬರೂ ನನಗೆ ಬಲು ಹತ್ತಿರದವರಾಗಿಬಿಟ್ಟಿದ್ದರು. ಯಾವುದಕ್ಕೂ ತಕ್ಷಣವೇ ಒಂದು ಪರಿಹಾರವನ್ನು ತೆಗೆದುಕೊಂಡೇ ಬರುತ್ತಿದ್ದರು. "ಒಂದೇ ಕಡೆ ಮಲಗಿ ಬೆನ್ನೆಲ್ಲಾ ಮರಗಟ್ಟಿದ ಹಾಗಾಗಿದೆ ದಾಕ್ಷಾಯಿಣಿ" ಎಂದೆ. ತಕ್ಷಣವೇ ಹೋದವಳು ಎಲ್ಲಿಂದಲೋ ಒಂದು ಕ್ರೀಮ್ ತಂದು

ಮೆತ್ತಗೆ ಕೂರಿಸಿ ಹಿತವಾಗುವಂತೆ ಉಜ್ಜಿಕೊಟ್ಟಳು. "ಇದನ್ನು ಇಲ್ಲೇ ಇಟ್ಟಿರ್ತೀನಿ. ನಾಳೆ ಅಕಸ್ಮಾತ್ ನಾನು ಮರೆತ್ರೆ ನೀವು ಜ್ಞಾಪಿಸಿ" ಎಂದವಳು ಅಲ್ಲಿರುವವರೆಗೂ ಒಂದು ದಿನವೂ ಮರೆಯದೆ ಪ್ರೀತಿಯಿಂದ ಹಚ್ಚಿದ್ದನ್ನು ಮರೆಯಲು ಸಾಧ್ಯವೇ?! ಇದೊಂದು ಉದಾಹರಣೆಯಷ್ಟೇ. ಏನನ್ನೇ ಕೇಳಿದರೂ ಅವಳ ಪ್ರತಿಕ್ರಿಯೆಗಳು ಹಾಗೇ ಇರುತ್ತಿದ್ದವು. ಅವಳಂತೆಯೇ ಅಶ್ವಿನಿ ಕೂಡಾ. ಡ್ಯೂಟಿ ಡಾಕ್ಟರು ಬೈದು ನನ್ನ ಮಗಳನ್ನು ಓಡಿಸಿದ್ದಾಗ ತುಂಬಾ ಖೇದಗೊಂಡಿದ್ದೆ. ಎಷ್ಟೇ ಪ್ರಯತ್ನಪಟ್ಟರೂ ನನ್ನಿಂದ ಕಣ್ಣೀರನ್ನು ತಡೆಯಲಾಗಿರಲಿಲ್ಲ. ತಕ್ಷಣವೇ ಓಡಿ ನನ್ನ ಬಳಿ ಬಂದಿದ್ದ ಅಶ್ವಿನಿ, "ಮೇಡಂ ಅಳ್ಬೇಡಿ; ನನ್ನನ್ನೇ ನಿಮ್ಮ ಮಗಳು ಅನ್ಕೊಳಿ. ಅವರ ನಂಬರ್ ಕೊಡಿ; ನಾನು ಸಮಯ ನೋಡ್ಕೊಂಡು ಫೋನ್ ಮಾಡಿ ಕರೆಸ್ತೀನಿ" ಎನ್ನುತ್ತಾ ತಾನೂ ನನ್ನೊಂದಿಗೆ ಕಣ್ಣೀರು ಮಿಡಿದು ಸಂಜೆಯ ಹೊತ್ತಿಗೆ ಫೋನ್ ಮಾಡಿ ಅವಳನ್ನು ಕರೆಸಿದ್ದಳು.

"ನಾನು ಜ್ಯೋತ್ಸ್ನಾ" ಎನ್ನುತ್ತಾ ಬೆಳದಿಂಗಳಿನಂತಹುದೇ ನಗೆಯನ್ನು ಬೀರುತ್ತಾ ತನ್ನನ್ನು ಪರಿಚಯಿಸಿಕೊಂಡಿದ್ದಳು, ನಾನು ವಾರ್ಡಿಗೆ ವರ್ಗಾವಣೆಯಾದಾಗ ಆ ಹುಡುಗಿ. "ನಿನ್ನ ಹೆಸರಿನ ಅರ್ಥ ಗೊತ್ತಾ. ಬೆಳದಿಂಗಳು ಅಂತ" ಎಂದೆ. "ನನಗೇನು, ನಮ್ಮಪ್ಪ, ಅಮ್ಮನಿಗೂ ಗೊತ್ತಿರ್ಲಿಲ್ಲ. ನಿಸಾರ್ ಅಹಮದ್ ಅಂತ ಒಬ್ರು ಕವಿಯಂತೆ. ಅವ್ರು ಇಲ್ಲಿ ದಾಖಲಾಗಿದ್ದಾಗ, ಹೇಳಿದ ನಂತರ ನಂಗೆ ಗೊತ್ತಾಯ್ತು" ಎನ್ನುತ್ತಾ ಮತ್ತೊಮ್ಮೆ ಮುಖದಲ್ಲಿ ಬೆಳದಿಂಗಳನ್ನು ಸೂಸಿದಳು. "ಅರೆರೆ, ಈ ಹುಡುಗಿ ನನಗೂ, ನನ್ನ ನೆಚ್ಚಿನ ಕವಿಗೂ ನಡುವಿನ ಕೊಂಡಿಯಾದಳಲ್ಲ" ಎನ್ನಿಸಿ ಮತ್ತಷ್ಟು ಖುಷಿಯಾಯಿತು. ಆ ನಡುರಾತ್ರಿ ಇದ್ದಕ್ಕಿದ್ದಂತೆ ನನ್ನ ಮೈಯೆಲ್ಲಾ ಬೆವೆತು ನೀರು ಹರಿಯತೊಡಗಿತು. ಮೈಯೆಲ್ಲಾ ಹಗುರಾಗಿ ನಾನು ಎಲ್ಲೋ ತೇಲುತ್ತಿದ್ದೇನೇನೋ ಅನ್ನುವ ಹಾಗನ್ನಿಸತೊಡಗಿತು. ಪಕ್ಕದಲ್ಲಿದ್ದ ನನ್ನ ತಂಗಿ ಓಡಿಹೋಗಿ ಜ್ಯೋತ್ಸ್ನಾಳನ್ನು ಕರೆತಂದಳು. ಆಗಷ್ಟೇ ತನ್ನ ರೌಂಡ್ಸನ್ನು ಮುಗಿಸಿಕೊಂಡು ಬಂದು ಬಿಸ್ಕತ್ ಪ್ಯಾಕೆಟನ್ನು ಒಡೆಯುತ್ತಿದ್ದವಳು ಅದನ್ನಲ್ಲೇ ಬಿಟ್ಟು ಓಡಿಬಂದು ಸಕ್ಕರೆಯ ಮಟ್ಟವನ್ನು ನೋಡಿದರೆ ಅದು ಅರವತ್ತಕ್ಕೆ ಇಳಿದುಬಿಟ್ಟಿದೆ. ತಕ್ಷಣವೇ ತಾನು ತಿನ್ನಲು ಇಟ್ಟುಕೊಂಡಿದ್ದ ಬಿಸ್ಕತ್ತನ್ನು ತಂದು ನನಗೆ ತಿನ್ನಿಸಿ, ಕ್ಯಾಂಟೀನಿಗೆ ಕರೆಮಾಡಿ ಹಣ್ಣಿನ ರಸವನ್ನು ತರಲು ಹೇಳಿದಳು. ಕೆಲವೇ ಕ್ಷಣಗಳಲ್ಲಿ ಅದನ್ನು ಹಿಡಿದುಕೊಂಡೇ ಬಂದವಳು ಅದನ್ನು ಕುಡಿಸಿ ನಾನು ಮಾಮೂಲಿಗೆ ಬರುವತನಕ ಪಕ್ಕದಲ್ಲೇ ಕುಳಿತಿದ್ದಳು. ಅವಳು ತಿನ್ನಲು ಇಟ್ಟುಕೊಂಡಿದ್ದ ಬಿಸ್ಕತ್ತನ್ನು ನಾನು ಕಬಳಿಸಿದ್ದೆ. ಪಾಪ! ಅವಳು ರಾತ್ರಿಯೆಲ್ಲಾ ಹಸಿದುಕೊಂಡೇ ಇರಬೇಕಾಯಿತು. ನಾನು ಪೇಚಾಡಿಕೊಂಡಾಗ "ಪರವಾಗಿಲ್ಲ ಮೇಡಂ; ತಕ್ಷಣ ನಿಮ್ಮ ಸಕ್ಕರೆ ಮಟ್ಟ ಏರಿಸಕ್ಕೆ ನನ್ನ ಕೈಲಿ ಆದಿತ್ತಲ್ಲ ಅಂತ ಖುಷಿ ನಂಗೆ" ಎಂದಳು.

ಇಷ್ಟೇ ಹೇಳಿದರೆ ನಾನು ಇವರ ಬಗ್ಗೆ ಏನೂ ಹೇಳಿದಂತಾಗಲಿಲ್ಲ. ನಾನು ಮನೆಗೆ ಹೊರಡುವುದು ತಿಳಿದಾಗ ದಾಕ್ಷಾಯಿಣಿ ಮತ್ತು ಅಶ್ವಿನಿಗೆ ಹೇಳಿಕಳಿಸಿದೆ. ತಮ್ಮ ಡ್ಯೂಟಿ ಮುಗಿಸಿಕೊಂಡು ತೆರಳುವ ಮುನ್ನ ಬಂದರು. ಅವರಿಬ್ಬರ ಉಪಕಾರವನ್ನು ಸ್ಮರಿಸಿ ನನ್ನ ನೆನಪಾಗಿ ಏನಾದರೊಂದನ್ನು ತೆಗೆದುಕೊಳ್ಳಿರೆಂದು ಸ್ವಲ್ಪ ಹಣ ಹಾಕಿದ್ದ ಲಕೋಟೆ ಅವರ ಕೈಗಿತ್ತರೆ, "ನಮ್ಮ ಸೇವೆಗೆ ದುಡ್ಡಿನ ಬೆಲೆ ಖಂಡಿತಾ ಬೇಡ ಮೇಡಂ. ನೀವು ಹುಷಾರಾಗಿ ಹೋಗ್ತಿದೀರಲ್ಲ; ನಮಗಷ್ಟೇ ಬೇಕಾಗಿದ್ದದ್ದು. ನಿಮ್ಮ ಆಶೀರ್ವಾದ ಬೇಕು ಅಷ್ಟೇ. ನಮಗೇನಾದ್ರೂ ಕೊಡ್ಬೇಕು ಅನ್ಸಿದ್ರೆ ಒಂದೊಂದು ಚಾಕ್ಲೇಟ್ ಕೊಡಿ ಸಾಕು." ಎನ್ನುತ್ತಾ ಇಬ್ಬರೂ ನನ್ನ ಕಾಲು ಮುಟ್ಟಿ ನಮಸ್ಕರಿಸಿದ್ದಾಗ ನನ್ನ ಕಣ್ಣು, ಹೃದಯ ಎರಡೂ ತುಂಬಿಬಂದಿತ್ತು. ಹಾಗೆಯೇ ಜ್ಯೋತ್ಸ್ನಾಗೂ ಕೊಟ್ಟಾಗ ಅವಳೂ "ನಿಮ್ಗೇನಾದ್ರೂ ಕೊಡ್ಬೇಕು ಅನ್ಸಿದ್ರೆ ಒಂದು ಬಿಸ್ಕತ್ ಪ್ಯಾಕೆಟ್ ಕೊಡಿ ಸಾಕು; ದುಡ್ಡುಗಿಡ್ಡೆಲ್ಲಾ ಬೇಡ" ಎನ್ನುತ್ತಾ ಎಂದಿನದೇ ಬೆಳದಿಂಗಳಿನ ನಗೆ ಬೀರಿದಳು. ಇವರೆಲ್ಲರ ಪ್ರೀತಿಗೆ ನಾನೇನು ತಾನೇ ಕೊಟ್ಟೇನು; ನನ್ನ ಮನಃಪೂರ್ವಕ ಹಾರೈಕೆಗಳಲ್ಲದಿದ್ದರೆ?! ಹಾಗೆಯೇ ನಾನು ಕಳೆದ ವರ್ಷ ಆಸ್ಪತ್ರೆಯಲ್ಲಿ ದಾಖಲಾಗಿದ್ದಾಗ ನನ್ನನ್ನು ನೋಡಿಕೊಂಡಿದ್ದ ಪ್ರಿಯಾ, ರಮ್ಯಾ ಇವರ್‍ಯಾರೂ ಬರಿಯ ಕರ್ತವ್ಯವನ್ನಷ್ಟೇ ಮಾಡಿದ್ದರು ಎಂದು ನನಗನ್ನಿಸುವುದಿಲ್ಲ. ಇವರೆಲ್ಲಾ ಎಲ್ಲಾದರೂ ಇರಲಿ; ದೇವರು ಇವರೆಲ್ಲರನ್ನೂ ಚೆನ್ನಾಗಿಟ್ಟಿರಲಿ.

ನನ್ನ ಜೀವನದಲ್ಲಿ ನಾನು ಋಣಿಯಾಗಿರಬೇಕಾಗಿದ್ದವರ ಬಗ್ಗೆ ಬರೆಯುತ್ತಾ ಹೋದರೆ ಒಂದು ಪುಸ್ತಕವನ್ನೇ ಬರೆಯಬೇಕಾಗಬಹುದು. ಆದರೆ ನನ್ನ ಈ ಲೇಖನ ಮಾಲಿಕೆಯನ್ನು ನಾನು ಬರಿಯ ಆಸ್ಪತ್ರೆಯ ಅನುಭವಗಳಿಗೆ ಮಾತ್ರಾ ಸೀಮಿತಗೊಳಿಸಿಕೊಂಡಿರುವುದರಿಂದ, ಕೆಲವು ಮುಖ್ಯರಾದವರ ಬಗ್ಗೆ ಮಾತ್ರಾ ಬರೆದಿದ್ದೇನೆ. ಲೇಖನದ ಮೊದಲಲ್ಲಿ ನಾನು ಬರೆದಿರುವ ಜಿ.ಎಸ್.ಶಿವರುದ್ರಪ್ಪನವರ ಸಾಲುಗಳು ನನಗೆ ಸದಾ ಭಗವದ್ಗೀತೆಯ ಸಾಲುಗಳಂತೆಯೇ ಭಾಸವಾಗುತ್ತವೆ.

"ಎನಿತು ಜನ್ಮದಲಿ ಎನಿತು ಜೀವರಿಗೆ ಎನಿತು ನಾವು ಋಣಿಯೋ
ತಿಳಿದು ನೋಡಿದರೆ ಬಾಳು ಎಂಬುದಿದು ಋಣದ ರತ್ನ ಗಣಿಯೋ"

***

ಉದ್ಯೋಗಸ್ಥ ಮಹಿಳೆಗೆ ಕಿವಿಮಾತು

– ರೇಣುಕಾ ದೇಸಾಯಿ

ನೋಯದಿರು ಹೆಣ್ಣೆ ನಾನು ಉದ್ಯೋಗಸ್ಥೆ ಎಂದು
ಕೊರಗದಿರು ನನಗೆ ಸವಲತ್ತು ಇಲ್ಲೆಂದು
ಮರುಗದಿರು ನನಗೆ ವಿಶ್ರಾಂತಿ ಬೇಕೆಂದು
ಕಣ್ಣೀರ ಹರಿಸದಿರು ನಾನು ದುಡಿದು ಸಾಕುವೆನೆಂದು
ಬೆದರದಿರು ನನಗೆ ಅವಮಾನವಾಯಿತೆಂದು

ನನ್ನವ್ವ ನಿನ್ನವ್ವ ದುಡಿಯಲಿಲ್ಲವೇ ಅಂದು
ರೊಟ್ಟಿಯ ಬಡಿದು ಮುಸುರಿಯಾ ತಿಕ್ಕಿ ಸಾಕಲಿಲ್ಲವೆ?
ಆಕಳು ಕರು ಸಿಂಧು
ಅತ್ತೆ, ಮಾವ, ಭಾವ. ಮೈದುನ ಇದ್ದರಲ್ಲಾ
ಅವಳೊಂದಿಗೆ ಎಂದೆಂದು

ಮೆಣಸಿನ ಕುಕ್ಕೆ, ಹತ್ತಿಯ ಉಡಿಯ ಹಿಡಿದು ಓಡಲಿಲ್ಲವೇ
ಹೊಲಕೆ ಕಂಕುಳಲ್ಲಿ ಮಗುವೊಂದು
ಅವಳೂ ಉದ್ಯೋಗಸ್ಥ ಮಹಿಳೆಯಲ್ಲವೇ ಅಂದು
ಅವಳಿಗಿತ್ತೆ ಅಲ್ಲಿ ಉದ್ಯೋಗ ಭದ್ರತೆ
ಗಂಡಸರೂ ಇದ್ದರಲ್ಲಾ ಕೆಲಸದಲ್ಲಿ ಜೊತೆ ಜೊತೆ
ಗದರಿಸುವವರಿದ್ದರು ಮೂದಲಿಸುವವರು ಇದ್ದರು
ಅವಳ ತನು ಬೆದರಿತೆ?

ಹೋರಾಟ ಮಾಡಲು ಅವಳಿಗಿತ್ತೆ ಭ್ರಾತೃತೆ
ಕೇಳುವವರಿರಲಿಲ್ಲ ಅವಳ ದುಃಖ ದುಮ್ಮಾನದ ಕಥೆ
ಹೀಗಿದ್ದರೂ ಜೀವನದ ಉತ್ಸಾಹ ಬತ್ತಲಿಲ್ಲ
ಮುಖದಲ್ಲಿ ಶಾಂತಿ, ಸಮಾಧಾನದ ಬುಗ್ಗೆ ಉಕ್ಕಿತಲ್ಲ
ಮಗುವನ್ನು ಸಾಕಿ ಸಮಾಧಾನಿಸದೆ, ಘಳಿಗೆ ಇರಲಿಲ್ಲ
ಒಟ್ಟು ಕುಟುಂಬದ ನೊಗ ಎಂದೆಂದೂ ಇಳಿಸಲಿಲ್ಲ

ಅವಳಲ್ಲಿ ಗುಣವಿತ್ತು, ಶೀಲವಿತ್ತು
ಉಡುಗೆ ತೊಡುಗೆಯಲ್ಲಿ ಅಂದವಿತ್ತು
ಎದುರಿರುವವರನ್ನು ಅಧೈರ್ಯಪಡಿಸುವ
ಘನಗಾಂಭೀರ್ಯದ ಮುಖವಿತ್ತು,
ತಿಲಕವಿತ್ತು, ಮುಡಿಯಿತ್ತು
ಕೈ ತುಂಬ ಬಳೆಯ ನಿನಾದವಿತ್ತು
ಜೊತೆಯಲ್ಲಿರುವವರ ಗೌರವ
ಪಡೆಯುವ ಗಾಂಭೀರ್ಯವಿತ್ತು
ಅವಳು ಗಟ್ಟಿಗಿತ್ತಿ ನನ್ನವ್ವ ನಿನ್ನವ್ವ ಒನಕೆ ಓಬವ್ವ

***

ಸಣ್ಣ ಕತೆ (ಭಾಗ-1)

ಸುಳಿಯೊಳು ಸಿಲುಕಿದೆ ಅಂಬಿಗ

– ಮಾಲತಿ ಶ್ರೀನಿವಾಸನ್

ಕಿಕ್ಕಿರಿದ ಸಭಾಂಗಣ ಬಣ್ಣದ ದೀಪಾಲಂಕಾರದಲ್ಲಿ ಸಜ್ಜಾದ ಸುಂದರ ವೇದಿಕೆ. ಹಿನ್ನೆಲೆ ವಾದ್ಯಗಾರರ ಗುಂಪು. ಸುಮಧುರ ಗಾಯನ. ಮೈ ಮರೆತು ಹಾಡುತ್ತಿದ್ದಾಳೆ ಗಾಯಕಿ ವಸುಂಧರ. ಹಳೆಯ ಹಿಂದಿ ಹಾಡು "ಕುಹೂ ಕುಹೂ ಬೋಲೇ ಕೊಯಾಲಿಯ", ಗಾಯಕಿ ಲತಾ ಮಂಗೇಶ್ಕರ್ ಹಾಡಿದ ಸುಪ್ರಸಿದ್ಧ ಗೀತೆ. ಸ್ವತಃ ಲತಾ ಮಂಗೇಶ್ಕರ್ ನಿಂತು ಹಾಡುತ್ತಿರುವ ಅನುಭವ ಪ್ರೇಕ್ಷಕರಿಗೆ. ಜೋರಾದ ಕರತಾಡನದಿಂದ ಗಾಯನ ಮುಗಿದಾಗ, ಅದೇ ಹಾಡು ಗುನುಗುತ್ತಾ ವೇದಿಕೆಯಿಂದ ಇಳಿಯುತ್ತಿದ್ದ ಗಾಯಕಿಗೆ ಕಾಲು ಜಾರಿದ ಅನುಭವ, ದೊಪ್ಪನೆ ಬಿದ್ದ ಸದ್ದು.

"ಲೇ ವಸು, ಏಳು ಮೇಲೆ. ಕನಸಲ್ಲೂ ಎಷ್ಟು ಸೊಗಸಾಗಿ ಹಾಡ್ತಾ ಇದ್ದೆ", ಗಂಡ ಶಂಕರನ ಧ್ವನಿ. ಮಂಚದಿಂದ ಕೆಳಗೆ ಬಿದ್ದ ವಸುಂಧರಾಳಿಗೆ ಬೆಳಗಾಗಿದ್ದು ಅರಿವಾಗಿ ತಾನು ಇಷ್ಟು ಹೊತ್ತು ಕಂಡದ್ದು ಕನಸು ಎನ್ನುವ ಅನುಭವವಾಗಿ ನಗಬೇಕೋ ಅಳಬೇಕೋ ತಿಳಿಯಲಿಲ್ಲ. ಹಾಗೆ ಮಂಚಕ್ಕೆ ಒರಗಿ ಕುಳಿತು, ತೊಟ್ಟಿದ್ದ ಬಟ್ಟೆ ಸರಿ ಮಾಡಿಕೊಂಡು ಎದ್ದಳು. ಅರೆ 7:00 ಘಂಟೆ ಆಗೋಯ್ತು, ಇವರು ಒಂಬತ್ತಕ್ಕೆ ಕೆಲಸಕ್ಕೆ ಹೋಗಬೇಕು. ಮಕ್ಕಳಿಗೆ ಇವರಿಗೆ ತಿಂಡಿ, ಊಟದ ಡಬ್ಬಿ ಆಗಬೇಕು, ಹಾಳು ನಿದ್ದೆ. ಕನಸು ಬೇರೆ ನೆಮ್ಮದಿ ಕೆಡಿಸೋಕೆ, ಅಂದುಕೊಳ್ಳುತ್ತಾ ಅಡುಗೆಮನೆ ಸೇರಿ ತನ್ನ ದಿನದ ಕೆಲಸ ಪ್ರಾರಂಭಿಸಿದಳು ವಸುಂಧರ. ಕೈ ಅಭ್ಯಾಸ ಬಲದಿಂದ ಬೆಳಗಿನ ಉಪಹಾರದ ತಯಾರಿಯಲ್ಲಿ ತೊಡಗಿತ್ತು. ಗಂಡನಿಗೆ, ಮಕ್ಕಳಿಬ್ಬರಿಗೂ ತಿಂಡಿ ಕೊಟ್ಟು ಮಧ್ಯಾಹ್ನದ ಊಟದ ಡಬ್ಬಿ ಕೈಯಲ್ಲಿಟ್ಟು, ಎಲ್ಲರಿಗೂ ಬಾಯ್ ಬಾಯ್ ಹೇಳಿ ಒಳಗೆ ಬಂದಾಗ ತಲೆ ಮತ್ತೆ ತನ್ನ ಕನಸಿನ ಬಗ್ಗೆ ಯೋಚಿಸತೊಡಗಿತು.

ನಾನು ಏಕೆ ಹಾಡುವುದನ್ನೇ ಬಿಟ್ಟುಬಿಟ್ಟೆ, ಬೆಂಗಳೂರಿನ ಮಹಾರಾಣಿ ಕಾಲೇಜಿಗೇ ಸಮಾಪ್ತಿ ಆಯ್ತೆ ನನ್ನ ಗಾಯನದ ಪಯಣ. ಅದೆಷ್ಟು ಬಹುಮಾನಗಳು, ಬಿರುದುಗಳು, ಪದಕಗಳು ತನ್ನ ಪಾಲಿಗೆ. ನಾಲ್ಕೈದು ವರ್ಷ ಕಾಲೇಜಿನ ಜೀವನದಲ್ಲಿ. "ಮಿಸ್ ಮೆಲೋಡಿ ಆಫ್ ಮೈಸೂರ್", "ಗಾನಕೋಗಿಲೆ" ಹೀಗೆ ಅನೇಕ ಬಿರುದುಗಳನ್ನು ಪಡೆದು ಕಾಲೇಜಿನಲ್ಲಿ ಎಲ್ಲರ ಮೆಚ್ಚುಗೆಗೆ ಪಾತ್ರಳಾದರು, ಮನೆಯಲ್ಲಿ ಹಿರಿಯರಿಂದ ತನ್ನ ಕಲೆಗೆ ದೊರಕುತ್ತಿದ್ದ ಪ್ರೋತ್ಸಾಹ ನೆನೆಸಿಕೊಂಡಾಗ ಈಗಲೂ ಕಣ್ಣು ತುಂಬಿ ಬರುತ್ತಿತ್ತು ಅವಳಿಗೆ.

ವಸುಂಧರ ಬೆಳೆದಿದ್ದು ತುಂಬು ಕುಟುಂಬದಲ್ಲಿ ತಾಯಿ ವೈದೇಹಿ, ತಂದೆ ರಾಘವ್. ತಂದೆಗೆ ಹೊರ ಊರಿನಲ್ಲಿ ಕೆಲಸ. ಅಜ್ಜಿ ದೊಡ್ಡಪ್ಪ ಚಿಕ್ಕಪ್ಪ ಚಿಕ್ಕಮ್ಮ ಅತ್ತೆ ಮಾವ ಎಲ್ಲರೂ ಕುಟುಂಬದಲ್ಲಿ. ಎಲ್ಲರ ಮಕ್ಕಳೂ ಸೇರಿದಂತೆ ಹುಡುಗರ ದೊಡ್ಡ ಪಟಾಲಮ್ಮೇ ಇರುತ್ತಿತ್ತು ಮನೆಯಲ್ಲಿ. ಮಕ್ಕಳೆಲ್ಲ ಒಟ್ಟುಗೂಡಿ ಶಾಲೆಗೆ ಹೋಗುವುದು ಆಟ ಪಾಠ ಊಟ ಎಲ್ಲವೂ ಸಾಮೂಹಿಕ ಚಟುವಟಿಕೆಗಳೆ. ಸದಾ ಕಲರವ ಮೋಜಿನ ಜೀವನ ಶೈಲಿ ಬಾಲ್ಯದಲ್ಲಿ.

ಹೆಂಡತಿಯನ್ನು ನಡುವಯಸಿನಲ್ಲೇ ಕಳೆದುಕೊಂಡ ದೊಡ್ಡಪ್ಪ, ತಮ್ಮನ ಮಕ್ಕಳ ಜವಾಬ್ದಾರಿ ತಮ್ಮ ಮಕ್ಕಳೊಂದಿಗೆ ಹಮ್ಮಿಕೊಂಡು, ಓದುವ ಮತ್ತು ದೈನಂದಿನ ಚಟುವಟಿಕೆಗಳಲ್ಲಿ ಶಿಸ್ತು, ನಿಯಮದ ಪಾಠ ಕಲಿಸುತ್ತಿದ್ದರು. ಮಕ್ಕಳಿಗೆ ದೊಡ್ಡಪ್ಪನ ಮೇಲೆ ಪ್ರೀತಿ ಎಷ್ಟಿತ್ತೋ ಅಷ್ಟೇ ಅವರ ಬಗ್ಗೆ ಭಯ ಭಕ್ತಿ ಸಹ. ಮನೆಯಲ್ಲಿ ಹಿರಿಯರು ಆಚಾರ ವಿಚಾರಗಳಲ್ಲಿ ಹಳೇ ಕಾಲದ ಮಡಿವಂತಿಕೆಗೆ ಹೊರತಾಗಿರಲಿಲ್ಲ. ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ವಿಚಾರದಲ್ಲಿ ಮಾತ್ರ ಇಡೀ ಕುಟುಂಬದ್ದು ಒಂದೇ ನಿಲುವು. ಪ್ರತಿಯೊಬ್ಬರೂ ಪ್ರಯತ್ನಪಟ್ಟು ತಮ್ಮ ಕೈಲಾದಷ್ಟು ಮುಂದೆ ಓದಬೇಕು. ಎಲ್ಲರ

ಓದಿಗೂ ಹಿರಿಯರ ಪ್ರೋತ್ಸಾಹ ಸದಾ ಇರುತ್ತಿತ್ತು. ಬಾಲ್ಯದ ದಿನಗಳ ಹಬ್ಬ ಹರಿದಿನಗಳ ಸಂಭ್ರಮ ಇಂದೂ ವಸುಂಧರಳ ಕಣ್ಣಿಗೆ ಕಟ್ಟಿದಂತಿತ್ತು. ಸಣ್ಣ ವಯಸ್ಸಿನಿಂದಲೇ ಅಮ್ಮ, ಚಿಕ್ಕಮ್ಮನ ಹತ್ತಿರ ಹಾಡು ಕಲಿಯುತ್ತಿದ್ದ ಅವಳು ಸೊಗಸಾದ ಗಾಯಕಿ. ಹಿಂದಿ ಚಿತ್ರಗೀತೆಗಳ ಪ್ರಿಯೆ. ಹಿರಿಯರ ಕಣ್ಣು ತಪ್ಪಿಸಿ ರೇಡಿಯೋ ಸಿಲೋನ್‌ನಲ್ಲಿ ಸದಾ ಹಿಂದಿ ಹಾಡುಗಳ ಕಾರ್ಯಕ್ರಮಗಳು, ಬಿನಾಕ ಗೀತ್‌ಮಾಲ ಕೇಳುತ್ತಾ ತನ್ನ ಒಲವನ್ನು ಅವುಗಳ ಕಡೆ ಬೆಳೆಸಿಕೊಂಡಿದ್ದಳು.

ಈ ದೊಡ್ಡ ಕುಟುಂಬದಲ್ಲಿ ನಾಲ್ಕೈದು ಹೆಣ್ಣು ಮಕ್ಕಳಿಗೆ ಒಟ್ಟಿಗೆ ಸಂಗೀತ ಪಾಠ ಹೇಳಿಕೊಡಲು ಬರುತ್ತಿದ್ದ ಸುಬ್ಬಾಶಾಸ್ತ್ರಿಗಳಿಗೆ ವಸುಂಧರಳ ಕಂಠ ಮಾಧುರ್ಯ, ಕಲಿಕೆಯ ಪರಿ ಬೆರಗು ಮೂಡಿಸಿತು. ಶಾಲೆಯಲ್ಲಿ ಹಿಂದಿ ಚಿತ್ರಗೀತೆಗಳ ಸ್ಪರ್ಧೆಯಲ್ಲಿ ಮಾತ್ರ ಭಾಗವಹಿಸಿ ಬಹುಮಾನ ತರುತ್ತಿದ್ದುದನ್ನು ಕೇಳಿದಾಗ ಕೋಪ ಬರುತ್ತಿತ್ತು.

ಹಲವಾರು ಬಾರಿ ಈ ವಿಷಯ ದೊಡ್ಡಪ್ಪನ ಕಿವಿ ಮುಟ್ಟಿ ವಸುಂಧರಳಿಗೆ ಬೈಗಳು ತಪ್ಪುತಿರಲಿಲ್ಲ. ಆದರೆ ಆ ವಯಸ್ಸಿನಲ್ಲಿ ಲತಾ ಮಂಗೇಶ್ಕರ್ ಧ್ವನಿ ಅವಳಿಗೆ ಮೋಡಿ ಮಾಡಿತ್ತು, ಗಾಯಕಿಯ ಪ್ರತಿಯೊಂದು ಹಾಡುಗಳನ್ನೂ ಕಲಿತು ಎಲ್ಲರ ಮುಂದೆ ಶಾಲೆಯ ತರಗತಿಯಲ್ಲಿ ಹಾಡುವುದು ಬಹಳ ಇಷ್ಟವಾದ ಹವ್ಯಾಸವಾಗಿತ್ತು. ಶಾಲಾ ದಿನಗಳಲ್ಲಿ ಅವಳ ಈ ಚಟುವಟಿಕೆ ಮನೆಯವರ ಕಣ್ಣಿಗೆ ಅಷ್ಟು ಬಿದ್ದಿರಲಿಲ್ಲ. ಸ್ಪರ್ಧೆಗಳಲ್ಲಿ ಬಂದ ಬಹುಮಾನಗಳನ್ನೆಲ್ಲ ತನ್ನ ಬಟ್ಟೆಗಳ ನಡುವೆ ಬೀರುವಿನಲ್ಲಿ ಬಚ್ಚಿಟ್ಟು, ಪ್ರೋತ್ಸಾಹಿಸುತ್ತಿದ್ದ ತಾಯಿ ಚಿಕ್ಕಮ್ಮನಿಗೆ ಮಾತ್ರ ತೋರಿಸುತ್ತಾ ಖುಷಿಪಡುತ್ತಿದ್ದಳು ವಸುಂಧರ.

ಶಾಲಾ ಶಿಕ್ಷಣ ಮುಗಿದು ಕಾಲೇಜು ಸೇರುವಷ್ಟರಲ್ಲಿ ಸುಗಮ ಸಂಗೀತ, ಚಿತ್ರಗೀತೆಗಳು, ಜಾನಪದ ಗೀತೆಗಳು, ವಚನ ಸಾಹಿತ್ಯ, ಹಾಡುವ ಕಲೆಯಲ್ಲಿ ಎಲ್ಲರ ಮೆಚ್ಚುಗೆ ಗಳಿಸಿದಳು ವಸುಂಧರ. ಈ ದಿನಗಳಲ್ಲಿ ಬೀರುವಿನಲ್ಲಿ ಅಡಗಿದ್ದ ಅವಳ ಪ್ರತಿಭೆ ಅಪ್ರಯತ್ನವಾಗಿ ಹೊರಪ್ರಪಂಚದ ಕಣ್ಣಿಗೆ ಬೀಳುವಂತಾಯಿತು.

ರಾಜ್ಯ ಮಟ್ಟದ ಗಾಯನ ಸ್ಪರ್ಧೆಯಲ್ಲಿ ಕಾಲೇಜನ್ನು ಪ್ರತಿನಿಧಿಸಿ ಬಹುಮಾನ ಗೆದ್ದಾಗ, ನಗರದ ವೃತ್ತ ಪತ್ರಿಕೆಗಳಲ್ಲೆಲ್ಲ ಸುದ್ದಿಯಾದಳು ಗಾಯಕಿ, ಬಿರುದು ಬಹುಮಾನಗಳ ಸುರಿಮಳೆ. ಮನೆಯಲ್ಲಿ ಪತ್ರಿಕೆಯಲ್ಲಿ ಅವಳ ಹೆಸರು, ಚಿತ್ರ ನೋಡಿ ದೊಡ್ಡಪ್ಪ ದೂರ್ವಾಸ ಮುನಿಗಳ ಅಪರಾವತಾರದಂತೆ ಕೋಪ ತಾಳಿ ಗೌರವಸ್ತರ ಮನೆ ಹೆಣ್ಣು ಮಕ್ಕಳು ಈ ರೀತಿ ಹಾದಿ ಬೀದೀಲಿ ಹಾಡೋದು, ಮನೆ ಮರ್ಯಾದೆ ಬೀದಿಗೆ ಎಳೆಯೋ ಕೆಲಸ ಅಂತ ಬೈಯುತ್ತಾ ಕಾಲೇಜನ್ನು ಬಿಡಿಸುವ ಬೆದರಿಕೆ ಮುಂದೆ ಇಟ್ಟಿದ್ದರು. ಹಾಡುವುದಕ್ಕೂ, ಮನೆ ಗೌರವಕ್ಕೂ ಏನು ಸಂಬಂಧ?
ಗುರುಗಳ ಮಾತಲ್ಲಿ ಕಲೆ ದೇವರಿತ್ತ ವರ. ಈ ದೊಡ್ಡಪ್ಪನಿಗೆ ಇದರ ಬಗ್ಗೆ ಯಾಕಿಷ್ಟು ರೋಷ. ಅರ್ಥವಾಗದ ತರ್ಕ. ಮೌನದಲ್ಲಿ ಎಲ್ಲವನ್ನೂ ಸ್ವೀಕರಿಸಿದರೂ ಮನಸ್ಸಿಲ್ಲಿ ಒಂದು ರೀತಿಯ ಮೊಂಡುತನ ಆವರಿಸಿದಂತೆ ತನಗೆ ಸರಿ ಅನಿಸಿದ್ದನ್ನು ಮಾಡುವುದು ಅಭ್ಯಾಸವಾಗಿ ಹೋಗಿತ್ತು ಅವಳಿಗೆ. ಸ್ವಲ್ಪಮಟ್ಟಿಗೆ ಚಿಕ್ಕಪ್ಪನ ಸಾಂತ್ವನ, ಪ್ರೋತ್ಸಾಹದ ನುಡಿ ಧೈರ್ಯ ತುಂಬುತ್ತಿದ್ದವು.

ಕಾಲೇಜಿನ ವಿದ್ಯಾಭ್ಯಾಸದ ಕೊನೆಯ ಹಂತದಲ್ಲಿದ್ದಾಗ ಮುಂಬೈನಿಂದ ಬಂದ ಒಂದು ಪತ್ರ ಅವಳ ಜೀವನದ ದಿಕ್ಕನ್ನೇ ಬದಲಾಯಿಸಿತು. ಮುಂಬೈನಲ್ಲಿ ಪ್ರಸಿದ್ಧ ಹಿಂದಿ ಸಂಗೀತ ನಿರ್ದೇಶಕರೊಬ್ಬರು, ರಾಜ್ಯಮಟ್ಟದ ಸ್ಪರ್ಧೆಯಲ್ಲಿ ತೀರ್ಪುಗಾರರಾಗಿ ಬಂದಾಗ , ಅವಳ ಧ್ವನಿ ಮಾಧುರ್ಯ ಮೆಚ್ಚಿ, ತಮ್ಮ ಸ್ಟುಡಿಯೋಗೆ ಆಡಿಶನ್‌ಗೆ ಬರಲು ಆಹ್ವಾನ ನೀಡಿದ್ದರು. ಕಾಲೇಜಿನಲ್ಲಿ ಕೊನೆಯ ದಿನದ ಪರೀಕ್ಷೆಗಳನ್ನೆಲ್ಲ ಮುಗಿಸಿ ಮನೆಗೆ ಬಂದಾಗ ಕೈಗೆ ಸಿಕ್ಕ ಆ ಕಾಗದವನ್ನು

ಓದಿ ತಾಯಿಗೆ ತೋರಿಸುತ್ತಾ ಕುಣಿದಾಡಿದ್ದಳು ವಸುಂಧರ. ಹಿಂದಿನಿಂದ ಬಂದ ದೊಡ್ಡಪ್ಪ ಅವಳ ಕೈಯಿಂದ ಕಾಗದವನ್ನು ಕಿತ್ತುಕೊಂಡು, ಓದಿ, ಸಿಟ್ಟಿನಲ್ಲಿ ಅದನ್ನು ಪರಪರನೆ ಹರಿದು ಎಸೆದಾಗ ತಲೆತಲೆ ಚಚ್ಚಿಕೊಂಡು ಜೋರಾಗಿ ಅಳುತ್ತಿರುವ ಮಗಳು ಮತ್ತು ಕೋಪದಲ್ಲಿ ಗುಡುಗುತ್ತಾ ನಿಂತ ಭಾವನವರ ನಡುವೆ ಅಸಹಾಯಕಳಾಗಿ ನಿಂತಳು ತಾಯಿ, ವೈದೇಹಿ.

"ಇನ್ನು ನಿನ್ನ ಈ ಹುಚ್ಚು ಹಾಡುಗಾರಿಕೆ ವ್ಯವಹಾರವೆಲ್ಲ ನಿಲ್ಲಿಸು. ಡಿಗ್ರಿ ಮುಗೀತಲ್ಲ, ಮುಂದಿನ ವಾರ ನನ್ನ ಸ್ನೇಹಿತ ಮಗನೊಂದಿಗೆ ನಿನ್ನ ಮದುವೆಯ ಮಾತುಕತೆ ಆಡಲು ಬರುತ್ತಿದ್ದಾರೆ. ಜಾತಕ ಹೊಂದಿದೆ, ಎಲ್ಲಾ ಒಪ್ಪಿದರೆ ಇನ್ನು ಎರಡು ತಿಂಗಳಲ್ಲಿ ನಿನ್ನ ಮದುವೆ. ಇಷ್ಟು ದಿನ ಕಾಲೇಜು ಆಯ್ತು, ಈಗ ಅಮ್ಮ ಅಜ್ಜಿ ಅತ್ತೆಯ ಜೊತೆ ಸೇರಿ ಅಡುಗೆ, ಪೂಜೆ ಆಚಾರ ವಿಚಾರಗಳನ್ನು ಕಲಿ. ನಿಮ್ಮಪ್ಪನಿಗೂ ಕಾಗದದಲ್ಲಿ ಎಲ್ಲಾ ವಿಚಾರ ಬರೆದು ತಿಳಿಸಿದ್ದೇನೆ ಅವನು ಬರುತ್ತಿದ್ದಾನೆ. ಅಳು ನಿಲ್ಲಿ ಮುಂದಿನ ಕೆಲಸ ನೋಡು" ಅನ್ನುತ್ತಾ ಅಲ್ಲಿಂದ ದೊಡ್ಡಪ್ಪ ಸರಿದಾಗ, ಅಳುತ್ತಾ ಮೂಕ ಪ್ರೇಕ್ಷಕಿ ಅಮ್ಮನ ಮಡಿಲು ಸೇರಿದಳು ವಸುಂಧರ. *(ಮುಂದುವರೆಯುವುದು).*

***

ಹೆಬ್ಬಯಕೆ

– ಭ ರಾ ವಿ

ಅಕ್ಷರಗಡಲ ಮೊಗೆದು ಅಗಸ್ತ್ಯನಾಗುವಾಸೆ
ಧಾರೆಯ ರಭಸ ಜಟಾಜೂಟದೆ ಬಂಧಿಸಿ
ತಪಕೆ ನಿಂತವನಿಗೆ ಧಾರೆಯೆರೆಯುವಾಸೆ!
ಹರಿದು ಬೆರೆತು ಮುಕ್ತಿಗೊಯ್ಯುವಾಸೆ

ಭಾವ ಮೂಲದ ಬುಡಕೆ ರಾಮಬಾಣವ ಬಿಟ್ಟು
ಜೀವ ಸಾರವ ಸೋಸಿ ಹಿಡಿಯುವಾಸೆ
ಮಥನದಾ ಕಡೆಗೋಲನಾಸರೆಯು ನಾನಾಗಿ
ಅಮೃತ ಕುಂಭದ ಸಾರ ಹಂಚುವಾಸೆ

ಒದ್ದೆಯರಿವಿನ ತೇವವಾರುವಾ ಮುನ್ನವೇ
ಪದಪದದ ರೂಪಕವ ಬಿಡಿಸುವಾಸೆ
ದಂತಭಗ್ನಕೆ ಗುರುವು ಮನಸು ಮಾಡಿದರೇನು
ಸತ್ಯಸ್ಯ ಸತ್ಯ ಕಥೆ ಹೇಳುವಾಸೆ

ನನ್ನದೇ ಭಾಷೆಯಲಿ ನಿಮ್ಮದೇ ಭಾವವನು
ಸುವರ್ಣದಾ ಕಟ್ಟಿನಲಿ ಹಿಡಿಯುವಾಸೆ
ಹುತ್ತಗಟ್ಟಿದರೇನು ಧ್ಯಾನ ಚಿತ್ತೈಸುತಲಿ
ಎತ್ತೆತ್ತಲೂ ಹರಡಿ ಉಳಿಯುವಾಸೆ

***

ಮನಸಿಗಾಸರೆ ಕವಿತೆ...

– ಜಾನಕಿರಾಮ

ಜೀವನದ ಪರಿಧಿಯಲಿ ತನ್ನತನದರಿವಿರದೆ
ಕಣ್ಣೆವೆಯು ಕರಗಿರಲು ಕಂಬನಿಯ ಹರಿವಿರದೆ
ಕಾಲವಿಲ್ಲದ ಕಾಲ, ಹಸಿವು ತೀರದ ಸಾಲ
ಸಾಂತ್ವನಕು ಬರಗಾಲ, ಮನಸಿಗಾಸರೆ ಕವಿತೆ...

ತಾಯಿ ತಂದೆಯ ಮುತ್ತು ಮತ್ತೆ ಮಡದಿಯ ಮುತ್ತು
ಪ್ರೀತಿಯಲಿ ಪೋಣಿಸಿದ ನಗುಮೊಗಂಗಳ ಮುತ್ತು
ನಾನು ನೀನಿನ ಜಾಲ ಏನು ಬರೆಯದ ಫಾಲ
ಜಗವೆಂಬ ಜಂಜಾಲ ಮನಸಿಗಾಸರೆ ಕವಿತೆ...

ನಡುವಳಿಕೆ ತಿಳುವಳಿಕೆ, ಕೆಟ್ಟದರ ಮರುಕಳಿಕೆ
ಮರೆಸಲೆಂದೇ ನೋವ ಸೌಖ್ಯಗಳ ಬತ್ತಳಿಕೆ
ದೇವನುಸಿರಿನ ಮೂಲ ನೀತಿ ಇಬ್ಬದಿ ಶೂಲ
ಮನಸು ಮಾಯಾಲೋಲ ಮನಸಿಗಾಸರೆ ಕವಿತೆ...

ಮನಸು ಕನಸನು ಕಂಡು, ಕನಸು ಮನಸಲಿ ನಿಂದು
ಕನಸಿನಾ ವೇದಿಕೆಗೆ ಮನಸ ಕಥೆಯದು ಬಂದು
ದೇಹ ಚರ್ಮದ ಚೀಲ, ಒಳಗೆ ಲಜ್ಜಾ-ಶೀಲ
ಭೂತಗಳು ಪಾಂಚಾಲ, ಮನಸಿಗಾಸರೆ ಕವಿತೆ...

***

ಸುಂದರ ಸಂಡೂರು

– ಸ್ನೇಹ ಶಶಿಧರ

ಮೊನ್ನೆ ನಮ್ಮ ನಿವೃತ್ತ ಅಧಿಕಾರಿಯೊಬ್ಬರ ಆಹ್ವಾನದ ಮೇರೆಗೆ ದೂರದ ಬಳ್ಳಾರಿಗೆ ಹೊರೆಟೆವು. ಸಹೋದ್ಯೋಗಿಗಳು ಎಲ್ಲ ಸೇರಿ ಹಂಪಿ ಎಕ್ಸ್‌ಪ್ರೆಸ್‌ನಲ್ಲಿ ಪ್ರಯಾಣ ಬೆಳೆಸಿದೆವು. ರಾತ್ರಿ ಇಡೀ ಚುಕು ಬುಕು ಸದ್ದು, ತೊಟ್ಟಿಲು ಇಲ್ಲದಿದ್ದರೂ ಅಲುಗಾಟದ ನಡುವೆ ನಮಗೆ ನಿದ್ದೆ ಬಂದದ್ದು ಅಷ್ಟರಲ್ಲೇ. ಮುಂಜಾನೆ 5:30ರ ಸುಮಾರಿಗೆ ಬಳ್ಳಾರಿ ತಲುಪಿದೆವು. ನಮ್ಮನ್ನು ಎದುರುಗೊಳ್ಳಲು ಆತಿಥೇಯ ರಮೇಶ್‌ರವರು ಗಾಡಿಯೊಂದಿಗೆ ತಯಾರಿದ್ದರು. ಉಭಯ ಕುಶಲೋಪರಿ ವಿಚಾರಿಸಿಕೊಂಡು ನಮ್ಮನ್ನು ಒಂದು ಕೋಣೆಯಲ್ಲಿ ತಯಾರಾಗಲು ವ್ಯವಸ್ಥೆ ಮಾಡಿದರು. ಬೆಳಗಿನ ಕಾರ್ಯಕ್ರಮದ ಬಳಿಕ ಒಲ್ಲದ ಮನಸ್ಸಿನಿಂದ ಗಾಡಿ ಹತ್ತಿ ಕುಳಿತೆವು. ಬಳ್ಳಾರಿ ಎಂದರೆ ಬಿಸಿಲು ಮತ್ತು ಧೂಳು. ಈ ಮಧ್ಯೆ ಮಳೆ ಬೇರೆ! ಹೀಗಿರುವಾಗ 50 ಕಿಮೀ ಹೋಗಿ ಬರೋದು ಬೇಡವಾಗಿತ್ತು.

ಸಂಡೂರು – ಹೆಸರು ಕೇಳುತ್ತಿದ್ದಂತೆಯೇ ಬೆರಳುಗಳು ಫೋನಿನಲ್ಲಿ ಹುಡುಕಿದವು. ಚಿತ್ರಗಳಲ್ಲಿ ಎಲ್ಲವೂ ಸುಂದರವಾಗಿ ಕಾಣುತ್ತದೆ ಎಂದು ಮನಸ್ಸು ಮೂಗು ಮುರಿಯಿತು. ಗಣಿಗಾರಿಕೆಯ ಕೇಂದ್ರ ಬಿಂದು ಎಂದು ತಿಳಿದು ಇನ್ನಷ್ಟು ಹಿಂಜರಿಕೆಯಾಯಿತು. ತೋರಣಗಲ್ಲು ಹಾದಿಯಲ್ಲಿ ಬೃಹತ್ ಜಿಂದಾಲ್ ಪ್ರದೇಶ ನಮ್ಮನ್ನು ಸ್ವಾಗತಿಸಿತು. ಕಣ್ಣು ಹಾಯುವಷ್ಟು ದೂರ ಅವರದೇ ಸರಹದ್ದು. ಕೈಗಾರಿಕೋದ್ಯಮದಲ್ಲಿ ಮುಂಚೂಣಿಯಲ್ಲಿರುವ ಜಿಂದಾಲ್ ಕಂಪನಿ ಲಕ್ಷಾಂತರ ಮಂದಿಗೆ ಅನ್ನದಾತರು ಎಂದರೆ ತಪ್ಪಾಗಲಾರದು. ಅಷ್ಟರಲ್ಲಿ ನಮಗೆ ಹಕ್ಕಿಗಳ ಕಲರವ ಕೇಳಲು ಬೆರಗಾಗಿ ಕಿಟಕಿಯಾಚೆ ನೋಡಿದೆವು. ಸುತ್ತಲೂ ಬೆಟ್ಟ ಗುಡ್ಡಗಳು, ತುಂತುರು ಮಳೆಹನಿ, ಹಸಿರು ಸೀರೆ ಉಟ್ಟ ಪ್ರಕೃತಿಯ ಕಾಲು ತೊಳೆಯುತ್ತಿರುವ ತುಂಗೆಯ ತಂಗಿ ನಾರಿಹಳ್ಳ. ನಾವು ಎಲ್ಲಿದ್ದೇವೆ ಎಂದು ಮರೆಸುವಷ್ಟು ಅವರ್ಣನೀಯ ವಾತಾವರಣ. ನಮ್ಮೊಳಗಿನ ಎಲ್ಲ ಸಂದೇಹಗಳನ್ನು ದೂರಮಾಡಿದ ಪ್ರಕೃತಿ ಸೌಂದರ್ಯ. ಪ್ರಾಯಶಃ ಅದಕ್ಕೆ ಇರಬೇಕು, ಖ್ಯಾತ ಚಲನಚಿತ್ರ ನಿರ್ದೇಶಕ ಶ್ರೀ ಪುಟ್ಟಣ್ಣ ಕಣಗಾಲ್‌ರವರು ಇದನ್ನು "ಮಾನಸ ಸರೋವರ" ಎಂದದ್ದು!

ಮೋಡಗಳ ಚುಂಬನದಿಂದ ಗಿರಿಧಾಮ ನಾಚಿ ಸಣ್ಣಪುಟ್ಟ ಝರಿಗಳು ಸೂಸುತ್ತಿದ್ದವು. ನಮಗೆ ಕಾಶ್ಮೀರವನ್ನು ನೆನೆಸಿದ್ದು ಸತ್ಯ. ಮುಂದೆ ಕುಮಾರಸ್ವಾಮಿ ದೇಗುಲದ ಕಡೆಗೆ ಸಾಗಿದೆವು. 10ನೇ ಶತಮಾನದಲ್ಲಿ ರಾಷ್ಟ್ರಕೂಟರು ನಿರ್ಮಿಸಿದ್ದರಂತೆ. ಪಕ್ಕದಲ್ಲಿನ ಪಾರ್ವತಿ ಮಂದಿರವನ್ನು 8ನೇ ಶತಮಾನದಲ್ಲಿ ಚಾಲುಕ್ಯರು ನಿರ್ಮಿಸಿದ್ದರಂತೆ. ಪುರಾತನ ದೇವಾಲಯವಾದರೂ ಅಚ್ಚುಕಟ್ಟಾಗಿ ಬಣ್ಣಬಣ್ಣದ ಹೂಗಳ ಉದ್ಯಾನವನ್ನು ನಿರ್ವಹಿಸಿಕೊಂಡು ಬಂದಿದ್ದಾರೆ. ಪ್ರಾಕಾರದ ಕೆತ್ತನೆಗಳು ಶತಮಾನಗಳ ಕಥೆ ಹೇಳುತ್ತದೆ. ನಮ್ಮ ರಾಜ್ಯದ ಲಾಂಛನವನ್ನು ಒಂದು ಕಡೆ ಕಾಣಬಹುದು. ದೇವರ ಮೂರ್ತಿಗಳು ಕೇವಲ ಎಣ್ಣೆ ದೀಪದಲ್ಲಿ ಕಂಗೊಳಿಸುತ್ತಿದ್ದವು.

ಅಲ್ಲೇ ಕುಳಿತು ನಮ್ಮ ಅನುಭವವನ್ನು ಅರಗಿಸಿಕೊಳ್ಳುವ ಪ್ರಯತ್ನದಲ್ಲಿ ಇರುವಾಗ, ನಮ್ಮ ಸ್ನೇಹಿತರು ಹೇಳಿದರು. 2017ರಲ್ಲಿ ಈ ಕಣಿವೆಯಲ್ಲಿ 12 ವರ್ಷಕ್ಕೊಮ್ಮೆ ಅರಳುವ ನೀಲಿ ಕುರಿಂಜಿ ಹೂವು ಅರಳಿತ್ತಂತೆ. ಈ ಪರಿಯ ಅಚ್ಚರಿಗಳನ್ನು ಹೊಂದಿರುವ ಸಂಡೂರಿನ ಬಗ್ಗೆ ಸ್ಕಂದ ಪುರಾಣದಲ್ಲಿ ಸ್ಕಂದಗಿರಿ ಎಂದು ಉಲ್ಲೇಖಿಸಲಾಗಿದೆಯಂತೆ. ನಮ್ಮ ಅರಿವು, ಜ್ಞಾನದ ಬಗ್ಗೆ ನಾಚಿಗೆಯಾಗಿ ವಾಪಸ್ ಬಳ್ಳಾರಿಯ ಕಡೆಗೆ ಸಾಗಿದೆವು. ದಾರಿಯಲ್ಲಿ ಮಹಾತ್ಮರ ಒಂದು ಸ್ಮಾರಕವಿದೆ. ಸ್ವಾಮಿಮಲೈ ಕಾಡಿನ ವಿಹಂಗಮ ನೋಟವನ್ನು ಕಂಡು ಮಹಾತ್ಮ ಗಾಂಧೀಜಿ 1934ರಲ್ಲಿ ಹೇಳಿದ್ದರಂತೆ, "See Sandur in September" ಎಂದು. ಆದರೆ ಈ ಬಾರಿಯ ಮುಂಗಾರಿನ ಕೃಪೆಯಿಂದ ಸ್ವರ್ಗದ ತುಣುಕಿನಂತೆ ಕಾಣುವ ಪ್ರಕೃತಿಯ ಮಡಿಲಲ್ಲಿ ಮಿಂದು ತೇಲುವ ಅನುಭವ ಜುಲೈನಲ್ಲೇ ನಮ್ಮದಾಯಿತು.

ನಿಜಕ್ಕೂ ಅನಿರೀಕ್ಷಿತ, ಅಭೂತಪೂರ್ವ, ಅವಿಸ್ಮರಣೀಯ ಪ್ರವಾಸ ಮಾಡಿಸಿದ ಶ್ರೀ ರಮೇಶ್‌ರವರಿಗೆ ನಾವು ಋಣಿಯಾಗಿರಬೇಕು. ಬಳ್ಳಾರಿಯ ಊಟ ಖಾರ, ಜನರ ಮನಸ್ಸು ಸಿಹಿ. ಅಗಾಧವಾದ ಸವಿನೆನಪುಗಳನ್ನು ಸೆರೆ ಹಿಡಿಯುವ ಪ್ರಯತ್ನದೊಂದಿಗೆ ನಮ್ಮೂರಿಗೆ ಹಿಂತಿರುಗಿದೆವು.

***

ಬಂಧು

– ಪ್ರಮೋದಾ ಮೂರ್ತಿ

ಅಬ್ಬ ಟಿವಿ–ಯ ಸದ್ದು ಅಪ್ಪಳಸುತ್ತಿದೆ...
ಸದ್ದು ಬೇಡ ಎನಲಾರೆ
ಪಾಪ! ಅವಳೂ ದಿನ ಸವೆಸಬೇಕಲ್ಲ ...

ಜೀವಂತ ಶವದಂತಿರುವ ನನ್ನ ಶುಶ್ರೂಷೆ
ಅವಳ ಜವಾಬ್ದಾರಿ
ನಳಕೆ ಜೋಡಿಸಿದ ತುಂಬಿದ ಚೀಲಗಳ
ತೆರವು ಮಾಡಿ ಮಗ್ಗುಲು ಬದಲಿಸುವುದು,
ಮೈ ಒರೆಸಿ, ತುತ್ತನೀಡುವುದು ಎಲ್ಲವನ್ನೂ
ಮುಗುಳ್ನಗೆಯ ತೊಡುಗೆಯೊಂದಿಗೆ
ಮಾಡುವ ಸಹೃದಯಿ ಅವಳು!

ಸಿಗುವ ಬಿಡುವಿನಲಿ
ಫೋನ್, ಟಿ ವಿ ಎರಡೇ ಅವಳ ಪ್ರಪಂಚ
ಅವಳ ಕರ್ಮವೊ, ಇಲ್ಲ ಅವಳ ಧರ್ಮವೊ,
ಅವಳ ನೆಲೆ ಇಂದು ಇಲ್ಲಾದರೆ ನಾಳೆ ಇನ್ನೆಲ್ಲೋ
ಯಾಂತ್ರಿಕ ಬದುಕಾದರೇನಂತೆ
ಭಾವನೆಗೆ ಬರವಿಲ್ಲ
ಬಳಿ ಸುಳಿಯದ ಮಕ್ಕಳ ಕೊರತೆ
ನೀಗಲು ಬಂದ ನೈಟಿಂಗೇಲಳಂತೆ ಅವಳು
ಅಪರೂಪವೆಂಬಂತೆ!

ಅದೇ ಛಾವಣಿ, ಅದೇ ಗೋಡೆ
ಅದೇ ಮಂಚ, ಅದೇ ಹಾಸಿಗೆ
ಅಂದು ಆಪ್ತವಾಗಿದ್ದ ಜಾಗ
ಇಂದು ಬೇಡವೆನಿಸುತಿದೆ
ಬದುಕು ಭಾರವೆನಿಸುತಿದೆ
ನಿಟ್ಟುಸಿರು ಹೊರಸೂಸಿ
ಕಣ್ಣು ತೇಲುತ್ತಲಿದೆ...

ಅರೆ! ಇದೇನು?
ನನ್ನಿಷ್ಟ ದೈವ ನನ್ನ ಮುಂದೆ!
ಬಹಳ ದಿನವಾಯ್ತು ತಂದೆ ಎಂದೆ!
ಚಾಚಿದ ಕೈಯನ್ನು ಮೃದುವಾಗಿ ಅಮುಕುತ್ತಿದ್ದಾನೆ
ಆಹಾ! ಎಂತಹ ಪುಲಕ
ಮೈಮನಗಳೆರಡೂ ಹಗುರ ಹಗುರ!
ಕೆನ್ನೆಯ ಮೇಲಷ್ಟು
ಉರುಳುವ ಕಣ್ಣೀರು!

ಅದೇಕೊ
ಎದೆಯನೊತ್ತಿ ಒತ್ತಿ ಬರುವ
ನಿಲ್ಲದ ಬಿಕ್ಕು!
ಅರೆ! ಮುಖನೇವರಿಸಿ ಎರಡು
ಕೈಯಿಂದ ಎತ್ತಿ ಕೂರಿಸುತಿರುವವರಾರು?
ನೀರನುಣಿಸುತ್ತ ಪಕ್ಕದಲಿ ಇರುವವರು ಯಾರು?

ಗುಟುಕುಗಳು ಗಂಟಲಲ್ಲಿ
ಮೆಲ್ಲಮೆಲ್ಲಗೆ ಇಳಿದಂತೆ
ಜೀವ ತೇಲುತ್ತಲಿದೆ
ಒಮ್ಮೆ ಗಾಳಿಯಲಿ...
ಇನ್ನೊಮ್ಮೆ ನೆಲದಲ್ಲಿ ಮಗದೊಮ್ಮೆ ...
ಮರಳ ಹರವಿನಲಿ

ಗುಟುಕು ಗುಟುಕೂ ಅಮೃತದ ಹನಿಯಂತೆ
ಮರುಳು ಗಾಡಿನಲಿ
ಓಯಸಿಸ್ ಎದುರು ಬಂದಂತೆ!

***

ನಾ ಮೆಚ್ಚಿದ ಕನ್ನಡ ಪತ್ತೇದಾರಿ ಕಾದಂಬರಿಕಾರರು

– ವೆಂಕಟೇಶ ಕಾಮತ್

ನನ್ನ ಚಿಕ್ಕಂದಿನ ದಿನಗಳಲ್ಲಿ ನನ್ನ ಅಮ್ಮ ಬಹಳ ಕನ್ನಡ ಕಾದಂಬರಿಗಳನ್ನು ಓದುತ್ತಿದ್ದರು. ತ್ರಿವೇಣಿ, ಎಂ.ಕೆ.ಇಂದಿರಾ, ಅನುಪಮಾ ನಿರಂಜನ, ವಾಣಿಯವರ ಸರಳವಾದ ಕಾದಂಬರಿಗಳು ಒಂದೆಡೆಯಾದರೆ, ಗಹನವಾದ ಶಿವರಾಮ ಕಾರಂತ, ಎಸ್.ಎಲ್. ಭೈರಪ್ಪ, ವಿ.ಎಂ.ಇನಾಂದಾರ್, ಯು.ಆರ್.ಅನಂತಮೂರ್ತಿ, ಆಲನಹಳ್ಳಿ ಕೃಷ್ಣ ಇವರುಗಳ ಕಾದಂಬರಿಗಳನ್ನೂ ಹೆಚ್ಚು ಹೆಚ್ಚು ಮೆಚ್ಚುತ್ತಿದ್ದರು. ಆದರೆ ತಾಯಿಯವರಾಗಲೀ, ನನ್ನ ಅಕ್ಕನಾಗಲೀ ಪತ್ತೇದಾರಿ ಕಾದಂಬರಿಗಳನ್ನು ಓದುತ್ತಿದ್ದ ನೆನಪು ನನಗಿಲ್ಲ. .

ನನ್ನ ತಂದೆಯವರು ಮಾತ್ರ ಪತ್ತೇದಾರಿ ಕಾದಂಬರಿಗಳನ್ನು ಬಹಳವೇ ಆಸ್ಥೆಯಿಂದ ಓದುತ್ತಿದ್ದರೆಂದು ನಂತರ ನನಗೆ ತಿಳಿದುಬಂತು. ನಾನು ಕನ್ನಡ ಕಾದಂಬರಿಗಳನ್ನು ಓದಿದ್ದು ಕಡಿಮೆ ಮತ್ತು ಮೊದಮೊದಲು ಓದಿದ್ದು ಇಂಗ್ಲಿಷ್ ಪತ್ತೇದಾರಿ ಕಾದಂಬರಿಗಳು– ಜೇಮ್ಸ್ ಹೆಡ್ಲಿ ಚೇಸ್, ಅಗಾಥಾ ಕ್ರಿಸ್ಟಿ, ಮತ್ತಿತರ ಕೆಲವರು.


1980ರ ದಶಕದ ದ್ವಿತೀಯಾರ್ಧದಲ್ಲಿ ದೂರದರ್ಶನ ಬಂದು ಅದರಲ್ಲಿ ಪತ್ತೇದಾರಿ ಧಾರಾವಾಹಿ 'ಅದಾಲತ್' ಪ್ರಾರಂಭವಾದಾಗ ನನಗೆ ನನ್ನ ತಂದೆಯವರ ಪತ್ತೇದಾರಿ ಕಥೆಗಳ ಒಲವು ತಿಳಿದು ಬಂದಿತು. ಅವರು ಅದನ್ನು ಬಹಳವೇ ಕಾತುರದಿಂದ ಕಾದು, ಕೊಲೆಪಾತಕನ ಬಗ್ಗೆ ತಮ್ಮ ಊಹೆ ಸರಿಯಾಗಿದ್ದಲ್ಲಿ ಅವರ ಮೊಗದ ಮೇಲೆ ಬರುವ ಸಂತಸ, ಖುಷಿ ನಾನು ಊಹಿಸಿಯೇ ಇರಲಿಲ್ಲ. ಅವರ ಬಾಯಿಂದ ನಾನು ಮೊದಲಸಲ ಪುರುಷೋತ್ತಮನ ಸಾಹಸ, ನರಸಿಂಹಯ್ಯನವರ ಕಾದಂಬರಿಗಳ ಬಗ್ಗೆ ಕೇಳಿದೆ.

ಮುಂದೆ 'ಮಯೂರ' ಮಾಸಿಕ ಸಂಚಿಕೆಗಳಲ್ಲಿ ಟಿ.ಕೆ. ರಾಮರಾವ್‌ರವರ ಪತ್ತೇದಾರಿ ಕಾದಂಬರಿಗಳು ಎರಡು ಭಾಗಗಳಲ್ಲಿ ಪ್ರಕಟಗೊಳ್ಳಲು ಪ್ರಾರಂಭಗೊಂಡವು. ನನ್ನ ನೆನಪಿನ ಪ್ರಕಾರ ಇವು ನಾ ಓದಿದ ಮೊದಲ ಪತ್ತೇದಾರಿ ಕಥೆಗಳು. ಇವು ಕಥೆಗಳು ಮಾತ್ರವಲ್ಲ, ಅದ್ಭುತ ಹೆಸರುಗಳು ಕೂಡ – .ರಾಣಿ ಜೇನು, ಸೀಳು ನಕ್ಷತ್ರ, ತೋರು ಬೆರಳು, ಸೇಡಿನ ಹಕ್ಕಿ ಇತ್ಯಾದಿ.

ಕನ್ನಡದಲ್ಲಿ ಆರಂಭಿಕ ಪತ್ತೇದಾರಿ ಕಥೆಗಾರರ ಬಗ್ಗೆ ಶೋಧಿಸಿದಾಗ ನನಗೆ ವೈಕಿ, ಗೂಗಲ್‌ಗಳಲ್ಲಿ ಕಂಡ ಹೆಸರು 'ಬಾಲಸರಸ್ವತಿ' ಮೊದಲ ಪತ್ತೇದಾರಿ ಕಾದಂಬರಿ. ಇದು ಲೇಖಕಕರ ಹೆಸರೋ, ಕೃತಿಯ ಹೆಸರೋ ಎಂದು ತಿಳಿಯಲು ನಾನು ಮಾಡಿದ ಪ್ರಯತ್ನ ವಿಫಲ. ಮುಂದೆ ನನಗೆ ತಿಳಿದದ್ದು ಮೊದಮೊದಲು ಪತ್ತೇದಾರಿ ಕಾದಂಬರಿ ಬರೆದವರು ಅ ನ ಕೃ., ಗುಂಡಾ ಶಾಸ್ತ್ರಿ ಹಾಗೂ ಗುರುರಾಜ ಆಚಾರ್ ಅವರುಗಳು.. ಇವರ ಕೃತಿಗಳನ್ನು ಅಂದಿನ ದಿನಗಳಲ್ಲಿ ಪ್ರಿಂಟ್ ಮಾಡುತ್ತಿದ್ದ ಪ್ರಕಾಶಕ, ಟಿ.ನಾರಾಯಣ ಅಯ್ಯಂಗಾರ್.

ಅದೊಂದು ಅಡ್ಡಗೋಡೆಯ ಬಳಿ ಬಂದು ನಿಂತಂತೆ, ಮುಂದೆ ಯಾವ ಮಾಹಿತಿಯೂ ದೊರೆಯಲಿಲ್ಲ.

ಈಗ ನಾ ಕಂಡಂತೆ 60–70ರ ದಶಕದ, ನಾನು ಶಾಲಾ ಕಾಲೇಜು ದಿನಗಳಲ್ಲಿ ಓದಿದ ಪತ್ತೇದಾರಿ ಸಾಹಿತ್ಯದ ಪ್ರಸಿದ್ಧಿ ಪಡೆದ ಮೂವರು ಲೇಖಕರು – 1. ಎನ್. ನರಸಿಂಹಯ್ಯ, 2. ಸುದರ್ಶನ ದೇಸಾಯಿ, 3. ಟಿ.ಕೆ.ರಾಮರಾವ್.
ಆ ಮೂವರ ಕಿರುಪರಿಚಯ ಹೀಗಿದೆ:



1. ಎನ್. ನರಸಿಂಹಯ್ಯ

(ಜನನ : 18 ಸೆಪ್ಟೆಂಬರ್ 1925 – ಮರಣ: 25 ಡಿಸೆಂಬರ್ 2011)

ಎನ್.ನರಸಿಂಹಯ್ಯನವರು, 1925ರ ಸೆಪ್ಟೆಂಬರ್ 18ರಂದು ಬೆಂಗಳೂರಿನಲ್ಲಿ ಜನಿಸಿದರು. ತಂದೆ ಸಿ.ನಂಜಪ್ಪನವರು, ಚಿತ್ರದುರ್ಗದ ಆಶುಕವಿ. ತಂದೆಯವರಿಂದ ಅವರು ಸ್ಫೂರ್ತಿಗೊಂಡು ಸಾಹಿತ್ಯ ವಲಯದಲ್ಲಿ ಹೆಚ್ಚು ಸಾಧನೆ ಮಾಡಲು ಸಹಾಯವಾಯಿತು. 1936ನೆಯ ಇಸವಿಯಲ್ಲಿ ಇವರು ನಾಲ್ಕನೆಯ ತರಗತಿಯಲ್ಲಿ ಓದುತ್ತಿರುವಾಗಲೇ ಅವರ ತಂದೆ ತೀರಿಕೊಂಡರು. ಇವರಿಗೆ ಆಶ್ರಯ ನೀಡಿದ ಚಿಕ್ಕಪ್ಪ ಮುಂದೆ ಒಂದೇ ವರ್ಷದಲ್ಲಿ ತೀರಿಕೊಂಡರು. ಇಲ್ಲಿಗೆ ಇವರ ವಿದ್ಯಾಭ್ಯಾಸವು ಮುಕ್ತಾಯಗೊಂಡು ಇವರು 1938ರಲ್ಲಿ ತಮ್ಮ ತಾಯಿಯ ತವರೂರಾದ ಚಿಕ್ಕಮಗಳೂರಿಗೆ ತೆರಳಿ, ತಮ್ಮ 13ನೆಯ ವಯಸ್ಸಿನಲ್ಲಿಯೇ ಜೀವನ ನಿರ್ವಹಣೆಗೆ ಕೆಲವು ಉಪಕಸುಬುಗಳನ್ನು ಮಾಡಬೇಕಾಯಿತು. ಒಂದು ವರ್ಷದ ಬಳಿಕ ಆ ಕೆಲಸ ಬಿಟ್ಟು ಕಾಫೀ ತೋಟದಲ್ಲಿ ಕಾರ್ಮಿಕರಾಗಿ ಕೆಲಸಮಾಡಿದರು. ಕೈಗಾರಿಕಾ ಪಾಠಶಾಲೆಯಲ್ಲಿ 3 ವರ್ಷಗಳ ತರಬೇತಿಗೆ ಸೇರಿಕೊಂಡರು. 1942ರಲ್ಲಿ ಬಸ್ ಕ್ಲೀನರ್ ಆಗಿ ಕೆಲಸಕ್ಕೆ ಸೇರಿಕೊಂಡವರು 1944ರಲ್ಲಿ ಬಸ್ ಕಂಡಕ್ಟರ್ ಆದರು. 1947ರಲ್ಲಿ ನಾಗರತ್ನಮ್ಮನವರ ಜೊತೆ ಇವರ ಮದುವೆಯಾಯಿತು. 1948ರಲ್ಲಿ ಚಿಕ್ಕಮಗಳೂರು ಬಿಟ್ಟು ಬೆಂಗಳೂರಿಗೆ ಬಂದು ಲಾರಿಯಲ್ಲಿ ಕೆಲಸಕ್ಕೆ ಸೇರಿಕೊಂಡರು. ಅಲ್ಲಿರುವಾಗಲೆ ತಮ್ಮ ಬಾಡಿಗೆ ಮನೆಯಲ್ಲಿಯೇ ವಾಚನಾಲಯ ಪ್ರಾರಂಭಿಸಿ, ಬಾಲಸರಸ್ವತಿ, ವೆಂಕಟಾಚಾರ್ಯ, ಗುರುರಾಜಾಚಾರ್ಯ, ಗುಂಡಾಶಾಸ್ತ್ರಿ ಮೊದಲಾದವರ ಪತ್ತೇದಾರಿ ಕಾದಂಬರಿಗಳನ್ನು ಓದತೊಡಗಿದರು. ಪ್ರಿಂಟಿಂಗ್ ಪ್ರೆಸ್‌ನಲ್ಲಿ ಕೆಲಸದಲ್ಲಿದ್ದಾಗ ಓದುವ ಹವ್ಯಾಸ ಬೆಳೆಸಿಕೊಂಡರು. ಆಗ ಎಂ.ರಾಮಮೂರ್ತಿ ಎಂಬ ಹೆಸರಾಂತ ಪತ್ತೇದಾರಿ ಕಾದಂಬರಿಕಾರರಿದ್ದರು. ನರಸಿಂಹಯ್ಯನವರು ಅವರಿಂದ ಪ್ರೇರಿತರಾದರು. ತಮ್ಮ ಕಾದಂಬರಿಯ ಕಥಾವಸ್ತುಗಳನ್ನು ವಿಭಿನ್ನವಾಗಿ ಆರಿಸಿಕೊಂಡಿದ್ದರು. ನಿಗರ್ವಿ, ವಿನಯಶೀಲರು. ಇಂಗ್ಲೀಷ್ ಸಾಹಿತ್ಯ ಹೆಚ್ಚಾಗಿ ಓದಿದವರಲ್ಲ.

1952ರಲ್ಲಿ ಎನ್.ನರಸಿಂಹಯ್ಯನವರು ತಮ್ಮ ಪ್ರಥಮ ಪತ್ತೇದಾರಿ ಕಾದಂಬರಿ ಪತ್ತೇದಾರ ಪುರುಷೋತ್ತಮ ಬರೆದರು. ಅದನ್ನು ಪ್ರಕಟಿಸಿದವರು ಟಿ.ನಾರಾಯಣ ಅಯ್ಯಂಗಾರ್. ನಂತರ ಎನ್.ನರಸಿಂಹಯ್ಯನವರು ಮುನ್ನೂರೈವತ್ತಕ್ಕೂ ಹೆಚ್ಚು ಪತ್ತೇದಾರಿ ಕಾದಂಬರಿಗಳನ್ನೂ, ಐವತ್ತಕ್ಕೂ ಹೆಚ್ಚು ಸಾಮಾಜಿಕ ಕಾದಂಬರಿಗಳನ್ನೂ ನೀಡಿದ್ದಾರೆ. ಅವರ ಕಾದಂಬರಿ 'ಭಯಂಕರ ಬೈರಾಗಿ' ಎಂಟು ಬಾರಿ ಮರುಮುದ್ರಣಗೊಂಡಿದೆ. ಅವರ ಕಾದಂಬರಿಗಳಲ್ಲಿ ದೇಸಿ ಸೊಗಡು, ಹಾಗೂ ಮಣ್ಣಿನ ವಾಸನೆಯನ್ನು ಕಾಣಬಹುದು.

ಐವತ್ತು-ಅರವತ್ತರ ದಶಕದಲ್ಲಿ ಹದಿಹರೆಯದ ಹುಡುಗರು ನರಸಿಂಹಯ್ಯನವರ ಕಾದಂಬರಿಗಳಿಂದ ಕನ್ನಡ ಪುಸ್ತಕ ಓದುವ ಹವ್ಯಾಸ ಪ್ರಾರಂಭಿಸುತ್ತಿದ್ದರು.

.

ಎನ್. ನರಸಿಂಹಯ್ಯನವರು ಡಿಸೆಂಬರ್ 25, 2011ರಂದು ಬೆಂಗಳೂರಿನಲ್ಲಿ ಅಲ್ಪ ಕಾಲದ ಅನಾರೋಗ್ಯದ ನಂತರ ನಿಧನಹೊಂದಿದರು.



2. ಸುದರ್ಶನ ದೇಸಾಯಿ

(ಜನನ: 14 ಜನವರಿ 1945 – ಮರಣ: 31 ಜುಲೈ 2012)


ಸುದರ್ಶನ ಕೃಷ್ಣರಾವ್ ಮುತಾಲಿಕ್ ದೇಸಾಯಿಯವರು ಜನವರಿ 14, 1945ರಂದು ಜನಿಸಿದರು. ತಂದೆ ಕೃಷ್ಣರಾವ್, ತಾಯಿ ರಾಧಾಬಾಯಿ. ಸುದರ್ಶನ ದೇಸಾಯಿಯವರು ಧಾರವಾಡದಲ್ಲಿಯೇ ತಮ್ಮ ಪ್ರಾಥಮಿಕ, ಪ್ರೌಢ ಶಿಕ್ಷಣ ಹಾಗೂ ಟಿಸಿ.ಎಚ್. ತರಬೇತಿ ಮುಗಿಸಿ, 'ಹಿಂದಿ ವಿಶಾರದ' ಪದವಿ ಪಡೆದರು. ಧಾರವಾಡ ವಲಯದ ಗುಲಗಂಜಿಕೊಪ್ಪದ ಸರಕಾರಿ ಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಆರಂಭಿಸಿ 39 ವರ್ಷ ಸೇವೆ ಸಲ್ಲಿಸಿ, ಹುಬ್ಬಳ್ಳಿ ಉಣಕಲ್ಲ ಮಾದರಿ ಶಾಲೆಯಲ್ಲಿ ಸೇವೆ ಸಲ್ಲಿಸಿ ಸ್ವಯಂ ನಿವೃತ್ತಿ ಪಡೆದಿದ್ದರು.

ಮೂಲತಃ ಸಣ್ಣಕಥೆಗಾರರಾದ ಸುದರ್ಶನ ದೇಸಾಯಿ ಅವರು, ಹಾಸ್ಯ ಲೇಖನ, ಬಾನುಲಿ ನಾಟಕ, ಸಾಮಾಜಿಕ, ವೈಜ್ಞಾನಿಕ, ಮನೋವೈಜ್ಞಾನಿಕ ಕಾದಂಬರಿಗಳನ್ನು ರಚಿಸಿದ್ದಾರೆ. ಹೆಚ್ಚು ಪತ್ತೇದಾರಿ ಕಾದಂಬರಿಗಳನ್ನು ರಚಿಸಿದ್ದಾರೆ. ಅವರ ಹಳದಿ ಚೇಳು, ಲೆದರ್ ಸೂಟ್‌ಕೇಸ್, ಎಂಟೆದೆ ಭಂಟ (ಚಲನಚಿತ್ರವಾಗಿದೆ) ಸೇರಿದಂತೆ ಅನೇಕ ಪತ್ತೇದಾರಿ ಕಾದಂಬರಿಗಳು ಪ್ರಸಿದ್ಧಿ ಪಡೆದಿವೆ. ಇವುಗಳಲ್ಲಿ 'ಹಳದಿ ಚೇಳು' ಕಾದಂಬರಿಯಂತೂ ಅಪಾರ ಜನಪ್ರಿಯತೆ ಗಳಿಸಿತ್ತು. ಹೀಗಾಗಿ ಅವರು ತಮ್ಮ ನಿವಾಸಕ್ಕೆ 'ಹಳದಿ ಚೇಳು' ಎಂದೇ ಹೆಸರಿಟ್ಟಿದ್ದರು.

ಕೇಂದ್ರ ಸರ್ಕಾರದಿಂದ ಆದರ್ಶ ಶಿಕ್ಷಕ ಪ್ರಶಸ್ತಿಯನ್ನು ಪಡೆದಿದ್ದ ಸುದರ್ಶನ ದೇಸಾಯಿ ಅವರು ಸಾಹಿತ್ಯ ಸೇವೆಗಾಗಿ ರಾಜ್ಯೋತ್ಸವ ಪ್ರಶಸ್ತಿಯೂ ಸೇರಿದಂತೆ ಹಲವಾರು ಗೌರವಗಳನ್ನು ಪಡೆದಿದ್ದರು. ಅವರ ಸಾಧನೆಯನ್ನು ಗುರುತಿಸಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಧಾರವಾಡ ನಗರದ ಸಾರಸ್ವತಪುರ ಬಳಿಯ ಕಾಲೋನಿಗೆ 'ಸುದರ್ಶನ ದೇಸಾಯಿ ಕಾಲೋನಿ' ಎಂದೇ ನಾಮಕರಣ ಮಾಡಿದೆ.

ಜೈಲಿನ ಕಥೆಗಳನ್ನು ಆಧರಿಸಿ 'ಸುಧಾ' ವಾರಪತ್ರಿಕೆಗೆ ಬರೆದ 'ಮೃತ್ಯುವಿಗೆ ಮುತ್ತಿಟ್ಟವರು' ಲೇಖನ ಮಾಲೆಯು ಇವರಿಗೆ ಹೆಸರು ತಂದುಕೊಟ್ಟ ಸಾಹಿತ್ಯ ಪ್ರಕಾರವಾಗಿತ್ತು. 1979ರಲ್ಲಿ ಬರೆದ ಮನೋವೈಜ್ಞಾನಿಕ ಕಾದಂಬರಿ 'ತಿರುವು' ಪ್ರಜಾಮತ ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡ ನಂತರ ಖ್ಯಾತ ಚಲನಚಿತ್ರ ನಿರ್ದೇಶಕ ಪುಟ್ಟಣ್ಣ ಕಣಗಾಲ್‌ರವರು ಇದೇ ಕಾದಂಬರಿಯನ್ನು ಆಧರಿಸಿ 'ಮಾನಸ ಸರೋವರ' ಎಂಬ ಹೆಸರಿನಿಂದ ಚಲನಚಿತ್ರವನ್ನು ನಿರ್ದೇಶಿಸಿದರು. ಇವರ ಮೊದಲ ಸಾಮಾಜಿಕ ಕಾದಂಬರಿ 'ಹಾಲಿನ ಕಡಲು ಜೇನಿನ ಒಡಲು'. ನಂತರ 'ನೀರ ಮೇಲಿನ ಹೆಜ್ಜೆ', 'ಸಂಜೆ ಮಲ್ಲಿಗೆ', 'ಅಮರದೀಪ', 'ಸೇವಕ', 'ಎಂಟೆದೆ ಬಂಟ', 'ಅಗ್ನಿ ಪರ್ವತ' ಮುಂತಾದ 20ಕ್ಕೂ ಹೆಚ್ಚು ಕಾದಂಬರಿಗಳನ್ನು ರಚಿಸಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲಿ ಹಲವು ಬಗೆಯ ಸಾಧನೆಗಳನ್ನು ಮಾಡಿದ್ದ ಸುದರ್ಶನ ದೇಸಾಯಿಯವರಿಗೆ ಹಲವಾರು ಗೌರವ ಪ್ರಶಸ್ತಿಗಳು ಲಭಿಸಿವೆ.

ಸುದರ್ಶನ ದೇಸಾಯಿಯವರು 2012ರ ಜುಲೈ 31 ರಂದು ನಿಧನರಾದರು.



೩. ಟಿ ಕೆ ರಾಮರಾವ್

(ಜನನ: 07 ಅಕ್ಟೋಬರ್ 1931 – ಮರಣ: 10 ನವಂಬರ 1988)

ರೋಚಕ ಶೈಲಿ, ತೀಕ್ಷ್ಣವಾದ ಹಾಗೂ ಲಯಬದ್ಧವಾದ ವಾಕ್ಯಸರಣಿ, ವಿಸ್ಮಯಕಾರಿ ತಿರುವುಗಳು, ರಹಸ್ಯವನ್ನು ಕೊನೆಯವರೆವಿಗೂ ಕಾಯ್ದಿಟ್ಟು ಓದುಗರನ್ನು ಬೆರಗಾಗುವಂತೆ ಮಾಡುವ ತಂತ್ರಗಾರಿಕೆಯ ಬರಹಗಳಿಂದ ಕನ್ನಡದ ಓದುಗರಿಗೆ ಚಿರಪರಿಚಿತರಾಗಿದ್ದ ಪತ್ತೇದಾರಿ ಕಾದಂಬರಿ ಕರ್ತೃ ಟಿ.ಕೆ. ರಾಮರಾಯರು ಹುಟ್ಟಿದ್ದು 1931ರ ಅಕ್ಟೋಬರ್ 7ರಂದು ಚಿತ್ರದುರ್ಗ ಜಿಲ್ಲೆಯ ಹೊಸದುರ್ಗದಲ್ಲಿ. ತಂದೆ ಟಿ.ಕೃಷ್ಣಮೂರ್ತಿಯವರು ರೈಲ್ವೆ ಇಲಾಖೆಯಲ್ಲಿ ಸ್ಟೇಷನ್ ಮಾಸ್ಟರ್ ಆಗಿದ್ದರು. ತಾಯಿ ನಾಗಮ್ಮ. ರಾಮರಾಯರು ಕಡೂರು, ಅರಸೀಕೆರೆ ಮುಂತಾದೆಡೆ ಪ್ರಾರಂಭಿಕ ಶಿಕ್ಷಣ ಪಡೆದರು. ಕೋಲಾರದಲ್ಲಿ ಹೈಸ್ಕೂಲಿನಲ್ಲಿದ್ದಾಗಲೇ ವಿಪರೀತ ಓದಿನ ಹುಚ್ಚು. ಆಗಲೇ ಬರೆದ ಪತ್ತೇದಾರಿ ಕಾದಂಬರಿ 'ಭಾಸ್ಕರ ಅಥವಾ ಸೇಡು'. ಕಾಲೇಜು ಓದುತ್ತಿರುವಾಗಲೇ ಅಲೆಕ್ಸಾಂಡರ್ ಡ್ಯೂಮ, ವಿಕ್ಟರ್ ಹ್ಯೂಗೋ, ಥಾಮರ್ಸ್ ಹಾರ್ಡಿ, ಬರ್ನಾರ್ಡ್ ಷಾ ಮುಂತಾದವರು ಇವರ ಅಚ್ಚುಮೆಚ್ಚಿನ ಲೇಖಕರು. ಬಿ.ಎಸ್‌ಸಿ. ಆನರ್ಸ್ ಪದವಿ ಪಡೆದ ನಂತರ ಗಾಂಧಿನಗರದ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿ ಸೇರಿದರೂ ಎರಡು ತಿಂಗಳಲ್ಲೇ ಅದನ್ನು ಬಿಟ್ಟು ಮದರಾಸಿನಲ್ಲಿ ರೈಲ್ವೆ ಗಾರ್ಡ್ ಕೆಲಸಕ್ಕೆ ಸೇರಿದರು. ರೈಲ್ವೆಯಲ್ಲಿ ಸ್ಟೇಷನ್ ಮಾಸ್ಟರರಾಗಿದ್ದ ತಂದೆಯವರ ಅಕಾಲ ಮರಣದಿಂದ ದೊರೆತ ಅನುಕಂಪದ ಉದ್ಯೋಗವಾಗಿತ್ತು ಅದು. ಇದಕ್ಕೆ ಹಿಂದೆಯೇ ಅಣ್ಣನೂ ಮರಣವಾದುದರಿಂದ ಸಂಸಾರದ ಹೊಣೆ ಇವರ ಮೇಲೆ ಬಿದ್ದು, ತಮ್ಮ, ತಂಗಿ, ತಾಯಿ. ಇವರೆಲ್ಲರ ಜವಾಬ್ದಾರಿ ಹೊರಲು ಮದರಾಸಿನ ಕೆಲಸ ತೊರೆದು ಚನ್ನಪಟ್ಟಣದಲ್ಲಿ ಟ್ಯೂಟೋರಿಯಲ್ಸ್ ತೆರೆದು, ಎಸ್.ಎಸ್.ಎಲ್.ಸಿ., ಪಿ.ಯು.,ಸಿ., ಪಾಲಿಟೆಕ್ನಿಕ್ ತರಗತಿಯ ವಿದ್ಯಾರ್ಥಿಗಳಿಗೆ 20 ವರ್ಷಗಳ ಕಾಲ ಪಾಠ ಹೇಳಿದರು. ನಂತರ ಪ್ರಾರಂಭಿಸಿದ್ದು ಔಷಧಿ ಅಂಗಡಿ.

ಇವರು ಬರೆದ ಮೊಟ್ಟಮೊದಲ ಕಾದಂಬರಿ 'ದೂರ ಗಗನ' ಪ್ರಕಟವಾದುದು 1966ರಲ್ಲಿ. ಆಗ ಅವರಿಗೆ 35ರ ಪ್ರಾಯ. ರಂಜನೀಯವಾಗಿ, ಸೊಗಸಾಗಿ ಬರೆದ ಕಾದಂಬರಿ ಓದುಗರ ಗಮನ ಸೆಳೆದ ನಂತರ ಹಲವಾರು ಕಾದಂಬರಿಗಳನ್ನು ಬರೆದರು. ಮೊದಲು ಪ್ರಕಟಿಸಲಾಗದೆಂದು ವಿಷಾದ ಪತ್ರ ಬರೆದ ಸಂಪಾದಕರೇ ಕೊನೆಗೊಮ್ಮೆ ಕ್ಯೂನಲ್ಲಿ ಕಾಯ್ದು ಇವರಿಂದ ಕಾದಂಬರಿ ಬರೆಸಿ ತಮ್ಮ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಿಸಬೇಕಾಯಿತು.

ಮರಳು ಸರಪಳಿ, ಮೂರು ಜನ್ಮ, ಸೇಡಿನ ಹಕ್ಕಿ, ಸೀಳು ನಕ್ಷತ್ರ, ವರ್ಣ ಚಕ್ರ, ಹಿಮಪಾತ, ಮಣ್ಣಿನ ದೋಣಿ ಮುಂತಾದ ಕಾದಂಬರಿಗಳು ಚಲನಚಿತ್ರವಾಗಿ ಅಪಾರ ಯಶಸ್ಸನ್ನು ತಂದುಕೊಟ್ಟಿದ್ದಲ್ಲದೆ, ಇವರ ಬಂಗಾರದ ಮನುಷ್ಯ ಕಾದಂಬರಿಯು ಚಲನಚಿತ್ರವಾಗಿ (1972) ಎರಡು ವರ್ಷಗಳ ಕಾಲ ಒಂದೇ ಚಿತ್ರಮಂದಿರದಲ್ಲಿ ಪ್ರದರ್ಶಿತಗೊಂಡು ದಾಖಲೆ ಸ್ಥಾಪಿಸಿತು. ಇದೇ ಕಾದಂಬರಿಯು ತೆಲುಗುಭಾಷೆಯಲ್ಲಿ 'ದೇವುಡುಲಾಂಟಿ ಮನಿಷಿ' ಹೆಸರಿನ ಚಲನಚಿತ್ರವಾಗಿ ಆಂಧ್ರದಾದ್ಯಂತ ಪ್ರದರ್ಶಿತವಾಗಿ ಶತದಿನೋತ್ಸವ ಕಂಡರೆ, ಕಾದಂಬರಿ ರೂಪದಲ್ಲಿ 'ಬಂಗಾರು ಮನಿಷಿ' ಹೆಸರಿನಿಂದ ತೆಲುಗು ಭಾಷೆಗೂ ಅನುವಾದಗೊಂಡಿತು.

1984ರಲ್ಲಿ ಕರ್ನಾಟಕ ಸರಕಾರವು ರಾಮರಾಯರನ್ನು ಸಾಹಿತ್ಯ ಅಕಾಡೆಮಿಯ ಸದಸ್ಯರನ್ನಾಗಿ ನೇಮಿಸಿತು. 1985ರಲ್ಲಿ ಧಾರವಾಡದಲ್ಲಿ ನಡೆದ ಕರ್ನಾಟಕ ರಾಜ್ಯದ ಪ್ರಥಮ ಪತ್ತೇದಾರಿ ಲೇಖಕರ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು. ಟಿ.ಕೆ.ರಾಮರಾವ್ ಅವರು 1988ರ ನವಂಬರ 10 ರಂದು ನಿಧನರಾದರು

***

ಕನ್ನಡ...!

-ಗೋವರ್ಧನ್ ಗಿರಿ ಜೋಷಿ
ಲಂಡನ್, ಯುನೈಟೆಡ್ ಕಿಂಗ್ಡಮ್

ಉದಯಿಸುವ ರವಿಯಂತೆ
ನಮ್ಮಯ ಈ ನುಡಿ ಕನ್ನಡ...
ತಂಪೆರೆದು ಬೆಳದಿಂಗಳ ಚೆಲ್ಲುವ
ಚಂದಿರನಂತೆ ಈ ಸವಿಗನ್ನಡ...

ಸುರಿಯುವ ಮಳೆಯಂತೆ
ಈ ಸಿರಿಗನ್ನಡ...
ಹರಿಯುವ ಹೊಳೆಯಂತೆ
ನಮ್ಮಯ ಈ ನುಡಿ ಕನ್ನಡ...

ಆಗಸದ ವಿಶಾಲತೆಯಂತೆ
ನಮ್ಮಯ ಈ ಸಿರಿಗನ್ನಡ...
ಭೋರ್ಗರೆಯುವ ಕಡಲಿನ
ಮೊರೆತಕೆ ಸಮವಿದು ಸವಿಗನ್ನಡ...

ಹೇಳುತ್ತಿದ್ದಾರೆ ಕನ್ನಡ ಕಳೆದು
ಹೋಗುವುದಂತೆ
ಕೇಳದರೆ ಅನಿಸುತ್ತದೆ ಅಲ್ಲಿ
ನಡೆಯುತ್ತಿರಬಹುದೆ ಹುಚ್ಚರ ಸಂತೆ?

ನಾವು ಕನ್ನಡ ಉಳಸುವುದಂತೆ
ಬೆಳೆಸುವುದಂತೆ, ಅದೆಲ್ಲವೂ
ಹಸಿ ಸುಳ್ಳಿನ ಕಂತೆ...
ಕನ್ನಡವೋ ದಿನ ಬೆಳಗುವ ಆ
ಸೂರ್ಯನಿದ್ದಂತೆ...

***

ಓ ನಲ್ಲೆ...

-ಗೋವರ್ಧನ್ ಗಿರಿ ಜೋಷಿ
ಲಂಡನ್, ಯುನೈಟೆಡ್ ಕಿಂಗ್ಡಮ್

ಓ ನಲ್ಲೆ -
ಸಮರಸದ ಜೀವನಕ್ಕೆಲ್ಲದೆ ಎಲ್ಲೆ
ಭಾವೈಕ್ಯತೆಯಲ್ಲಿ ನಾವಿಬ್ಬರು ಒಂದಾದ
ಮೇಲೆ...॥ಪ॥

ಸಂಸಾರವೆಂಬ ಸಂಗೀತದಲ್ಲೆ
ಸೋಲು ಗೆಲವುಗಳೆಂಬುದು ಸ್ವರಗಳಲ್ಲೇ...
ಸೋಲನ್ನು ಗೆಲುವಾಗಿಸಬಲ್ಲ ಸ್ವರ-
ಸಂಯೋಜಕಿ ನೀನಾದ ಮೇಲೆ, ಪ್ರತಿ ದಿನವು
ಹೊಸದೊಂದು ಭಾವಗೀತೆಯಲ್ಲೇ...॥1॥

ದೊಡ್ಡವರು ಬೋಧನೆ ಚಿಕ್ಕವರ-
ರೋದನೆ ಮಧ್ಯ ಮಧ್ಯದಲ್ಲಿ ಬಂದು
ಹೋಗುವ 'ಬಿ ಜಿ ಎಮ್' ಗಳಲ್ಲವೆನೇ...?
ಬಂಧು ಮಿತ್ರರ ಆಲಾಪ, ಅಕ್ಕಪಕ್ಕದವರ
ಪ್ರಲಾಪ ಅವುಗಳಿಲ್ಲದೆ 'ಸಂಸಾರ' ಸಂಗೀತ-
ವಾಗಬಲ್ಲದೇನೇ?...॥2॥

ತಾಳ ತಂಬೂರಿ ನಾ ಒಪ್ಪಿ ಹಾಡಲು
ಕುಳತಿರುವೆನು ಹೇ ಮದನಾರಿ...
ಜೀವನವೆಂಬ ಈ ಸಂಗೀತ ಕಛೇರಿ
ಯಶಸ್ವಿಯಾಗಿಸಲು ಒಟ್ಟಾಗಿ ನುಡಿಸಿ
ನಡಿಸುವುದೊಂದೆ ನಮಗಿರುವ ದಾರಿ...॥3॥

***

ಸಾಹಿತ್ಯ ದಾಸೋಹ 222

ಅಧ್ಯಕ್ಷೀಯ ನುಡಿಗಳು

– ಡಾ. ಸತ್ಯವತಿ ಮೂರ್ತಿ

ಸ.ಸ.ಕ.ಸ. ವೇದಿಕೆಯ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ರವೀಂದ್ರ ಅವರಿಗೂ, ನೋಡಿಯೋ ಸಾಹಿತ್ಯದ ಕೈಂಕರ್ಯ ವನ್ನು ಸಮರ್ಥವಾಗಿ ನಿರ್ವಹಿಸಿಕೊಂಡು ಬರುತ್ತಿರುವ ಮಾನ್ಯಶ್ರೀ ಮಹಾಬಲ ಅವರಿಗೂ, ಇಂದಿನ ಈ ಕೈಂಕರ್ಯಕ್ಕೆ ಅಂದವಾದ ಪತ್ರಿಕೆಯೊಂದಿಗೆ ಎಲ್ಲರಿಗೂ ಅಹ್ವಾನ ನೀಡಿರುವ ಶ್ರೀ ರವಿ ಕುಸಬಿಯವರಿಗೂ, ಈ ಕಾಯಕಕ್ಕೆ ಬಿಡುವು ಮಾಡಿಕೊಂಡು ಬಂದು ತಮ್ಮ ಅಮೂಲ್ಯ ಬರಹಗಳನ್ನು ಕೇಳಸುತ್ತಿರುವ ನನ್ನ ಬರಹಗಾರ ಬಂಧುಗಳಿಗೂ ನನ್ನ ಅನಂತ ನಮಸ್ಕಾರಗಳನ್ನು ಅರ್ಪಿಸುತ್ತೇನೆ. ನನ್ನನ್ನು ಇಂದು ತರಗತಿಯ 'ಮಾನೀಟರ್' ಆಗಿ ನೇಮಕಮಾಡಿ ನನಗೆ ಗೌರವ ತೋರಿದ ಸ.ಸ.ಕ.ಸ ವೇದಿಕೆಗೆ ಹೃತ್ಪೂರ್ವಕ ನಮನಗಳನ್ನು ಅರ್ಪಿಸಿ, ಇಂದಿನ ಪ್ರಸ್ತುತಿಗಳ ಬಗ್ಗೆ ನನ್ನ ಅಲ್ಪ ಬುದ್ಧಿಗೆ ತೋರಿದಂತೆ ಒಂದೆರಡು ಮಾತುಗಳನ್ನಾಡುತ್ತೇನೆ. ಅದಕ್ಕೆ ಮೊದಲು ನನ್ನ ಒಂದು ಪುಟ್ಟ ಪ್ರಸ್ತುತಿ. ಇಗೋ ನಿಮ್ಮ ಮುಂದೆ–

ತನುಮನಗಳಲ್ಲಿ ತುಂಬಿರೆ ಕನ್ನಡ
ಇದ್ರೇನ್ ಅಮೆರಿಕ ಇಂಗ್ಲೆಂಡ್ ಕೆನಡ
ಜಾತ್ರೆಯಲಿ ಕಳೆದು ಹೋದಾ ಹುಡುಗನು?
ತಬ್ಬಿ ಹಿಡಿವನೆ ಸಿಕ್ಕಿದಾಕೆ ಸೆರಗನು?

ಕರೆದರೆನ್ನ ಸಾಂಸ್ಕೃತಿಕ ರಾಯಭಾರಿ
ಕನ್ನಡದ ಸಂಸ್ಕೃತಿಯ ಉಳಿಸುವ ಪರಿ!
ಶ್ಲಾಘಿಸಿ ಹಾಡಿದರು ನನ್ನವರೆನ್ನ
ಕನ್ನಡವನುಳಿಸಿ ಬೆಳೆಸುತಿಹ ಚೆನ್ನ

ಸುತ್ತಲಿನ ಗಾಳಿ ಪರಂಗಿಯಾದರೇನ್
ಮರೆಸೀತೆ ಕನ್ನಡಿತಿಯ ಸಿಹಿ ಜೇನ್
ಹೊತ್ತುಹೊತ್ತಿನ ತುತ್ತು ಸಿಕ್ಕೀತು ಇಲ್ಲೂ
ದೊರೆತೀತೆ ಹೆತ್ತಮ್ಮನ ಪ್ರೀತಿ ಸೊಲ್ಲೂ?

ಎಲ್ಲಾದರಿರಲಿ ಎಂತಾದರಿರಲಿ
ಕನ್ನಡವೆನ್ನಾ ಉಸಿರಾಗಿರಲಿ
ಭುವನೇಶ್ವರಿಯ ಸ್ಮರಿಸುತಲಿರಲಿ
ಕವಿವಾಣಿಯ ಸತ್ಯವಾಗಿಸಲಿ

1. ಶ್ರೀಮತಿ. ಸುವರ್ಣ ಲಕ್ಷ್ಮಿ – ದೇವಸ್ಥಾನಕ್ಕೆ ಏಕೆ ಹೋಗುತ್ತೇವೆ?

ಬಹಳ ಆತ್ಮೀಯ ವಿಷಯವನ್ನೊಳಗೊಂಡ ಕವನ. ಯಾವುದೇ ಬಂಧಕ್ಕೆ ಸಿಗದೆ ಆಡುಮಾತಿನಂತೆ ಹರಿದುಹೋಗುವ ಈ ಕವನ ನಮ್ಮ ಅಂತರಂಗವನ್ನು ಪ್ರಶ್ನಿಸಿಕೊಳ್ಳುವಂತೆ ಮಾಡುತ್ತದೆ. ಸ್ವಲ್ಪ ವಾಚ್ಯವಾಯಿತೆನಿಸಿದರೂ ಕವಯಿತ್ರಿ ತಾನು ಹೇಳಬೇಕಾದುದನ್ನು ಸಮರ್ಥವಾಗಿ ಓದುಗ/ಕೇಳುಗರೊಂದಿಗೆ ಹಂಚಿಕೊಂಡಿದ್ದಾರೆ. ಅದಕ್ಕಾಗಿ ಅವರಿಗೆ ಧನ್ಯವಾದಗಳು.

ಅಧ್ಯಕ್ಷರ ಪರಿಚಯ

ಡಾ. ಶ್ರೀಮತಿ ಸತ್ಯವತಿ ಮೂರ್ತಿ

ವಿದ್ಯಾರ್ಹತೆ: ಬಿ..ಎಸ್ಸಿ, ಬಿ.ಎ, ಎಂ.ಎ, ಬಿ.ಎಡ್, ಪಿ.ಎಚ್.ಡಿ. ಹಿಂದಿ ವಿಶಾರದ, ಸಿಐಟಿ, ಎಎಟಿ (ಅಸೋಸಿಯೇಷನ್ ಆಫ್ ಅಕೌಂಟಿಂಗ್ ಟೆಕ್ನೀಷಿಯನ್ಸ್), ಸಿಐಎಂಎ (ಚಾರ್ಟರ್ಡ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಅಕೌಂಟೆಂಟ್ಸ್). 'ಎರ್ತೂರು ಶಾಂತಿರಾಜ ಶಾಸ್ತ್ರಿಗಳ ಕೃತಿಗಳು ಒಂದು ಅಧ್ಯಯನ'ಕ್ಕಾಗಿ ಪಿ.ಎಚ್.ಡಿ. ಪದವಿ. ಶಾಂತಿರಾಜ ಶಾಸ್ತ್ರಿಗಳು ರಚಿಸಿದ 'ಮಹಾಪುರಾಣ'ದ ಅನುವಾದ ಹಾಗೂ ಅವರ ಇತರ ಕೃತಿಗಳನ್ನು ಕುರಿತ ಅಧ್ಯಯನ.

20 ವರ್ಷಕ್ಕೂ ಹೆಚ್ಚು ಕಾಲ ಉಪಾಧ್ಯಾಯಿನಿ ಹಾಗೂ ಮುಖ್ಯೋಪಾಧ್ಯಾಯಿನಿಯಾಗಿ ಸೇವೆ ಸಲ್ಲಿಸಿದ ಅನುಭವ.

ಕನ್ನಡ ಸಾಹಿತ್ಯ ಪರಿಷತ್ತಿನಿಂದ ಗೌರವಧನದೊಂದಿಗೆ ಪ್ರಕಟವಾದ ಸಂಶೋಧನ ಗ್ರಂಥವೂ ಸೇರಿದಂತೆ ಈವರೆಗೆ ಇವರ ನಾಲ್ಕು ಪುಸ್ತಕಗಳು ಪ್ರಕಟವಾಗಿದ್ದು, ಇಂಗ್ಲೆಂಡಿನ ಜನರ ಜೀವನವನ್ನು ಚಿತ್ರಿಸುವ 'ಬಿಳಿಯರ ಜೀವನ' ವೂ , ಸೇರಿದಂತೆ ಆರು ಪುಸ್ತಕಗಳು ಮುದ್ರಣದ ಹಂತದಲ್ಲಿವೆ. ಸುಮಾರು 80 ಕವಿತೆಗಳನ್ನು ಇಂಗ್ಲೀಷಿನಿಂದ ಕನ್ನಡಕ್ಕೂ, ಕುವೆಂಪು ಪ್ರಾಧಿಕಾರದ ವತಿಯಿಂದ ಏಳು ಪುಸ್ತಕಗಳನ್ನು ಕನ್ನಡದಿಂದ ಇಂಗ್ಲೀಷಿಗೂ ಅನುವಾದಿಸಿರುತ್ತಾರೆ. ಇವರ ಅನೇಕ ಬರಹಗಳು ಹಲವಾರು ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಆಕಾಶವಾಣಿ ಹಾಗೂ ದೂರದರ್ಶನ ಕಲಾವಿದೆಯಾದ ಈಕೆ ಇಂಗ್ಲೆಂಡಿನಲ್ಲೂ ಅಖಿಲ ಭಾರತ ಕವಿಗೋಷ್ಠಿಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ್ದಾರೆ. ಚಂದನ ದೂರದರ್ಶನ, ನಮ್ ರೇಡಿಯೋ ಮಾಧ್ಯಮಗಳು ಇವರ ಸಂದರ್ಶನ ನಡೆಸಿದ್ದು, ಇತ್ತೀಚೆಗೆ ಚಂದನ ದೂರದರ್ಶನದ 'ಶುಭೋದಯ' ಕಾರ್ಯಕ್ರಮದಲ್ಲಿ ಅತಿಥಿಯಾಗಿದ್ದರು.

ಇಂಗ್ಲೆಂಡ್ ಸರ್ಕಾರದಿಂದ 'ಹಿಂದೂ ಪ್ರಿಸನ್ ಮಿನಿಸ್ಟರ್' ಆಗಿ ನೇಮಕಾತಿ ಪಡೆದು ಗೌರವಿಸಲ್ಪಟ್ಟಿದ್ದಾರೆ. ಈ ಅವಧಿಯಲ್ಲಿ ಅನೇಕ ಕೈದಿಗಳ ಮನಃ ಪರಿವರ್ತನೆಗೊಳಿಸಿ ಅವರೆಲ್ಲ ಸಮಾಜದ ಮುಖ್ಯವಾಹಿನಿಗೆ ಸೇರುವಂತೆ ಮಾಡಿದ ಡಾ.ಸತ್ಯವತಿ ಮೂರ್ತಿಯವರ ಸಾಧನೆ ಶ್ಲಾಘನೀಯ.

ತಮ್ಮದೇ ವಿಡಿಯೋ ಚಾನೆಲ್‌ಗಳನ್ನು ಹೊಂದಿದ್ದು ತನ್ಮೂಲಕ ತಾವು ಕಲಿತಿರುವ ವೇದಮಂತ್ರಗಳನ್ನು, ಸ್ವರಚಿತ ಸಾಹಿತ್ಯವನ್ನೂ ಜನರೊಂದಿಗೆ ಹಂಚಿಕೊಳ್ಳುತ್ತಿದ್ದಾರೆ.

ಉಪನ್ಯಾಸಕಿಯಾಗಿ, ಉಪಾಧ್ಯಾಯಿನಿಯಾಗಿ, ವ್ಯಾಖ್ಯಾನಕಾರ್ತಿಯಾಗಿ, ಸಾಂಸ್ಕೃತಿಕ ರಾಯಭಾರಿಯಾಗಿ, ಸಾಹಿತಿಯಾಗಿ, ಅಕೌಟೆಂಟ್ ಆಗಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಡಾ. ಸತ್ಯವತಿ ಮೂರ್ತಿಯವರನ್ನು ಜೈನ ಟ್ರಸ್ಟ್, ವಿಜಯ ಪ್ರೌಢಶಾಲೆ, ವಿಜಯನಗರದ ಪೋಷಕ ಸಂಘ, ಶ್ರಾವಣ ಬ್ಲಾಗ್ ಮೊದಲಾದ ಸಂಸ್ಥೆಗಳು ಗೌರವಿಸಿವೆ.

'ಮೆನ್ ಅಂಡ್ ವಿಮೆನ್ ಆಫ್ ಏಷ್ಯಾ' ಡಿರೆಕ್ಟರಿಯಲ್ಲಿ ಇವರ ಹೆಸರು ಉಲ್ಲೇಖವಾಗಿದೆ.

2. ಶ್ರೀ ಗಣಪತಿ ಹೆಗ್ಗಡೆ – ಮಾಹೇಶ್ವರ ಸೂತ್ರಗಳು

ಕೇಶಿರಾಜನ ಶಬ್ದಮಣಿ ದರ್ಪಣದಲ್ಲೂ ಕಂಡುಬರದ "ಮಾಹೇಶ್ವರ ಸೂತ್ರ"ಗಳ ಬಗ್ಗೆ ವಿವರವಾಗಿ, ಆಸಕ್ತಿ ಹುಟ್ಟುವಂತೆ ವಿವರಿಸಿರುವುದು ಈ ಲೇಖನದ ವೈಶಿಷ್ಟ್ಯ. ಮಹೇಶ್ವರನಿಂದಲೇ ಬಂದ ಸೂತ್ರಗಳು ಇವು ಎಂದೂ ಅವುಗಳನ್ನು ಸವಿಸ್ತಾರ ವಾಗಿ, ಆಸಕ್ತಿ ಬರುವಂತೆ ವಿವರಿಸಿದ್ದಾರೆ ಗಣಪತಿ ಹೆಗ್ಗಡೆಯವರು. ಇದರಲ್ಲಿ ಅವರು ತಿಳಸುವ ಸ್ವರಗಳಲ್ಲಿ ಪ್ಲುತಸ್ವರ ಹಾಗೂ 'ಲೃ' ಉಚ್ಚಾರದ ಶಬ್ದದ ಬಗೆಗೆ ನನಗಿರುವ ಕೆಲವು ಅನುಮಾನಗಳನ್ನು ವೈಯಕ್ತಿಕವಾಗಿ ಗಣಪತಿ ಹೆಗ್ಗಡೆಯವರ ಗಮನಕ್ಕೆ ತಂದಿರುತ್ತೇನೆ.

3. ಶ್ರೀಮತಿ ಎಲ್ ಗಿರಿಜಾ ರಾಜ್ – ಮೌಲ್ಯಮಾಪನ ಶಿಬಿರದಲ್ಲಿ

ಓರ್ವ ಅಧ್ಯಾಪಕರಾಗಿ ಮೌಲ್ಯ ಮಾಪನಕ್ಕೆ ಹೋದಾಗ ಎದುರಿಸಬೇಕಾಗಿ ಬರುವ ಸಂದಿಗ್ಧಗಳು, ಕೆಲವು ಮಕ್ಕಳ ಅಸಂಬದ್ಧ ಉತ್ತರಗಳಿಂದಾಗುವ ದಂಗು, ಹೇಗಾದರೂ 30 ಅಂಕಗಳು ಬರುವಂತೆ ಮಾಡಿ ಅವರನ್ನು ಉತ್ತೀರ್ಣರಾದವರ ಸಂಖ್ಯೆಯೊಳಕ್ಕೆ ದೂಡುವ ಯತ್ನ, ಇವೆಲ್ಲವನ್ನು ನುರಿತ ಬರಹಗಾರ್ತಿ ಎಲ್.ಗಿರಿಜಾರಾಜ್ ಅವರು ಬಹಳ ಸುಂದರವಾಗಿ ಕರ್ನಾಟಕದ ವಿವಿಧ ಪ್ರಾದೇಶಿಕ ಭಾಷೆಗಳೊಡನೆ ತೆರೆದು ಉಣಬಡಿಸಿದ್ದಾರೆ. ಅವರಿಗೆ ಅನಂತ ಧನ್ಯವಾದಗಳು

4. ಶ್ರೀ. ವಿಠ್ಠಲ್ ಇಜೇರಿ – ಜನಸಾಮಾನ್ಯನ ಕತೆ 'ಪೇಪೆ'

'ಅಲೆಕ್ಸಿ ಮಾಕ್ಸಿಮೊವಿಕ್ ಪೆಷ್ಕೋವ್' ಎನ್ನುವುದು ಮಾಕ್ಸಿಮ್ ಗೋರ್ಕಿಯ ಪೂರ್ಣ ಹೆಸರು. ರಷ್ಯಾ ದೇಶಕ್ಕೆ ಸೇರಿದವನು. ಮಾಕ್ಸಿಮ್ ಗೋರ್ಕಿ ತನ್ನ ಸಣ್ಣ ಕಥೆಗಳಿಗೆ ಪ್ರಸಿದ್ಧನಾದವನು. ಹೆಚ್ಚಿನ ಮಟ್ಟದಲ್ಲಿ ಇವನ ಬರಹಗಳು ಸಮಾಜದ ಕೆಳವರ್ಗದ ಜನರನ್ನು ಕುರಿತದ್ದು. ಅಷ್ಟೇ ಅಲ್ಲ, ಸಮಾಜವಾದವನ್ನು ನಿರೂಪಿಸುವಂತಹವುಗಳು. ಅವುಗಳಲ್ಲಿ 'ಪೇಪೇ" ಯನ್ನು ಕುರಿತಂತಹ ಕಥೆಗಳೂ ಸೇರುತ್ತವೆ. ಕತೆಗಳಲ್ಲಿ ಬರುವ ಪೇಪೆ ಒಬ್ಬ ಸಣ್ಣ ಹುಡುಗ, ಅವನು ಆಡುವ ಮಾತುಗಳು, ಹೇಳುವ ಪದಗಳು ಅಸಂಬದ್ಧ, ಅರ್ಥಹೀನವೆನಿಸಿದರೂ ಅವನ ಮಾತುಗಳಲ್ಲಿ ಹೊಮ್ಮಿಬರುವ ಸಮಾಜವಾದವನ್ನು ಗುರುತಿಸಬೇಕು. ಮೊದಲ ಕಥೆಯಲ್ಲಿ ಸೇಬು ಹಣ್ಣನ್ನು ತೆಗೆದುಕೊಂಡುಹೋಗಿ ಒಂದೇ ವ್ಯಕ್ತಿಗೆ ಕೊಡುವ ಸಂದರ್ಭ ಬಂದಾಗ ಪೇಪೆಯ ಪ್ರತಿಕ್ರಿಯೆ 'ಆ ಹಣ್ಣುಗಳನ್ನೆಲ್ಲ ಒಂದೇ ವ್ಯಕ್ತಿ ತಿನ್ನುವುದಕ್ಕಿಂತ ಎಲ್ಲರೂ ಹಂಚಿ ತಿನ್ನುವುದು ಸರಿ' ಎನ್ನುವದನ್ನು ಪೆದ್ದನಂತೆ ವ್ಯವಹರಿಸಿ ತಿಳಿಸಿಕೊಡುತ್ತಾನೆ. ಹಾಗೆಯೇ ಇನ್ನೊಂದು ಸಂದರ್ಭದಲ್ಲಿ ಹಲವಾರು ದಿರಿಸುಗಳನ್ನು ಹೊಂದಿದ್ದ ಸಿರಿವಂತನಿಂದ ತನಗೊಂದು ಷರಾಯಿ ಬೇಕೆಂದು ಬಯಸಿ ಅಲ್ಲೇ ಕೆಲಸಕ್ಕಿದ್ದ ತನ್ನ ಸೋದರಿಯಿಂದ ಪಡೆಯುತ್ತಾನೆ. ಅಲ್ಲಿಗೆ ಬಂದ ಯಜಮಾನನಿಗೆ ತನ್ನದೇ ಆದ ರೀತಿಯಲ್ಲಿ ಹಂಚಿ ತಿನ್ನುವ ಸೂತ್ರವನ್ನು ತಿಳಿಸಿಕೊಟ್ಟು ಶಹಭಾಸ್‌ಗಿರಿಯನ್ನು ಪಡೆಯುತ್ತಾನೆ. ಇಲ್ಲಿ ಲೇಖಕರು ನಮ್ಮ ಬಸವಣ್ಣನವರ ಮಾತಿನಲ್ಲೂ ಸಮಾಜವಾದದ ಹೊಳಹು ಇರುವುದನ್ನು ಗಮನಿಸಬಹುದು ಎನ್ನುತ್ತಾರೆ. ಇಂತಹ ಸುಂದರ ಬೋಧನೆಯುಳ್ಳ ಈ ಕತೆಯನ್ನು ಇಜೇರಿಯವರು ಸುಂದರವಾದ ಓದಿನೊಂದಿಗೆ ಪ್ರಸ್ತುತಿಪಡಿಸಿದ್ದಕ್ಕಾಗಿ ಧನ್ಯವಾದಗಳು.

5. ಶ್ರೀಮತಿ ಸುಜಾತಾ ರವೀಶ್ – ಸಂತಸ ಅರಳುವ ಸಮಯ

ನೆಮ್ಮದಿಯಿಂದ ನಡೆದುಕೊಂಡು ಹೋಗುತ್ತಿದ್ದ ತನ್ನ ತಮ್ಮ ತಂಗಿಯರೂ ಸೇರಿದ ಮಕ್ಕಳ ಪುಟ್ಟ ಸಂಸಾರಕ್ಕೆ, ಇದ್ದಕ್ಕಿದಂತೆ ತಂದೆ ಹೃದಯಾಘಾತದಿಂದ ತೀರಿಕೊಂಡಾಗ, ಮನೆಯ ಹಿರಿಯಳಾದ ಶ್ರೀರಕ್ಷಳಿಗೆ ಮನೆಯ ಜವಾಬ್ದಾರಿ ಬೀಳುತ್ತದೆ. ತಮ್ಮ ತಂಗಿಯರನ್ನು ಚೆನ್ನಾಗಿ ಓದಿಸಿ ಅಮ್ಮನೊಡನೆ ಇದ್ದ ಶ್ರೀರಕ್ಷಳ ಜೀವನದಲ್ಲಿ ಇದ್ದಕ್ಕಿದಂತೆ ಆನಂದನ ಪ್ರವೇಶವಾಗಿ ಬದುಕಿಗೊಂದು ಅರ್ಥವನ್ನು ಕೊಡುತ್ತದೆ. **Opportunity doesn't knock twice.** ಎಂಬ ಮಾತನ್ನು ಸುಂದರವಾದ ರೀತಿಯಲ್ಲಿ ಸರಳವಾದ ಭಾಷೆಯಲ್ಲಿ ಹೆಣೆದಿದ್ದಾರೆ ಸುಜಾತ ಅವರು. ಕಥೆಯ ವಸ್ತು ನಮಗೆ ಪರಿಚಿತವೆನಿಸಿದರೂ ಇವರ ಬರವಣಿಗೆಯ ಶೈಲಿ ಕುತೂಹಲವನ್ನುಳಿಸಿಕೊಂಡು ಹೋಗುತ್ತದೆ. ಸುಖಾಂತವಾದ ಈ ಕಥೆಯನ್ನು ಪ್ರಸತುತಿಪಡಿಸಿದ ಸುಜಾತ ಅವರಿಗೆ ಧನ್ಯವಾದಗಳು.

6.. ಶ್ರೀ. ಎಂ. ಎಸ್. ಎನ್: – ಪ್ರೇಮ ಪರೀಕ್ಷೆ

ವಿಶ್ವನಿಗೆ ಇದ್ದಕ್ಕಿದ್ದ ಹಾಗೆ ಪಲ್ಲಂಗದ ಸೇವೆ ದೊರೆತುದರ ಹಿನ್ನೆಲೆಯ ಅರಿವಾದಾಗಲೇ ಆಕಾಶ ತಲೆಯ ಮೇಲೆ ಕಳಚಿ ಬಿದ್ದಂತಾದುದು. ಆದರೆ ಕೆಲವೇ ಕ್ಷಣಗಳಲ್ಲಿ ಹೆಂಡತಿಯ ಸವಾಲಿಗೆ ಸರಿಯಾದ ಜವಾಬು ಕೊಟ್ಟ ವಿಶ್ವ ಮಡದಿಯ ಪ್ರೀತಿ ಕೋಪಕ್ಕೆ ತಿರುಗುವಷ್ಟರಲ್ಲಿಯೇ ಗೆದ್ದ. ಆದರೇನು? ಹೆಂಡತಿಯ ಒಂದು ಚಿಕ್ಕ ಬಯಕೆಯನ್ನೂ ಈಡೇರಿಸಲಾರದೆ ಹೋದಾಗ, ಪ್ರೇಮದ ನಿಷೇಧವನ್ನು ಎದುರಿಸಲು ಹೋಗಿ ಜೈಲು ಸೇರಿದ ವ್ಯಾಲೆಂಟೈನ್ಸ್ ನಂತಾಗಿದ್ದ. ಅವನು ಬಾಗಿಲಿನ ಹಿಂದೆ ಬಂದಿಯಾದರೆ, ಇವನು ಬಾಗಿಲಿನ ಆಚೆಗೆ ಬಂದಿಯಾದ. ಈಗ ಅವನನ್ನು ಮನೆಯೊಳಕ್ಕೆ ಸೇರಿಸುವುದೂ ಬಿಟ್ಟದ್ದೂ ಓದುಗರಿಗೆ ಬಿಟ್ಟದ್ದು! ಸರಳವಾದ ಮಾತುಗಳಲ್ಲಿ ರಚಿತವಾದ ಈ ಹಾಸ್ಯ

ಪ್ರಸಂಗ (ಸಣ್ಣಕತೆ ಎಂದರೂ ನಡೆದೀತು) ರಾಜನ ನಿಷೇಧದ ಅಗತ್ಯವನ್ನು ಸಿದ್ಧಮಾಡಿತೇ? ವಿಶ್ವ ಮತ್ತೆ ಮನೆಯೊಳಗೆ ಹೋಗಿ ವಾಲೆಂಟೈನ್ಸ್ ಆಚರಿಸಿದನೇ? ನಿಮ್ಮ ಅಭಿಪ್ರಾಯಗಳನ್ನು ವೇದಿಕೆಯಲ್ಲಿ ಹಂಚಿಕೊಳ್ಳಿ.

7. ಶ್ರೀ.ಬೆಂ.ಶ್ರೀ.ರವೀಂದ್ರ – ಬುಕ್ಕಾಂಬುಧಿಯ ವಿಸ್ಮಯ ಕೃಷ್ಣಮೂರ್ತಿ–೯೯

ಅಪರೂಪದ ವ್ಯಕ್ತಿ ಬುಕ್ಕಾಂಬುಧಿ ಕೃಷ್ಣಮೂರ್ತಿ ೯೯ನೆಯ ಹುಟ್ಟುಹಬ್ಬದ ಸಂಭ್ರಮದಲ್ಲಿ ಪುಸ್ತಕ ಬಿಡುಗಡೆ ಮಾಡಿದ ಧೀಮಂತರು. ಈ ಇಳಿವಯಸ್ಸಿನಲ್ಲಿಯೂ ಕನ್ನಡ ಸಾಹಿತ್ಯದ ಸೇವೆಯನ್ನು ಮಾಡುತ್ತಿರುವ ಪ್ರತಿಭಾವಂತ ವ್ಯಕ್ತಿ ಕೃಷ್ಣಮೂರ್ತಿಯವರನ್ನು 'ವಿಸ್ಮಯ' ಎಂದು ಕರೆದಿರುವುದರಲ್ಲಿ ಔಚಿತ್ಯವಿದೆ. ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದ ಕೃಷ್ಣಮೂರ್ತಿಗಳು ಅನೇಕ ಕಷ್ಟಕಾರ್ಪಣ್ಯಗಳನ್ನು ಕಂಡ ಜೀವ. ಮಕ್ಕಳನ್ನು ಕಳೆದುಕೊಂಡಾಗ, ಹೆಂಡತಿ ಅನಾರೋಗ್ಯಕ್ಕೆ ಒಳಗಾದಾಗ ಅವರು ತೋರಿಸಿದ ಮನೋಸ್ಥೈರ್ಯ ಶ್ಲಾಘನೀಯ. ತಮ್ಮ 72ನೆಯ ವಯಸ್ಸಿನಲ್ಲಿ ಕಂಪ್ಯೂಟರ್ ಕಲಿತು ಕಾರ್ಯದಲ್ಲಿ ತೊಡಗಿದುದು ಯುವಕರಿಗೊಂದು ದಾರಿದೀಪ. ಮಗಳ ನೆವದಲ್ಲಿ ಅಮೆರಿಕಾಗೆ ತೆರಳಿದ ಅವರು ಆಕೆ ಹಿಂತಿರುಗಿ ಭಾರತಕ್ಕೆ ಬಂದ ಮೇಲೂ ಅಲ್ಲೇ ನೆಲೆಸಿ ತಮ್ಮ ಉಳಿದ ಜೀವನವನ್ನು ಕಳೆಯುತ್ತಿದ್ದಾರೆ. ಈ ವಯಸ್ಸಿನಲ್ಲೂ ಉತ್ತಮ ದೇಹಾರೋಗ್ಯವನ್ನು ಹೊಂದಿರುವುದಕ್ಕೆ ಕಾರಣ ಅವರ ಮನೋಬಲ. ಇವರ ಜೀವನದ ಕಥೆ ಎಲ್ಲ ತರುಣರೂ ಕೇಳಲೇಬೇಕಾದಂತಹುದು. ಈ ಲೇಖನ ದೇಶದ ಎಲ್ಲ ಪತ್ರಿಕೆಗಳಲ್ಲೂ ಬೆಳಕು ಕಂಡು ಇಂತಹ ಹಲವಾರು ದೀಪಗಳು ಬೆಳಗುವಂತಾಗಲಿ ಎಂದು ಹಾರೈಸುತ್ತೇನೆ. ಇಂತಹ ಪ್ರಬಲ ವ್ಯಕ್ತಿತ್ವವನ್ನು ಹೊಂದಿರುವ ಕೃಷ್ಣಮೂರ್ತಿಯವರ ಜೀವನವನ್ನು ಸಮರ್ಥವಾಗಿ, ಸಂಕ್ಷಿಪ್ತವಾಗಿ ಪ್ರಸ್ತುತಿಪಡಿಸಿದ ಶ್ರೀ ರವೀಂದ್ರ ಅವರಿಗೆ ಅನಂತ ನಮಸ್ಕಾರಗಳು.

೮. ಶ್ರೀಮತಿ ಕಮಲಾಕ್ಷಿ ಸಿ.ಆರ್ – ಬ್ರೇಕಿಂಗ್ ನ್ಯೂಸ್‌ನಲ್ಲಿ 'ಏಕಲವ್ಯನ ಗುರುದಕ್ಷಿಣೆ'

ಮಹಾಭಾರತದ ಮಹತ್ತರ ಘಟನೆಗಳಲ್ಲಿ ಒಂದಾದ ಏಕಲವ್ಯನ ಗುರುದಕ್ಷಿಣೆಯ ಪ್ರಸಂಗವನ್ನು ತತ್ಕಾಲದಲ್ಲಿ ನಡೆದ ಘಟನೆಯಾಗಿದ್ದರೆ ಹೇಗಿದ್ದಿರಬಹುದೆಂಬ ಕಲ್ಪನೆಯ ಹಿನ್ನೆಲೆಯಲ್ಲಿ ಇತ್ತೀಚೆಗೆ ವಿಪರೀತವಾಗುತ್ತಿರುವ ಬ್ರೇಕಿಂಗ್ ನ್ಯೂಸ್ ಎಂಬಂತೆ ಉಪಯೋಗಿಸಿ ಬರೆದಿರುವ ಇದು ಒಂದು ವಿಡಂಬನಾತ್ಮಕ ವಿನೋದ ಬರಹ. ಪೌರಾಣಿಕ ಪರಿಸ್ಥಿತಿಯನ್ನು ಇಂದಿನ ಸಾಮಾಜಿಕ ಪರಿಸರದ ಬೆಳಕಿನಲ್ಲಿ ಕಾಣುವ ಪ್ರಯತ್ನ ಶ್ಲಾಘನೀಯ. ಈ ಲೇಖನವನ್ನು ಪ್ರಸ್ತುತಿಪಡಿಸಿದ ಶ್ರೀಮತಿ ಕಮಲಾಕ್ಷಿ ಅವರಿಗೆ ನನ್ನ ನಮಸ್ಕಾರಗಳು.

೯. ಶ್ರೀ.ಸೀತಾರಾಮ ಕಟ್ಟಿ (ಜಾನಕಿರಾಮ) – ಮನಸಿಗಾಸರೆ ಕವಿತೆ... (ಕವನ)

ಎಂತಹ ಕಠಿಣ ಪರಿಸ್ಥಿತಿಯಲ್ಲೂ ಮನಸ್ಸಿಗೆ ಒಂದು ರೀತಿಯ ಆಸರೆಯನ್ನು ಕೊಡುವ ಶಕ್ತಿಯನ್ನು ಹೊಂದಿರುವುದು ಕವಿತೆ. ತನಗಾದ ದುಃಖ, ನೋವುಗಳನ್ನು ಮರೆಯಲು ಅನೇಕ ವಿಧದಲ್ಲಿ ಜನ ಪ್ರಯತ್ನಿಸುತ್ತಾರೆ. ಕೆಲವರು ತನ್ನವರೊದಿಗೆ ಅದನ್ನು ಹೇಳಿಕೊಂಡು ಕಳೆದುಕೊಂಡರೆ. ಮತ್ತೆ ಕೆಲವರು ಕುಳಿತು ಕಣ್ಣೀರು ಹಾಕಿ ಆ ದೇವರನ್ನು ನಿಂದಿಸುತ್ತಾರೆ. ಇನ್ನು ಕೆಲವರು ತಮ್ಮೆಲ್ಲ ನೋವನ್ನೂ ಲೇಖನಿಯ ಮೂಲಕ ಕಾಗದಕ್ಕಿಳಿಸುತ್ತಾರೆ. ಮನುಷ್ಯನ ಈ ಪ್ರಯತ್ನವೇ ಇಂದು ನಮಗೆ ಅತಿ ಶ್ರೇಷ್ಠ ಲೇಖಕರನ್ನೂ, ಕವಿಗಳನ್ನೂ ಕೊಟ್ಟಿದೆ. 'ಇತ್ತೀಚೆಗಂತೂ ಬೆಂದ್ರೆ ಮಾತ್ರ ಬೇಂದ್ರೆಯಾಗಲು ಸಾಧ್ಯ' ಎಂಬುದು ಮನೆಮಾತಾಗಿದೆ. ಅದನ್ನೇ ಸೀತರಾಮ ಕಟ್ಟಿಯವರೂ ತಮ್ಮ ಈ ಕವನದ ಪ್ರಯೋಜನ ಎನ್ನುತ್ತಾರೆ. ಇಂತಹ ಒಂದು ಸುಂದರ ಕವನವನ್ನು ಪ್ರಸ್ತುತಿಪಡಿಸಿದ ಸೀತಾರಾಮ ಕಟ್ಟಿಯವರನ್ನು ಮನಸಾರೆ ವಂದಿಸುತ್ತೇನೆ.

10. ಶ್ರೀಮತಿ.ರೇಣುಕಾ ದೇಸಾಯಿ – ಉದ್ಯೋಗಸ್ಥ ಮಹಿಳೆಗೆ ಕಿವಿಮಾತು (ಕವನ)

ಸ್ತ್ರೀ ಪರವಾದ ಕಥೆಗಳೇ ಹೆಚ್ಚಾಗಿರುವ, ಅದರಲ್ಲೂ ಹೆಣ್ಣುಮಕ್ಕಳು ಅಡುಗೆ, ಮದುವೆ, ಮುಂಜಿ, ಉಡುಗೊರೆ ಇವುಗಳ ಸುತ್ತಲೇ ಸುತ್ತುತ್ತ ಅದಷ್ಟನ್ನೇ ತಮ್ಮ ಬರವಣಿಗೆಯ ಕ್ಷೇತ್ರವಾಗಿಸಿಕೊಂಡಿರುವ ಈ ಕಾಲದಲ್ಲಿ ಈ ಕವನ ಸ್ತ್ರೀಯನ್ನು ಕುರಿತದ್ದೇ ಅದರೂ ಸ್ತ್ರೀಗೆ ಬೋಧನೆಯನ್ನು ನೀಡುವ ಕವನವಾಗಿರುವುದು ಇದರ ವಿಶೇಷ. ಸಮಾನತೆಗಾಗಿ ಹೋರಾಡುತ್ತ, ಜೀವನದ ಭದ್ರತೆಗಾಗಿ ಹೊಡೆದಾಡುವ, ಪುರುಷನಿಗೆ ತಾನು ಸಮಾನ ಎಂದು ಸ್ಪರ್ಧಿಸುವ ಈ ಕಾಲದ ಉದ್ಯೋಗಸ್ಥ ಮಹಿಳೆಯರಿಗೆ ನಮ್ಮ ಹಿಂದಿನ ತಲೆಮಾರುಗಳ ಮಹಿಳೆಯರು ಸಮಾನತೆಗಾಗಿ ಚಿಂತಿಸದೆ ತಮ್ಮ ಕರ್ತವ್ಯಗಳನ್ನು ನಿರ್ವಂಚನೆಯಿಂದ ನಡೆಸಿಕೊಂಡುಹೋಗುತ್ತ, ಅವಿಭಕ್ತ ಕುಟುಂಬವನ್ನು ಹಿಡಿದಿಡುವ ಸಾಮರ್ಥ್ಯವನ್ನು ತೋರಿಸಿ ತಮ್ಮ ಗೌರವವನ್ನು ಹೆಚ್ಚಿಸಿಕೊಂಡಿದ್ದಾರೆ. ಇದನ್ನು ಯಾವಾಗಲೂ ಮಹಿಳೆ ನೆನಪಿನಲ್ಲಿಡಬೇಕೆಂಬ ಕಿವಿಮಾತನ್ನು ಬಹಳ ಸುಂದರವಾಗಿ, ಪ್ರಭಾವಪೂರ್ಣವಾಗಿ ಪ್ರಸ್ತುತಿಮಾಡಿದ್ದಾರೆ ಶ್ರೀಮತಿ ರೇಣುಕಾ ದೇಸಾಯಿ ಅವರು. ಅವರಿಗೆ ನನ್ನ ಧನ್ಯವಾದಗಳು.

11. ಶ್ರೀಮತಿ ಪೂರ್ಣಿಮ ಭಗವಾನ್ – ಶಿಶಿರ ವಸಂತ (ಕಥೆ)

ಶ್ರೀಮತಿ ಪೂರ್ಣಿಮ ಭಗವಾನರು 'ಶಿಶಿರ ವಸಂತ' ಕಥೆಯ ಎರಡನೆ ಭಾಗವನ್ನು ಪ್ರಸ್ತುತಿಪಡಿಸಿದರು. ಕೆಲವರ್ಷಗಳ ಹಿಂದೆ ಚಲನಚಿತ್ರಗಳನ್ನು ಈ ರೀತಿಯ ಗೊಂದಲದ ಹೆಸರುಗಳಲ್ಲಿ ನೋಡುತ್ತಿದ್ದೆವು. ಹಾಗೆಯೇ ಇದೂ ಶಿಶಿರ ವಸಂತ ಎರಡೂ ಎರಡು ಋತುಗಳಿರಬಹುದೇನೋ ಎಂಬ ಶಂಕೆ ವಸಂತನ ಹೆಂಡತಿಯ ಹೆಸರು ಶಿಶಿರ ಎನ್ನುವುದರಲ್ಲಿ ನಿವಾರಣೆಯಾಗುತ್ತದೆ. ಕಥೆಯ ಮುಂದುವರಿದ ಈ ಭಾಗದ ಆರಂಭವೇ ತನ್ನ ಉತ್ತರದ ಸಮರ್ಪಕತೆಯನ್ನು ಮಂಗಳ ಯೋಚಿಸುವುದು. ಜವಾಬ್ದಾರಿಯುತ ಮಗನ, ಅವನಿಗೆ ಅನುರೂಪಳಾದ ಪತ್ನಿಯ ಚಿತ್ರದ ಜೊತೆಗೆ ಈ ಕಥೆ ಮುಖ್ಯವಾಗಿ ಹೆಣ್ಣುಮಕ್ಕಳನ್ನು ಕುರಿತು ಇಂದಿಗೂ ಹಲವೆಡೆ ಇರುವ ಅಭಿಪ್ರಾಯಗಳನ್ನು ಒತ್ತಿ ಹೇಳುತ್ತದೆ. ಸೈಕಲ್ ಸವಾರಿಯಿಂದ ಹಿಡಿದು ಯಾವುದೇ ವಿಚಾರದಲ್ಲೂ ಗಂಡುಮಕ್ಕಳಿಗಿರುವ ಸ್ವಾತಂತ್ರ ಹೆಣ್ಣು ಮಕ್ಕಳಿಗಿಲ್ಲ ಎನ್ನುವ ಧೋರಣೆ ಮಂಗಳ ಸ್ವಾವಲಂಬಿಯಾಗಲು ಪ್ರೇರೇಪಿಸುತ್ತದೆ. ಪ್ರಭಾವಪೂರ್ಣವಾದ ಈ ಪ್ರಸ್ತುತಿಗೆ ಶ್ರೀಮತಿ ಪೂರ್ಣಿಮ ಅವರಿಗೆ ನನ್ನ ನಮನಗಳು.

12. ಶ್ರೀಮತಿ ಅನ್ನಪೂರ್ಣ ಸುಬ್ಬರಾವ್ – ವೇಣಿದಾನದ ಜೊತೆ ಬಾಗಿನದ ಸಾರ್ಥಕತೆ

ಕಾಶಿಯಲ್ಲಿ ಪ್ರಚಲಿತವಾಗಿರುವ 'ವೇಣಿದಾನ' ಪೂಜೆಯ ಬಗ್ಗೆ ತಿಳಿದುಕೊಂಡ ಲೇಖಕಿಗೆ ಅದರಲ್ಲಿ ಆಸಕ್ತಿ ಬಂದು ತಾವೂ ಭಾಗವಹಿಸುವ ಪ್ರಸಂಗವನ್ನು ವಿವರಿಸುತ್ತ, ನಂತರದ ಸಮಯದಲ್ಲಿ ಅದರ ಪರ ವಿರೋಧ ಅಭಿಪ್ರಾಯ ಗಳನ್ನೂ ವಿಶ್ಲೇಷಿಸಿ ನಂಬಿಕೆ ಇದ್ದವರಿಗೆ ಅದು ಸರಿ, ಇಲ್ಲದಿದ್ದರೆ ಇಲ್ಲ ಎಂದು ಕೊನೆಗೊಳಿಸುತ್ತಾರೆ. ಪ್ರಪಂಚದಲ್ಲಿ ಪ್ರತಿಯೊಂದೂ ನಿಂತಿರುವುದು ನಂಬಿಕೆಯ ಮೇಲೆ. ತಮ್ಮ ನಂಬಿಕೆಯನ್ನು ಅನ್ನಪೂರ್ಣರವರು ತಮ್ಮ ಸರಳ ಭಾಷೆಯಲ್ಲಿ ಸುಂದರವಾಗಿ ನಿರೂಪಿಸಿದ್ದಾರೆ. ಅದಕ್ಕಾಗಿ ಅವರಿಗೆ ಧನ್ಯವಾದಗಳು.

13. ಶ್ರೀಮತಿ.ಮಾಧುರಿ ಕೃಷ್ಣ – ಫ್ಯಾಷನ್ ಸೆನ್ಸ್ ('ಯತ್ನ ಮತ್ತು ವಿಫಲತೆ' ಲೇಖನಮಾಲೆ ಬಾಗ-2)

ತನ್ನೊಡನೆ ಇದ್ದು ಬೆಳೆದು ದೊಡ್ಡವನಾದ ತಮ್ಮನ ಮಗನಿಗೆ ಹೆಣ್ಣು ತೋರಿಸುವ ಉತ್ಸಾಹದೊಂದಿಗೆ ಆರಂಭವಾದ ಪ್ರಯತ್ನಗಳ ಹಾದಿಯಲ್ಲಿ ಇಂದಿನ ಈ ಪ್ರಯತ್ನ ಎರಡನೆಯದು. ಅದೂ ವಿಫಲತೆಯ ಹಾದಿಯನ್ನು ಹಿಡಿದಾಗ ಮುಂದೆ ಮತ್ತೆ ಪ್ರಯತ್ನ ನಡೆದೀತೆ? ಮರಳಿ ಯತ್ನವ ಮಾಡು, ಮರಳಿ ಯತ್ನವ ಮಾಡು ಮಂತ್ರವನ್ನು ಶ್ರೀಮತಿ

ಮಾಧುರಿ ಅವರು ಪ್ರಯೋಗ ಮಾಡುತ್ತಾರೆಯೇ? ಮೂರನೆಯ ಯತ್ನ ಸಫಲವಾದೀತೆ? ಕಾದು ನೋಡೋಣ ಮುಂದಿನ ದಾಸೋಹದ ವರೆಗೆ! ಧನ್ಯವಾದಗಳು, ಮಾಧುರಿ ಅವರೆ.

14. ನಾಗರತ್ನ ಚಂದ್ರಶೇಖರ್ – ಕರೋನಾ ಮದುವೆ 2021

2020ರಲ್ಲಿ ಹಾಹಾಕಾರವನ್ನೆಬ್ಬಿಸಿದ ಕರೋನ ಎಂಬ ಜಾಗತಿಕ ಪಿಡುಗು, ಜನರ ಸಾಮಾಜಿಕ ಜೀವನದಲ್ಲಿ ತಂದ ಮಾರ್ಪಾಟುಗಳಲ್ಲಿ ಒಂದಾದ ಮದುವೆಯ ವಿವರವನ್ನು ಕುರಿತ ಲೇಖನ ಇದು. ಒಬ್ಬರಿಂದ ಮತ್ತೊಬ್ಬರಿಗೆ ಕರೋನ ಹರಡುವುದನ್ನು ತಪ್ಪಿಸಲು ಬಹಳ ಜನ ಒತ್ತಟ್ಟಿಗೆ ಸೇರುವುದನ್ನು ನಿಷೇಧಿಸುವುದರ ಜೊತೆಗೆ ಮುಖಗವಸುಗಳನ್ನು ಧರಿಸುವ, ಕೀಟಾಣು ನಾಶಕ ದ್ರವಗಳನ್ನು ಉಪಯೋಗಿಸುವ ವ್ಯವಸ್ಥೆ ಎಲ್ಲೆಡೆಯಲ್ಲೂ ಬಂದಿದ್ದು ಈಗಲೂ ಇನ್ನೂ ಬಳಕೆಯಲ್ಲಿರುವುದು ಎಲ್ಲರಿಗೂ ವೇದ್ಯ. ಇದು ಒಂದು ರೀತಿಯಲ್ಲಿ ಸಾಮಾಜಿಕ ಕ್ರಾಂತಿಯನ್ನೇ ಉಂಟುಮಾಡಿತು. ಕೆಲವೊಂದು ಸಂಪ್ರದಾಯಗಳಿಂದ ಉಸಿರುಕಟ್ಟಿದ್ದ ಸಮಾಜ ಉಸಿರಾಡಲು ಸಾಧ್ಯತೆಯನ್ನುಂಟುಮಾಡಿತು. ಆದರೆ ಯಾವುದೇ ರೀತಿಯ ಬದಲಾವಣೆಗಳನ್ನೂ ಸಮಾಜ ಸುಲಭವಾಗಿ ಜೀರ್ಣಿಸಿಕೊಳ್ಳುವುದಿಲ್ಲ. ಅಂತಹುದೇ ಒಂದು ಪ್ರಸಂಗದ ವಿವರಣೆ ಈ ಲೇಖನ. ಹಗುರವಾದ ಭಾಷೆಯಲ್ಲಿ ಪ್ರಸ್ತುತಪಡಿಸಿದ ಈ ಲೇಖನಕ್ಕೆ ನಾಗರತ್ನ ಚಂದ್ರಶೇಖರ್ ಅವರಿಗೆ ನನ್ನ ಧನ್ಯವಾದಗಳು.

15. ಟಿ.ಎಸ್. ಶ್ರವಣಕುಮಾರಿ – ಋಣದ ರತ್ನಗಣಿಯು (ಆಸ್ಪತ್ರೆಯ ಅನುಭವಗಳ ಮಾಲಿಕೆ)

ಎನಿತು ಜನ್ಮದಲಿ ಎನಿತು ಜೀವರಿಗೆ ಎನಿತು ನಾವು ಋಣಿಯೋ
ತಿಳಿದು ನೋಡಿದರೆ ಬಾಳು ಎಂಬುದಿದು ಋಣದ ರತ್ನ ಗಣಿಯೋ–

ಎನ್ನುವ ಜಿ.ಎಸ್.ಶಿವರುದ್ರಪ್ಪನವರ ಕವನದ ಸಾಲುಗಳು ಜೀವನದಲ್ಲಿ ನಾವು ಯಾರಾದರೊಬ್ಬರಿಗೆ ಋಣಿಯಾಗಿಯೇ ಇರುತ್ತೇವೆ ಎಂಬುದನ್ನು ಸೂಚಿಸುವಂತೆಯೇ ಶ್ರೀಮತಿ ಶ್ರವಣಕುಮಾರಿಯವರ ಆಸ್ಪತ್ರೆಯ ಅನುಭವದ ಲೇಖನ ಅಲ್ಲಿ ಅವರನ್ನು ನೋಡಿಕೊಂಡ ವೈದ್ಯರ, ದಾದಿಗಳ ನಿರ್ವಂಚನೆಯ, ನಿಸ್ವಾರ್ಥ ಸೇವೆಯನ್ನು ಗುರುತಿಸುತ್ತದೆ. ದೇಹದಲ್ಲಿ ಶಕ್ತಿಯಿರುವಾಗ, ಪ್ರಪಂಚವನ್ನೇ ಗೆಲ್ಲುವೆನೆಂಬ ಉತ್ಸಾಹವಿರುವಾಗ ಯಾರ ಹಂಗೂ ಬೇಕಿಲ್ಲ, ಯಾರ ಋಣವೂ ಬೇಕಿಲ್ಲ ಎಂದೆಲ್ಲ ಹಾರಾಡಿದರೂ, ಕೈಕಾಲು ಸೋತು ಜೀವನ ಕಷ್ಟವಾದಾಗ, "ಕಾಲಮೇಲೆ ಕೈಯನೂರಿ ಕೋಲ ಹಿಡಿಯುವಂತಾದಾಗ, ಕಣ್ಣು ಕಂಡಿದ್ದನ್ನು ಗುರುತಿಸದೆ ಹೋದಾಗ" ಇನ್ನೊಬ್ಬರ ನೆರವಿನ ಅಗತ್ಯದ ಅರಿವಾಗುತ್ತದೆ. ಈ ಹಿಂದೆಯೂ ನಮಗೇ ತಿಳಿಯದಂತೆ ಇನ್ನೊಬ್ಬರ ಮೇಲೆ ಅವಲಂಬಿಸಿದ್ದುದರ ಅರಿವೂ ಬರುತ್ತದೆ. ಯಾರೂ ಬೇಕಿಲ್ಲವೆಂಬ ಆ ಮಾತು ಹುಸಿ ಎನಿಸಿ ನಾವು ನಮ್ಮ ಜೀವನದಲ್ಲಿ ಒಬ್ಬರಲ್ಲ ಒಬ್ಬರಿಗೆ ಸದಾ ಋಣಿಯಾಗಿ ಇರುತ್ತೇವೆಂಬುದರ ಅರಿವಾಗುತ್ತದೆ. ಆಸ್ಪತ್ರೆಯಲ್ಲಿ ತಮಗೆ ಕಂಡುಬಂದ ವೈದ್ಯರ, ದಾದಿಯರ ನಡವಳಿಕೆಗಳನ್ನು ವಿಶ್ಲೇಷಿಸುತ್ತ, ಅವರೆಲ್ಲರಿಗೆ ತಾವೆಷ್ಟು ಋಣಿಯೆಂಬುದನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿದ್ದಾರೆ. ಇದು ಪ್ರತಿ ಜೀವಿಯ ಜೀವನದಲ್ಲೂ ಅನಿವಾರ್ಯ. ಹೆಂಡತಿ ಗಂಡನಿಗೆ, ಗಂಡ ಹೆಂಡತಿಗೆ, ಮಕ್ಕಳು ತಂದೆತಾಯಿಯರಿಗೆ, ತಂದೆ ತಾಯಿಯರು ಮಕ್ಕಳಿಗೆ –ಹೀಗೆ ಇಡೀ ಸಮಾಜ ಪರಸ್ಪರ ಋಣದ ಮೇಲೇ ನಿಂತಿದೆ ಎಂಬ ಮಾತು ಸತ್ಯ.

ಹೊಟ್ಟೆಯಲಿ ತೊಟ್ಟಿಲಲಿ ತಾಯ ಋಣ
ತನ್ನ ಹುಟ್ಟಿಸಿದಾ ಋಣ ತಂದೆಯಲಿ
ಆಟಪಾಟದಲಿ ಒಡಹುಟ್ಟಿದರ ಋಣ
ವಿದ್ಯೆ ಕಲಿಯುವ ಋಣ ಗುರುಗಳಲಿ
ಬಾಯಿಲೆಗೆ ಮದ್ದಪಡೆದ ಋಣ ವೈದ್ಯರಲಿ

ಒಂದೇ ಎರಡೇ- ಹೀಗೇ ಹೇಳುತ್ತ ಹೋದಷ್ಟೂ ಪಟ್ಟಿ ಬೆಳೆಯುತ್ತದೆ. ನಮ್ಮ ನಿಮ್ಮೆಲ್ಲರ ಚಿಂತನೆಗೆ ಆಹಾರವನ್ನೊದಗಿಸುವ ಲೇಖನವನ್ನಿತ್ತ ಶ್ರವಣಕುಮಾರಿ ಅವರಿಗೆ ಅನಂತ ಧನ್ಯವಾದಗಳು

16. ಭ.ರಾ. ವಿಜಯಕುಮಾರ – ಹೆಬ್ಬಯಕೆ (ಕವನ)

ಭ.ರಾ.ವಿಜಯಕುಮಾರ್ ಅವರು ಪುರಾಣ ಕಾವ್ಯಗಳ ನೆರಳಿನಲ್ಲಿ ಅತಿ ಸುಂದರವಾದ ಕವನವನ್ನು ಸೃಷ್ಟಿಸಿ ಇಂದು ಪ್ರಸ್ತುತಿಪಡಿಸಿದ್ದಾರೆ. ಕವನದ ಆಂತರ್ಯದ ಸೊಗಸನ್ನು ಹೇಳದಿದ್ದರೆ ಕವನಕ್ಕೆ ಅನ್ಯಾಯವಾದೀತು.

ಒಂದೇ ಗುಟುಕಿಗೆ ಸಮುದ್ರದ ನೀರನ್ನು ಕುಡಿದ ಅಗಸ್ತ್ಯನಂತೆ ಅಕ್ಷರ ಸಮುದ್ರವನ್ನು ಕುಡಿಯುವಾಸೆ
ಧುಮ್ಮಿಕ್ಕಿ ಬರುವ ಗಂಗೆಯನು ಜಟಾಜೂಟದಲ್ಲಿ ತಡೆಹಿಡಿದರೂ ತನ್ನ ಪಿತೃಗಳಿಗಾಗಿ ತಪಸ್ಸು ಮಾಡಿದ ಭಗೀರಥನಿಗೆ ಧಾರೆಯೆರೆದು, ಹರಿದು ಪವಿತ್ರವಾಗಿಸುವಾಸೆ.
ರಾಮಬಾಣದಿಂದ ನೀರನ್ನು ಉಕ್ಕಿಸಿದ ಹಾಗೆ, ಜೀವನದ ಸಾರವನ್ನು ಸೋಸಿ ಹಿಡಿಯುವಾಸೆ.
ಮಥನದ ಕಡೆಗೋಲನಾಸರೆಯು ನಾನಾಗಿ ಅಮೃತದ ಸಾರವನ್ನು ಜಗಕೆ ಹಂಚುವಾಸೆ.
ಕುಮಾರವ್ಯಾಸನಂತೆ ಅರಿವು ತೀವವಾಗಿರುವಾಗಲೇ ಪದಪದಕ್ಕೂ ರೂಪಕವನ್ನು ಸೃಷ್ಟಿಸುವ ಆಸೆ.

ಹರಿಶ್ಚಂದ್ರನ ಕಾವ್ಯ ಬರೆದು ಹರಿಹರನಿಂದ ತನ್ನ ಐದೂ ಹಲ್ಲುಗಳನ್ನು ಕಳೆದುಕೊಳ್ಳುವ ಸ್ಥಿತಿ ಬಂದರೂ ರಾಘವಾಂಕ, ಹರಿಹರನ ಹೇಳಿಕೆಯಂತೆ ಸಿದ್ಧರಾಮಚಾರಿತ್ರ, ಸೋಮನಾಥ ಚಾರಿತ್ರ, ವೀರೇಶ್ವರ ಚರಿತ, ಹರಿಹರಾಮೃತ ಮತ್ತು ಶರಭ ಚಾರಿತ್ರ ಎಂಬ ಐದು ಕೃತಿಗಳನ್ನು ರಚಿಸಿ ತನ್ನ ಕಳೆದುಕೊಂಡ ಹಲ್ಲುಗಳನ್ನು ಸಂಪಾದಿಸಿದ ಎಂಬ ದಂತ ಕಥೆಯಿದೆ. ಅವನಂತೆಯೇ ತಾವೂ ಸತ್ಯಕಥೆಯನ್ನು ಹೇಳುವ ಆಸೆ. ಮುದ್ದಣ ಮನೋರಮೆಯ ಸಂವಾದದಿಂದ ರಾಮಾಶ್ವಮೇಧಕ್ಕೆ ಸುವರ್ಣ ಚೌಕಟ್ಟನ್ನು ನಿರ್ಮಿಸಿದ ಮುದ್ದಣನಂತೆ ಎಲ್ಲರ ಭಾವವನ್ನೂ ಹಿಡಿಯುವಾಸೆ. ಕೊನೆಯದಾಗಿ ಮೈಮೇಲೆ ಹುತ್ತ ಬೆಳೆದರೂ ರಾಮಾಯಣದಂತಹ ಅಮರ ಕಥೆಯನ್ನು ಪ್ರಪಂಚಕ್ಕಿತ್ತ ವಾಲ್ಮೀಕಿಯಂತೆ ಜಗತ್ತೆಲ್ಲ ಪಸರಿಸುವ ಆಸೆ.

ಅಗಾಧ ಆಸೆಗಳನ್ನು ಹೊತ್ತ ಕವಿಗೆ ಜೀವನದಲ್ಲಿ ಎಲ್ಲ ರೀತಿಯ ಸಂತೃಪ್ತಿ ದೊರಕಲಿ. ಇಂತಹ ಪುರಾಣ ಕಾವ್ಯ ಗಳನ್ನೆಲ್ಲ ಒಂದೇ ಕವನದಲ್ಲಿ ಕಟ್ಟಿಕೊಟ್ಟ ಭ.ರಾ ವಿಜಯಕುಮಾರ್ ಅವರಿಗೆ ಹೃತ್ಪೂರ್ವಕ ನಮನಗಳು. ಕವನದ ಮೊದಲ ಚರಣವನ್ನುಳಿದು ಇತರ ಚರಣಗಳ ಲಯವನ್ನು ಮತ್ತೊಮ್ಮೆ ಪರಿಶೀಲಿಸಲೆಂಬುದು ನನ್ನ ನಮ್ರ ವಿನಂತಿ.

17. ಶ್ರೀಮತಿ ಮಾಲತಿ ಶ್ರೀನಿವಾಸನ್ – ಸುಳಿಯೊಳು ಸಿಲುಕಿದೆ ಅಂಬಿಗ (ಸಣ್ಣಕತೆ)

ಶ್ರೀಮತಿ ಮಾಲತಿ ಶ್ರೀನಿವಾಸ್ ಅವರು 'ಸುಳಿಯೊಳು ಸಿಲುಕಿದೆ ಅಂಬಿಗ' ಕಥೆಯ ಮೊದಲ ಭಾಗವನ್ನು ಇಂದು ಪ್ರಸ್ತುತಪಡಿಸಿದರು. ಕಥಾನಾಯಕಿ ವಸುಂಧರಳಿಗೆ ಸಾಕಷ್ಟು ಬೆಂಬಲ ದೊರಕದೆ ಪ್ರಸಿದ್ಧ ಗಾಯಕಿಯಾಗ ಬಹುದಾಗಿದ್ದ ಅವಕಾಶ ಕಳೆದುಹೋಗಿ ಅದೊಂದು ಕನಸಾಗಿ ಉಳಿದುದರ ಚಿತ್ರಣ. ಇಂದಿಗೂ ಹೆಣ್ಣುಮಕ್ಕಳು 'ನಿಷೇಧಗಳ' ಪಟ್ಟಿಯನ್ನು ಆಧರಿಸಿಯೇ ನಡೆಯಬೇಕಾದ ಪರಿಸ್ಥಿತಿಯ ವರ್ಣನೆ ಸರಳ ನಿರೂಪಣೆಯೊಂದಿಗೆ ಬಂದಿದೆ. ಎರಡನೆಯ ಭಾಗವನ್ನು ಲೇಖಕಿ ಹೇಗೆ ತೆಗೆದುಕೊಂಡು ಹೋಗುತ್ತಾರೆಂದು ಕಾದು ನೋಡೋಣ. ಧನ್ಯವಾದಗಳು ಮಾಲತಿ ಅವರೆ.

18. ಶ್ರೀಮತಿ. ಸರಸ್ವತಿ ನಟರಾಜ್ – ನಿರಾಕರಣ

ತಂದೆ ತಾಯಿ ಹುಡುಗಿಗೆ ಮದುವೆ ಮಾಡಲು ಹಲವಾರು ವರ್ಷಗಳು ಯತ್ನಿಸಿಯೂ ಹುಡುಗಿ ಅವಿವಾಹಿತಳಾಗಿ ಉಳಿದಾಗ ತಂದೆ ತಾಯಿಯರಿಗಾಗುವ ಮನೋವೇದನೆ, ಮದುವೆಯಾದರೆ ಅವಳ ಜೀವನ ಸಂಪನ್ನವಾಗುತ್ತದೆ ಎನ್ನುವ ಧೋರಣೆ, ಇವೆಲ್ಲವನ್ನೂ ಕಟ್ಟಿಕೊಡುವ ಜೊತೆಗೆ, ಕೊನೆಯ ಹಂತದ ತನಕ ಸುಮ್ಮನಿದ್ದು ತನ್ನ ಮನದಿಂಗಿತವನ್ನು ತಿಳಿಸಿ ಮದುವೆಯ ಬಂಧನದಿಂದ ಮುಕ್ತಿಯನ್ನು ಪಡೆದ ಹೆಣ್ಣುಮಗಳು ಯಾವ ಅಪರಾಧವೂ ಇಲ್ಲದ ಹುಡುಗನೊಬ್ಬನನ್ನು ತೊಂದರೆಗೆ ಸಿಲುಕಿಹಾಕಿಸುವ ಸಂದರ್ಭ, ಆ ಹುಡುಗ ಮತ್ತೆ ಮದುವೆಯಾಗಬೇಕಾದರೆ ಎದುರಿಸಬೇಕಾಗಿ ಬರುವ ಸಮಸ್ಯೆಗಳು, ಒಮ್ಮೆ ನಿರಾಕರಣಕ್ಕೆ ಒಳಗಾದ ಹುಡುಗ ಯಾರಾದರೂ ಸರಿ ಎಂದು ಮದುವೆಗೆ ಸಿದ್ಧವಾಗುವ ಸನ್ನಿವೇಶ, ಎಲ್ಲವನ್ನೂ ಮೀರಿ ಒಮ್ಮೆ ನಿರಾಕರಿಸಲ್ಪಟ್ಟ ಹುಡುಗ ತನ್ನನ್ನು ಒಪ್ಪಿದಾಗ ಏಳಬಹುದಾದ ಅನುಮಾನಗಳು ಇವೆಲ್ಲವನ್ನೂ ಸಮರ್ಥವಾಗಿ ಚಿತ್ರಿಸಿದ್ದಾರೆ ಸರಸ್ವತಿ ನಟರಾಜ್ ಅವರು. ಅವರಿಗೆ ಅನಂತ ಧನ್ಯವಾದಗಳು.

19. ಶ್ರೀಮತಿ ಸ್ನೇಹ ಶಶಿಧರ – ಸುಂದರ ಸಂಡೂರು

ಸುಂದರ ಸಂಡೂರು, ಲೇಖನದ ಹೆಸರೇ ಹೇಳುವಂತೆ ಸಂಡೂರಿನ ಸುತ್ತಮುತ್ತಲ ರಮಣೀಯ ಪ್ರದೇಶದ ವರ್ಣನೆ. ಸಂಡೂರು ಗಣಿಗಾರಿಕೆಯ ಕೇಂದ್ರ ಬಿಂದು ಎಂಬುದನ್ನು ತಿಳಿದು ಚಿಂತಿತವಾದ ಮನಸ್ಸು ಸುತ್ತಮುತ್ತಲ ಪ್ರಕೃತಿ ರಮಣೀಯತೆಯನ್ನು ನೋಡಿದ ಕೂಡಲೆ ಸಂತಸಪಟ್ಟಿತು ಎನ್ನುವ ಲೇಖಕರು, ಖ್ಯಾತ ನಿರ್ದೇಶಕ ಪುಟ್ಟಣ್ಣ ಕಣಗಾಲ್ ಅವರು ಈ ಸ್ಥಳಕ್ಕೆ "ಮಾನಸ ಸರೋವರ" ಎಂದು ಹೆಸರಿಟ್ಟಿದ್ದನ್ನು ನೆನಪಿಸುತ್ತಾರೆ. ಇಲ್ಲಿ ಪ್ರತಿ 12 ವರ್ಷಗಳಿಗೊಮ್ಮೆ ಅರಳುವ 'ನೀಲಕುರಿಂಜಿ' ಹೂವಿನ ಬಗೆಗೆ ತಿಳಿಸುತ್ತಾರೆ. ಸಾಕಷ್ಟು ಚಾರಿತ್ರಿಕ, ಪೌರಾಣಿಕ ಹಿನ್ನೆಲೆಯನ್ನೂ ಒದಗಿಸುವ ಈ ಲೇಖನ ಸ್ನೇಹರವರ ಲೇಖನಿಯಿಂದ ಸಶಕ್ತವಾಗಿ ಹೊರಬಂದಿದೆ. 'ತುಂಗೆಯ ತಂಗಿ ನಾರಿಹಳ್ಳ, ಮೋಡಗಳ ಚುಂಬನದಿಂದ ಗಿರಿಧಾಮ ನಾಚಿ ಸಣ್ಣಪುಟ್ಟ ಝರಿಗಳು ಸೂಸುತ್ತಿದ್ದವು' ಹೇಳಿಕೆಗಳು ಮನಸ್ಸಿಗೆ ಮುದಕೊಡುತ್ತವೆ. ಸಂಡೂರಿನ ಯಾತ್ರೆಯನ್ನು ಸಫಲಗೊಳಿಸುತ್ತವೆ.

ಒಂದು ಮಾತು: ಇವರು ಹೆಸರಿಸಿರುವ 'ನೀಲಕುರಿಂಜಿ' ಹೂವಿನ ಬಗ್ಗೆಯೇ ಒಂದು ಸ್ವತಂತ್ರ ಲೇಖನವನ್ನು ತಯಾರಿಸುವಷ್ಟಿದೆ. ಶ್ರೀಮತಿ ಸ್ನೇಹ ಅವರ ಲೇಖನಿ ಇದನ್ನು ನಮಗೆ ಹರಿಸುತ್ತದೆಂದು ಆಶಿಸೋಣ. ಸ್ನೇಹ ಅವರಿಗೆ ನನ್ನ ನಮನಗಳು.

20. ಶ್ರೀಮತಿ.ಶೀಲಾ ಅರಕಲಗೂಡು – ಹೀಗೊಂದು ಪ್ರೇಮಗೀತೆ (ಕವನ)

ಶೀಲಾ ಅರಕಲಗೂಡು ಅವರು ' ಹೀಗೊಂದು ಪ್ರೇಮಗೀತೆ' ಕವನವನ್ನು ಪ್ರಸ್ತುತಿಪಡಿಸಿದ್ದಾರೆ.

ಪ್ರೇಮದ್ಗೀತೆ ಬರ್ಯೋ ಆಸೆ ಇಲ್ಲೀತನ್ಕ ಮೂಡ್ಲೇ ಇಲ್ಲ ಅನ್ಕೊಂಡೇನೇ ಉದ್ದನೇ ಪ್ರೇಮದ್ಗೀತೆ ಬರ್ದುಟ್ಟವ್ರೆ. ಬರಿ ಬರ್ದಿದ್ದೇ ಅಲ್ಲ ಅದ್ನ ಅಂಗೇ ಯೋಚ್ಸೂ ಅವ್ರೆ. 'ಸೋಹಂ ಸೋಹಂ ಅನ್ಲೀಕ್ಹತ್ತೀನಿ' ಅಂದ್ಬುಟ್ಟಿ ತಮ್ಮ ಮನಸ್ನಾಗೆ ಕುಂತ್ಕಂಡಿರೋ ದ್ಯಾವ್ರನ್ನ ಕ್ರುಪೆ ಮಾಡಕ್ಕೇಳ್ಕಂಡವ್ರೆ. ಜಿ.ಪಿ ರಾಜರತ್ನಂ ಅವ್ರ ಗೀತೆಗೋಳ್ತರಾ ಬರ್ದವ್ರೆ ಅಂತೀನಿ. ಕಾಗುಣಿತ ಎಲ್ಲ ಸೇರಿಸ್ಕಂಡಿ. ಅಲ್ಲಿ ಎಂಡ್ಕುಕ ರತ್ನ ಬರಿದ್ರೆ ಇಲ್ಲಿ ಸೀಲ ಅವ್ರು ಬರದವ್ರೆ. ತಮ್ಮನಸೀನ ಬಾವ್ನೆಗೋಳ್ನೆಲ್ಲ

ಆ ದ್ಯಾವ್ರತಾಕ್ಕ ಏಳ್ಕಂಡವ್ರೆ. ಅವನ ಕರ್ಣೆ ಅವರ್ಗೆ ಬೇಗ ಸಿಗ್ಲಿ ಅಂತ ಅರಸ್ಕೊಂತೀನಿ. ಪದ ಸಂದಾಗದೆ ಕಣವ್ವ. ಇನ್ನೂ ಇಂಗೇ ಬರೀತಾನಿರು. ದ್ಯಾವ್ರು ಒಳ್ಳೇದ್ಮಾಡ್ಲಿ. ಸರಣು ಕಣವ್ವ.

21. ಶ್ರೀ ವೆಂಕಟೇಶ ಕಾಮತ್ – ಕನ್ನಡದಲ್ಲಿ ಪತ್ತೇದಾರಿ ಕಾದಂಬರಿ ಹುಟ್ಟು ಬೆಳವಣಿಗೆ

ಬಾಲಸರಸ್ವತಿ ಎನ್ನುವ ಹೆಸರು ಸಿಕ್ಕಿತಾದರೂ ಅದು ಕೃತಿಯ ಹೆಸರೋ ಲೇಖಕರ ಹೆಸರೋ ಎನ್ನುವ ಅನುಮಾನ ಹಾಗೇ ಉಳಿದಿದೆ ಎನ್ನುತ್ತಾರೆ. ನನಗೆ ತಿಳಿದಂತೆ ಅದೊಂದು ಲೇಖಕರ ಹೆಸರು. ಇದರ ಬಗೆಗೆ ಹೆಚ್ಚು ತಿಳಿದವರು ದಯವಿಟ್ಟು ಇದರ ಮೇಲೆ ಬೆಳಕು ಚೆಲ್ಲಬೇಕಾಗಿ ವಿನಂತಿ. ಅಲ್ಲಿಂದ ಮುಂದೆ ಕನ್ನಡದ ಪತ್ತೇದಾರಿ ಕಾದಂಬರಿಕಾರರಲ್ಲಿ ನರಸಿಂಹಯ್ಯ, ಸುದರ್ಶನ ದೇಸಾಯಿ ಹಾಗೂ ಟಿ.ಕೆ ರಾಮರಾವ್ ಅವರ ಬಗ್ಗೆ ತಿಳಿಸುತ್ತಾರೆ. ಮೂರೂ ಜನರ ಜೀವನ ಪರಿಚಯವನ್ನು ಮಾಡಿಕೊಟ್ಟದ್ದರ ಜೊತೆಗೆ ಸುದರ್ಶನ ದೇಸಾಯಿ ಅವರು ಪತ್ತೇದಾರಿ ಕಾದಂಬರಿಗಳ ಜೊತೆಗೆ ಉಳಿದ ಸಾಹಿತ್ಯ ಪ್ರಕಾರಗಳಲ್ಲೂ ಹೆಸರು ಗಳಿಸಿದ್ದು ಹಾಗೂ ಅವರು ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪಡೆದ ವಿವರವನ್ನೂ ತಿಳಿಸುತ್ತಾರೆ. ಮೂರನೆಯವರಾಗಿ ಬಹು ಜನಪ್ರಿಯ ಪತ್ತೇದಾರಿ ಕಾದಂಬರಿಕಾರರಾದ ಟಿ.ಕೆ.ರಾಮರಾಯರ ಜೀವನ ವೃತ್ತಾಂತದ ಜೊತೆಗೆ ಅವರ ಸಾಹಿತ್ಯ ಕೃಷಿಯ ವಿವರವನ್ನೂ ಒದಗಿಸಿದ್ದಾರೆ. ಹೆಚ್ಚುಕಡಿಮೆ ಮರೆತೇಹೋಗಿರುವ ಈ ಮಹನೀಯರುಗಳನ್ನು, ನೆನಪಿಸಿ ಅವರ ಕೃತಿಗಳನ್ನು ಮತ್ತೆ ಓದಲು ಪ್ರೇರೇಪಿಸುತ್ತದೆ ಈ ಲೇಖನ. ವೆಂಕಟೇಶ್ ಕಾಮತ್ ಅವರಿಗೆ ಅನಂತ ಧನ್ಯವಾದಗಳು.

"ಧಾರಾವಾಹಿ 'ಅದಾಲತ್' ಬರಲು ಪ್ರಾರಂಭವಾದಾಗ ನನಗೆ ನನ್ನ ತಂದೆಯವರ ಪತ್ತೇದಾರಿ ಕಥೆಗಳ ಒಲವು ತಿಳಿದು ಬಂದಿತು. ಅವರು ಅದನ್ನು ಬಹಳವೇ ಕಾತುರದಿಂದ ಕಾದು ತಮ್ಮ ಕೊಲೆಪಾತಕನ ಬಗ್ಗೆ ಊಹೆ ಸರಿಯಾದಲ್ಲಿ ಅವರ ಮೊಗದ ಮೇಲೆ ಬರುವ ಸಂತಸ ಖುಷಿ ನಾನು ಊಹಿಸಿಯೇ ಇರಲಿಲ್ಲಾ…" ಈ ಮಾತುಗಳು ನಮಗೆ ವೆಂಕಟೇಶ ಕಾಮತ್ ಅವರ ತೀರ್ಥರೂಪುರವರ ಚಿತ್ರವನ್ನು ಊಹಿಸಿಕೊಳ್ಳುವಂತೆ ಮಾಡುತ್ತದೆ

22. ಶ್ರೀ ಗೋವರ್ಧನ ಗಿರಿ ಜೋಷಿ, ಇಂಗ್ಲೆಂಡ್ – ಎರಡು ಕವಿತೆಗಳು

ಕವನ–1: 'ಕನ್ನಡ': ಇಂಗ್ಲೆಂಡಿನ ಗೋವರ್ಧನ ಗಿರಿ ಜೋಷಿಯವರು ಪ್ರಸ್ತುತಿಪಡಿಸಿದ ಮೊದಲ ಕವನ "ಕನ್ನಡ". ಕನ್ನಡ ಭಾಷೆಯ ಔನ್ನತ್ಯವನ್ನು ಹೊಗಳುತ್ತ ಕೊನೆಗೆ ಹೇಳುವ ಸಾಲುಗಳು ಮೆಚ್ಚತಕ್ಕಂತಹವುಗಳು.

> "ನಾವು ಕನ್ನಡ ಉಳಿಸುವುದಂತೆ
> ಬೆಳೆಸುವುದಂತೆ ಅದೆಲ್ಲವೂ
> ಹಸಿ ಸುಳ್ಳಿನ ಕಂತೆ
> ಕನ್ನಡವೋ ದಿನ ಬೆಳಗುವ
> ಆ ಸೂರ್ಯನಿದ್ದಂತೆ"

ಕನ್ನಡವನ್ನು ನಾವು ಉಳಿಸುತ್ತೇವೆ ಅಲ್ಲ, ಕನ್ನಡ ತನ್ನನ್ನೆ ತಾನು ಬೆಳಗಿಸಿಕೊಳ್ಳುತ್ತದೆ ಎನ್ನುವುದು ಕವಿಯ ಭಾವ.

ಕವನ–2: 'ಓ ನಲ್ಲೆ': ಪ್ರೇಯಸಿಯನ್ನು ಕುರಿತು ಬರೆದಂತೆ ತೋರುವ ಈ ಕವನ ಕೊನೆಗೆ ಬರುತ್ತಿದ್ದಂತೆ "ತಾಳ ತಂಬೂರಿ ಒಪ್ಪಿ ಹಾಡಲು ಕುಳಿತಿರುವೆನು ಮದನಾರಿ ಈ ಜೀವನವೆಂಬ ಸಂಗೀತ ಕಛೇರಿ" ಎಂದು ಮುಗಿಸುತ್ತಾರೆ, ಎರಡು ಸುಂದರ ಕವನಗಳನ್ನು ಪ್ರಸ್ತುತಿ ಮಾಡಿದ ಗೋವರ್ಧನ ಗಿರಿ ಜೋಷಿ ಅವರಿಗೆ ಅನಂತ ಧನ್ಯವಾದಗಳು.

23. ಪ್ರಮೋದಾ ಮೂರ್ತಿ – ಬಂಧು (ಕವನ)

ಛಂದಸ್ಸಿನ ಯಾವ ಬಂಧಕ್ಕೂ ಒಳಗಾಗದೆ ರಚಿತವಾದ ಕವನ. ವಯಸ್ಸಾದ ವೃದ್ಧರು ಮಕ್ಕಳ ಸಾಂತ್ವನದ ಮಾತುಗಳನ್ನು ನಿರೀಕ್ಷಿಸಿ ನಿರಾಶರಾದಾಗ ತನ್ನೆಲ್ಲ ಕೆಲಸಗಳನ್ನೂ ಬದಿಗಿಟ್ಟು ಇನಿತೂ ಬೇಸರಿಸದೆ ಅವರ ಸೇವೆಯನ್ನು ಮಾಡಿದ ವ್ಯಕ್ತಿಗೆ ಕೃತಜ್ಞತೆಯನ್ನು ತೋರಿಸುತ್ತ ಮನದ ಭಾವಗಳನ್ನು ಬಿಂಬಿಸುವುದು ಈ ಕವನದ ಉದ್ದೇಶ. ಸಾವನ್ನು ಎದುರಿಸುವ ಆ ಕೊನೆಯ ಗಳಿಗೆಯಲ್ಲೂ ನೈಟಿಂಗೇಲಳಂತೆ ಬಳಿ ಬಂದು ಮಕ್ಕಳ ಕೊರೆಯನ್ನು ನೀಗಿದ ಆಕೆಯ ಸವಿನೆನಪು. ಮಕ್ಕಳು ಬಳಿಯಲ್ಲಿಲ್ಲದ ದುಃಖ ಒತ್ತರಿಸಿ ಬಂದಾಗ, ಎದೆಯನೊತ್ತಿ ಒತ್ತಿಬರುವ ಬಿಕ್ಕು! ಅಷ್ಟರಲ್ಲಿ ಅವರ ಮುಖ ನೇವರಿಸಿ ಎತ್ತಿ ಕೂರಿಸಿ ನೀರುಣಿಸಿದ ಕಾಣದ ಕೈ ಉಣಿಸಿದ ಒಂದೊಂದು ಗುಟುಕೂ ಅಮೃತವಾಗುತ್ತಿದೆ. ಇಲ್ಲಿ ಈ ಕಾಣದ ಕೈ ಯಾವುದಾದರೂ ಆಗಿರಬಹುದು. ತನ್ನನ್ನು ಸಮೀಪಿಸುತ್ತಿರುವ ಮೃತ್ಯು ಈ ಬೇನೆಗಳಿಂದ ಮುಕ್ತಿಕೊಡುವ ಹರಿಕಾರನಾಗಿ ಬಂದು ಕಣ್ಣೊರೆಸುತ್ತಿರಬಹುದು, ಇಲ್ಲ ತಮ್ಮ ಆರೈಕೆ ಮಾಡುತ್ತಿದ್ದ ದಾದಿಯಲ್ಲೇ ತಮ್ಮ ಇಷ್ಟದೈವವನ್ನು ಕಾಣುವ ಪ್ರಯತ್ನವಿರಬಹುದು, ಅಥವಾ ತಮ್ಮ ಆರಾಧ್ಯದೈವ ತಮ್ಮ ಈ ಅಸಹಾಯಕತೆಗೆ ಕರುಣಿಸಿ ಬಂದು ಸಾಂತ್ವನಗೈಯುವುದಾಗಿರಬಹುದು. 'ಅನಾಥೋ ದೈವ ರಕ್ಷಕಃ' 'ನೀನೇ ಅನಾಥಬಂಧು ಕಾರುಣ್ಯ ಸಿಂಧು' ಮಾತುಗಳ ಅನುಭವ ಇಲ್ಲಾಗುತ್ತದೆ.

ಉಪನಿಷತ್ತಿನ ವಾಕ್ಯ ಇಲ್ಲಿ ನೆನಪಿಸಿಕೊಳ್ಳಬಹುದು

अयं निजः परो वेति गणना लघुचेतसाम्।
(Ayam Nijah Paro Veti Ganana Laghuchetasam)

उदारचरितानां तु वसुधैव कुटुम्बकम्॥
(Udaracharitanam Tu Vasudhaiva Kutumbakam)

ಸಂಕುಚಿತ ಮನೋಭಾವದವರಿಗೆ ನನ್ನ, ನಿನ್ನ ಎಂಬುದೆಲ್ಲ ಇರುತ್ತದೆ. ಆದರೆ ಉದಾರ ಮನಸ್ಸುಳ್ಳವರಿಗೆ ಇಡೀ ಭೂಮಿಯೇ ಒಂದು ಕುಟುಂಬವಾಗುತ್ತದೆ.

ಇಂದಿನ ದಾಸೋಹದ ಪ್ರಸ್ತುತಿಗಳಲ್ಲಿ ಮಹಿಳೆಯರ ಬಹುಮತವಿರುವುದು ನನಗೆ ತುಂಬ ಸಂತೋಷ ತಂದಿದೆ. ನನ್ನ ಒಂದು ಸಲಹೆಯನ್ನು ಸಮಿತಿಯ ಮುಂದಿಡಬಯಸುತ್ತೇನೆ. ನಮ್ಮ ಸಮಿತಿಯ ಸದಸ್ಯರ ಸಂಖ್ಯೆ ಹೆಚ್ಚುತ್ತಿರುವುದು ಸಂತಸದ ಸಂಗತಿ. ಈ ದಾಸೋಹ ಸಾಹಿತ್ಯವನ್ನು ಎರಡು ಭಾಗವಾಗಿಸಿ ನಡೆಸಿದರೆ ಪ್ರತಿ ಪ್ರಸ್ತುತಿಯ ವಿಶ್ಲೇಷಣೆಗೂ ಸಾಕಷ್ಟು ಸಮಯ ದೊರಕುವುದರ ಜೊತೆಗೆ ಅತಿ ದೀರ್ಘಾವಧಿ ಇರುವುದೂ ತಪ್ಪುತ್ತದೆ. ಸಾಹಿತ್ಯ ದಾಸೋಹದ ಮೊದಲ ಭಾಗದ ಅಧ್ಯಕ್ಷರೇ ಎರಡನೆಯದಕ್ಕೂ ಇರುವ ಅವಕಾಶವಿದ್ದರೆ ಅವರನ್ನೇ ವಿನಂತಿಸಿಕೊಳ್ಳುವುದು. ಇದರಿಂದ ಮತ್ತೆ ಅಹ್ವಾನ ಪತ್ರಿಕೆಯನ್ನು ಸಿದ್ಧಮಾಡುವ ಕಾರ್ಯ ಕಡಿಮೆಯಾಗುತ್ತದೆ. ಒಂದೇ ಪತ್ರಿಕೆಯಲ್ಲಿ ಎರಡೂ ದಿನಾಂಕಗಳನ್ನೂ ನಮೂದಿಸಬಹುದು. ಇದನ್ನು ಕುರಿತು ಸಮಿತಿ ಅಲೋಚಿಸಬೇಕೆಂದು ನನ್ನ ವಿನಂತಿ. ನೆನ್ನೆ ಇದನ್ನು ಶ್ರೀ ಮಹಾಬಲ ಅವರಲ್ಲಿ ವಿನಂತಿಸಿಕೊಂಡಾಗ ಅವರು ಇಂದಿನ ಸಭೆಯಲ್ಲೇ ತಿಳಿಸುವಂತೆ ಆದೇಶವಿತ್ತರು.

ಇಲ್ಲಿಗೆ ಎಲ್ಲ ಪ್ರಸ್ತುತಿಗಳೂ ಮುಗಿದವು. ಒಂದೆರಡು ಮಾತುಗಳನ್ನಾಡಿ ಇದುವೆರೆಗೆ ನಿಮ್ಮ ಮೆದುಳನ್ನು ಕೊರೆದ ನಾನು ನನ್ನ ಒಂದು ಅಣಕು ಕವಿತೆಯಿಂದ, ಸ್ವಲ್ಪ ಹಗುರಾಗಿಸುವ ಯತ್ನಮಾಡಬೇಕೆಂದಿದ್ದೆ. ಆದರೆ ಸಮಯಾಭಾವ ದಿಂದ ಇಲ್ಲಿಗೆ ನನ್ನ ಬಾಲಿಶ ಭಾಷೆಯ ಆಲಾಪವನ್ನು ಮುಗಿಸುತ್ತೇನೆ. ನನಗೆ ಅವಕಾಶ ಕೊಟ್ಟದ್ದಕ್ಕಾಗಿ ಅನಂತ ಧನ್ಯವಾದಗಳು.

***